ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 12 ಮಂಗಳವಾರ 2022

ಸಂಪುಟ: 43 | ಸಂಚಿಕೆ: 87 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಆಷಾಢ ಶುಕ್ರವಾರಗಳಂದು ಚಾಮುಂಡಿಬೆಟ್ಟಕ್ಕೆ ವಾಹನ ಪಾಸ್ ರದ್ದು



ಮೈಸೂರು, ಜು.11(ಆರ್‌ಕೆ)– ಆಷಾಢ ಶುಕ್ರವಾರಗಳು (ಜು.15 ಮತ್ತು ಜು.22) ಹಾಗೂ ಜು.20ರ ಶ್ರೀ ಚಾಮುಂಡೇಶ್ವರಿ ವರ್ಧಂತಿ ಉತ್ಸವಕ್ಕೆ ಚಾಮುಂಡಿ ಬೆಟ್ಟಕ್ಕೆ ತೆರಳಲು ಖಾಸಗಿ ವಾಹನಗಳಿಗೆ ಪಾಸ್ ನೀಡುವುದಿಲ್ಲ ಎಂದು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ತಿಳಿಸಿದ್ದಾರೆ. ಈ ಹಿಂದೆ ನೀಡುತ್ತಿದ್ದ ವಾಹನ ಪಾಸ್ ವ್ಯವಸ್ಥೆ ರದ್ದುಗೊಳಿಸಲಾಗಿದ್ದು, ನಗರ ಸಾರಿಗೆ ಬಸ್‌ಗಳಲ್ಲಿ ಮಾತ್ರ ಬೆಟ್ಟಕ್ಕೆ ಪ್ರಯಾಣಿಸಿ ನಿರ್ದಿಷ್ಟ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಮಾಡಿ, ಹಿಂದಿರುಗುವಂತೆ ತಿಳಿಸಿದ್ದಾರೆ.

ಕಾಂಗ್ರೆಸ್‌ನಲ್ಲಿ ಈಗ ಟಿಕೆಟ್ ರಾಜಕೀಯ ಜೋರು!

ನಮಗೊಂದು ನಮ್ಮವರಿಗೊಂದು...!!

ಆರ್.ವಿ.ದೇಶಪಾಂಡೆ, ಶಾಮನೂರು ಶಿವಶಂಕರಪ್ಪ, ಹೆಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿ, ಲಕ್ಷ್ಮೀ ಹೆಬ್ಬಾಳ್ಕರ್, ಟಿ.ಬಿ.ಜಯಚಂದ್ರ ತಮ್ಮವರಿಗೆ ಟಿಕೆಟ್‌ಗಾಗಿ ಕಾಂಗ್ರೆಸ್ ವರಿಷ್ಠರಿಗೆ ದುಂಬಾಲು


ಬೆಂಗಳೂರು, ಜು. 11(ಕೆಎಂಶಿ)–ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ತಮಗೊಂದು, ತಮ್ಮ ಕುಟುಂಬದವರಿಗೊಂದು ಟಿಕೆಟ್ ನೀಡುವಂತೆ ರಾಜ್ಯ ಕಾಂಗ್ರೆಸ್ ಮುಖಂಡರು ಪಕ್ಷದ ನಾಯಕರಲ್ಲಿ ಬೇಡಿಕೆ ಇಟ್ಟಿದ್ದಾರೆ. ಮಾಜಿ ಸಚಿವರಾದ ಆರ್.ವಿ.ದೇಶಪಾಂಡೆ, ಡಾ.ಹೆಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿ ಸೇರಿದಂತೆ 40ಕ್ಕೂ ಹೆಚ್ಚು ಮುಖಂಡರು ತಮಗಲ್ಲದೆ, ತಮ್ಮ ಮಗನಿಗೆ ಇಲ್ಲವೇ ಸೊಸೆಗೆ ಟಿಕೆಟ್ ನೀಡಿ ಎಂದಿದ್ದಾರೆ.

ಬಿಜೆಪಿ ಇಲ್ಲವೇ ಜೆಡಿಎಸ್ ಸತತವಾಗಿ ಗೆಲ್ಲುತ್ತಿರುವ ಕ್ಷೇತ್ರಗಳಲ್ಲಿ ತಮ್ಮ ಕುಟುಂಬ ವರ್ಗದವರನ್ನು ಕಣಕ್ಕಿಳಿಸಿದರೆ ಆ ಕ್ಷೇತ್ರ ಕಾಂಗ್ರೆಸ್‌ದಾಗುತ್ತದೆ. ನಮ್ಮದಲ್ಲದ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲು ಪಕ್ಷದ ಚಿಹ್ನೆಯ ಜೊತೆಗೆ ನಮ್ಮ ಕುಟುಂಬದ ವರ್ಚಸ್ಸು ಮತ್ತು ಸಂಪರ್ಕವನ್ನು ಬಳಸಿಕೊಂಡು ಗೆಲುವು ತಂದು ಕೊಡುತ್ತೇವೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ರಾಜ್ಯ ಉಸ್ತುವಾರಿ ನೋಡಿಕೊಳ್ಳುತ್ತಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲ್ ಬಳಿ ಬೇಡಿಕೆ ಇಟ್ಟಿದ್ದಾರೆ. ಅಧಿಕಾರಕ್ಕೆ ಬರುವ ಕನಸಿನಲ್ಲಿರುವ ಕಾಂಗ್ರೆಸ್ ಪಕ್ಷದಲ್ಲಿ ಟಿಕೆಟ್‌ಗಾಗಿ ಲಾಬಿ



ಆರಂಭವಾಗಿದೆ. ಇದರ ಮಧ್ಯೆಯೇ ಪಕ್ಷದ ಮುಖಂಡರು ತಮ್ಮ ಕುಟುಂಬದವರು ಮತ್ತು ಅನುಯಾಯಿಗಳಿಗೆ ತಮ್ಮ ಕ್ಷೇತ್ರವನ್ನು ಗಟ್ಟಿ ಮಾಡಿಕೊಳ್ಳಲು ಕಸರತ್ತು ಆರಂಭಿಸಿದ್ದಾರೆ. ಈಗಾಗಲೇ ಪ್ರಸಕ್ತ ವಿಧಾನಸಭೆಯಲ್ಲಿ 4 ಮಂದಿ ಒಂದೇ ಕುಟುಂಬಕ್ಕೆ ಸೇರಿದವರು ಇಬ್ಬರು ಮೂವರು ಸದಸ್ಯರಾಗಿದ್ದಾರೆ. ಟಿಕೆಟ್ ಕೇಳುವ ಪ್ರಮುಖರಲ್ಲಿ ಮಾಜಿ ಸಚಿವರಾದ ಹೆಚ್.ಸಿ.ಮಹದೇವಪ್ಪ,ಸತೀಶ್ ಜಾರಕಿಹೊಳಿ, ಆರ್.ವಿ. ದೇಶಪಾಂಡೆ, ಟಿ.ಬಿ.ಜಯಚಂದ್ರ ಸೇರಿದಂತೆ ಹಲವು ನಾಯಕರು ಹೀಗೆ ದುಂಬಾಲು ಬಿದ್ದವರಲ್ಲಿ ಪ್ರಮುಖರು. ಶಾಮನೂರು ಶಿವಶಂಕರಪ್ಪ ಅವರು ತಮ್ಮ ಕ್ಷೇತ್ರವನ್ನು ಮಗನಿಗೆ ಕೊಡುವುದರೊಂದಿಗೆ ತಮ್ಮ ಸೊಸೆಗೂ ಪಕ್ಷದ ಟಿಕೆಟ್ ನೀಡುವಂತೆ ಪಟ್ಟು ಹಿಡಿದಿದ್ದಾರೆ.

ಮಾಜಿ ಸಚಿವ ಮಹದೇವಪ್ಪ ಅವರು ಏಕಕಾಲಕ್ಕೆ ಟಿ.ನರಸೀಪುರ ಹಾಗೂ ನಂಜನಗೂಡು ವಿಧಾನಸಭಾ ಕ್ಷೇತ್ರಗಳನ್ನು ತಮಗೆ ಬಿಟ್ಟುಕೊಡಬೇಕು ಎಂದು ಕೇಳಿದ್ದಾರೆ. ಒಂದರಲ್ಲಿ ತಾವು, ಮತ್ತೊಂದರಲ್ಲಿ ಪುತ್ರ ಸುನೀಲ್ ಬೋಸ್ ಸ್ಪರ್ಧಿಸುವುದಾಗಿ ಹೇಳಿದ್ದಾರೆ. ಮಾಜಿ ಸಚಿವ ಸತೀಶ್ ಜಾರಕಿಹೊಳಿ ಅವರು ತಾವು ಸ್ಪರ್ಧಿಸುತ್ತಿರುವ ಯಮಕನಮರಡಿ ಕ್ಷೇತ್ರವನ್ನು ತಮ್ಮ ಪುತ್ರಿ ಪ್ರಿಯಾಂಕಾ ಅವರಿಗೆ ಬಿಟ್ಟುಕೊಟ್ಟು ತಾವು ಸವದತ್ತಿ ಕ್ಷೇತ್ರದಲ್ಲಿ ಸ್ಪರ್ಧಿಸಲು ಬಯಸಿದ್ದಾರೆ. ನಾನು ಯಮಕನಮರಡಿ ಕ್ಷೇತ್ರದಲ್ಲಿ ▶ 8ನೇ ಪುಟಕ್ಕೆ



ಕೊಡಗಲ್ಲಿ ಮಳೆ ಆರ್ಭಟ: ಇಂದು ಮುಖ್ಯಮಂತ್ರಿ ಭೇಟಿ

ಜನತೆಯಲ್ಲಿ ಕ್ಷಣ ಕ್ಷಣಕ್ಕೂ ಆತಂಕ



ಮಡಿಕೇರಿ,ಜು.11– ಕೊಡಗು ಜಿಲ್ಲೆಯಾದ್ಯಂತ ಮಳೆಯಿಂದ ವ್ಯಾಪಕ ಹಾನಿಯಾಗಿದ್ದು, ನಾಳೆ (ಮಂಗಳವಾರ) ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭೇಟಿ ನೀಡಿ, ಹಾನಿಗೀಡಾದ ಪ್ರದೇಶಗಳ ಪರಿಶೀಲನೆ ನಡೆಸಲಿದ್ದಾರೆ.

ನಾಳೆ ಬೆಳಗ್ಗೆ ಮೈಸೂರಿಗೆ ವಿಶೇಷ ವಿಮಾನದಲ್ಲಿ ಆಗಮಿಸಿ, ಅಲ್ಲಿಂದ ರಸ್ತೆ ಮೂಲಕ ಕೊಡಗಿಗೆ ಭೇಟಿ ನೀಡಲಿದ್ದಾರೆ. ಮಧ್ಯಾಹ್ನ 2.30ರವರೆಗೆ ಕೊಡಗಿನ ವಿವಿಧೆಡೆ ಮಳೆಯಿಂದ ಹಾನಿಗೀಡಾಗಿರುವ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲಿಸಿ, ಅಧಿಕಾರಿಗಳಿಂದ ಮಾಹಿತಿ ಪಡೆಯಲಿದ್ದಾರೆ.

ಅಪಾರ ಹಾನಿ: ಸೋಮವಾರ ಮಳೆ ಆರ್ಭಟ ಕಡಿಮೆ ಇತ್ತಾದರೂ, ಅವಾಂತರಗಳು ತಪ್ಪಿಲ್ಲ. ಮರಗಳು ಮುರಿದು ಬಿದ್ದು ವಿದ್ಯುತ್ ಸಂಪರ್ಕ ಕಡಿತವಾಗಿರುವುದು, ಭೂಕುಸಿತ ಸೇರಿದಂತೆ ನಾನಾ ರೀತಿಯ ಹಾನಿ ಸಂಭವಿಸಿದೆ.

ಕಳೆದ 24 ಗಂಟೆಗಳ ಅವಧಿಯಲ್ಲಿ ಸುರಿದ ಮಳೆಗೆ ಜಿಲ್ಲೆಯ ವಿವಿಧೆಡೆ 15 ಮನೆಗಳಿಗೆ ಹಾನಿಯಾಗಿದೆ. 1 ಭೂಕುಸಿತ ಪ್ರಕರಣ ದಾಖಲಾಗಿದ್ದು, ಮಳೆ ಕಾರಣದಿಂದ 98 ವಿದ್ಯುತ್ ಕಂಬಗಳಿಗೆ ▶ 8ನೇ ಪುಟಕ್ಕೆ

ರಂಗನತಿಟ್ಟು ಪಕ್ಷಿಧಾಮಕ್ಕೆ ನಿರ್ಬಂಧ



ಮೈಸೂರು,ಜು.11–ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಹೆಚ್ಚಾಗಿ ಮಳೆಯಾಗುತ್ತಿರುವುದರಿಂದ ಕೆಆರ್‌ಎಸ್ ಅಣೆಕಟ್ಟೆನಿಂದ ಹೆಚ್ಚುವರಿ ನೀರನ್ನು ಬಿಡುತ್ತಿರುವ ಹಿನ್ನಲೆಯಲ್ಲಿ ಕಾವೇರಿ ನದಿಯು ಉಕ್ಕಿ ಹರಿಯುತ್ತಿರುವುದರಿಂದ ಜು.11 ಹಾಗೂ 12 ರಂದು ರಂಗನತಿಟ್ಟು ಪಕ್ಷಿಧಾಮಕ್ಕೆ ತಾತ್ಕಾಲಿಕವಾಗಿ ಸಾರ್ವಜನಿಕರಿಗೆ ಪ್ರವೇಶವನ್ನು ನಿರ್ಬಂಧಿಸಲಾಗಿದೆ ಎಂದು ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರುಗಳ ಮುಖಾಮುಖಿ ಡಿಕ್ಕಿ

ಮಾವ, ಅಳಿಯ ಸಾವು



ಮೋಹನ್ ವಿನೋದ್



ಮೈಸೂರು, ಜು.11 (ಆರ್‌ಕೆ)– ಎರಡು ಕಾರುಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ, ಇಬ್ಬರು ಸಾವನ್ನಪ್ಪಿದ್ದು, ಮೂವರು ಗಾಯಗೊಂಡಿರುವ ಘಟನೆ ಹುಣಸೂರು ರಸ್ತೆಯ ಹೊಸಲು ಮಾರಮ್ಮ ದೇವಸ್ಥಾನದ ಬಳಿ ಇಂದು ಮಧ್ಯಾಹ್ನ ಸಂಭವಿಸಿದೆ. ಪಿರಿಯಾಪಟ್ಟಣ ತಾಲೂಕು, ಬೈಲುಕುಪ್ಪೆ ನಿವಾಸಿಗಳಾದ ಮಾವ ಮೋಹನ್(60) ಹಾಗೂ ಅಳಿಯ ವಿನೋದ್‌ಕುಮಾರ್ ಸಾವನ್ನಪ್ಪಿದವರು. ಘಟನೆಯಲ್ಲಿ ಗಾಯಗೊಂಡಿರುವ ಅವರ ಮೂವರು ಸಂಬಂಧಿಕರನ್ನು ಮೈಸೂರಿನ ಕೆಆರ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಮೈಸೂರಿನಿಂದ ಮಾರುತಿ ಆಲ್ಟೋ ಕಾರಿನಲ್ಲಿ ಹುಣಸೂರು ಕಡೆಗೆ ಹೋಗುತ್ತಿದ್ದಾಗ ಎದುರಿನಿಂದ ಬಂದ ಟೊಯೋಟಾ ಇನ್ನೋವಾ ಕಾರು, ಹೊಸಲು ಮಾರಮ್ಮ ದೇವಸ್ಥಾನದ ಆರ್ಚ್ ಸಮೀಪ ಹುಣಸೂರು ರಸ್ತೆ–ಕೆಆರ್ ನಗರ ರಸ್ತೆ ತಿರುವಿನ ಜಂಕ್ಷನ್ ಬಳಿ ಇಂದು ಮಧ್ಯಾಹ್ನ 1.15 ಗಂಟೆ ವೇಳೆಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಆಲ್ಟೋ ಕಾರಿನ ಮುಂಭಾಗ ▶ 8ನೇ ಪುಟಕ್ಕೆ



ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಸೇತುವೆ

ಕೆಆರ್‌ಎಸ್‌ನಿಂದ 72 ಸಾವಿರ ಕ್ಯೂಸೆಕ್ ನೀರು ಬಿಡುಗಡೆ

ತುಂಬಿ ಹರಿಯುತ್ತಿರುವ ಕಾವೇರಿ ನದಿ, ವೆಲ್ಲೆಸ್ಲಿ ಸೇತುವೆ ಪ್ರವೇಶ ನಿರ್ಬಂಧ

ಮೈಸೂರು, ಜು.11(ಆರ್‌ಕೆ)–ಒಳಹರಿವಿನ ಪ್ರಮಾಣ ಹೆಚ್ಚಾಗಿರುವುದರಿಂದ ಕೆಆರ್‌ಎಸ್ ಅಣೆಕಟ್ಟೆಯಿಂದ ಅಧಿಕ ಪ್ರಮಾಣದ ನೀರನ್ನು ಹೊರ ಬಿಡಲಾಗುತ್ತಿದ್ದು, ಕಾವೇರಿ ನದಿ ಮೈದುಂಬಿ ಹರಿಯುತ್ತಿದೆ.

ಇಂದು ಸಂಜೆ 6 ಗಂಟೆ ವೇಳೆಗೆ 72,112 ಕ್ಯೂಸೆಕ್ ನೀರು ಹರಿದುಬರುತ್ತಿದ್ದು, ಅಣೆಕಟ್ಟೆಯ ಸುರಕ್ಷತೆ ದೃಷ್ಟಿಯಿಂದ 72,612 ಕ್ಯೂಸೆಕ್ ನೀರನ್ನು ಜಲಾಶಯದಿಂದ ಗೇಟ್‌ಗಳ ಮೂಲಕ ಕಾವೇರಿ ▶ 8ನೇ ಪುಟಕ್ಕೆ

ವಿಕಲಚೇತನರು, ಹಿರಿಯ ನಾಗರಿಕರಿಗೆ ಮೂಲ ಆಧಾರ

ಕೇಂದ್ರದ ಮಹತ್ವದ ಯೋಜನೆಗೆ ಚಾಮರಾಜನಗರ ಆಯ್ಕೆ

● ಜು.19 ರಿಂದ 22ರವರೆಗೆ ನಾಲ್ಕು ತಾಲೂಕುಗಳಲ್ಲಿ ಬೃಹತ್ ತಪಾಸಣಾ ಶಿಬಿರ ● ಅಗತ್ಯವಿರುವ ಕೃತಕ ಅಂಗಗಳು, ಇನ್ನಿತರ ಪರಿಕರ ವಿತರಣೆ



ಚಾಮರಾಜನಗರ, ಜು.11–ವಿಕಲಚೇತನರು ಹಾಗೂ ಹಿರಿಯ ನಾಗರಿಕರಿಗೆ ಅವಶ್ಯ ಹಾಗೂ ಆಧಾರವಾಗಿ 36 ಬಗೆಯ ಆಧುನಿಕ ಸಾಧನ–ಸಲಕರಣೆ ವಿತರಿಸಲು ಕೇಂದ್ರ ಸರ್ಕಾರ ದೇಶದ 36 ಲೋಕಸಭಾ ಕ್ಷೇತ್ರಗಳನ್ನು ಆಯ್ಕೆ ಮಾಡಿದ್ದು, ಅದರಲ್ಲಿ ರಾಜ್ಯದ ಏಕೈಕ ಕ್ಷೇತ್ರವಾಗಿ ಚಾಮರಾಜನಗರ ಲೋಕಸಭಾ ಕ್ಷೇತ್ರ ಇದಕ್ಕೆ ಆಯ್ಕೆಯಾಗಿದೆ ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ▶ 2ನೇ ಪುಟಕ್ಕೆ

ವಿಶೇಷಚೇತನರಿಗೆ ಸೌಲಭ್ಯಗಳು

● ಬಲಗೈ ಚಾಲಿತ ಟ್ರೈಸಿಕಲ್ ● ಮಡಿಸುವ ಚಕ್ರ ಕುರ್ಚಿ (ಮಕ್ಕಳು ಹಾಗೂ ವಯಸ್ಕರಿಗೆ) ● ಅಲ್ಯುಮಿನಿಯಮ್‌ನ ಮೊಣಕೈಗೆ ಹೊಂದಿಸುವ 2 ಗಾತ್ರದ ಊರುಗೋಲು ● ಹ್ಯಾಕಿಲ್ ಹೊಂದಾಣಿಕೆಯುಳ್ಳ 4 ಗಾತ್ರಾನುಸಾರ ಊರುಗೋಲು ● ಸಾಮಾನ್ಯ ಊರುಗೋಲು ● ವಾಕಿಂಗ್ ಸ್ಟಿಕ್ ● ಮಕ್ಕಳು ಹಾಗೂ ವಯಸ್ಕರಿಗೆ ರೋಲೇಟರ್ ವಾಕರ್ ● ವಿಶೇಷ ಮಕ್ಕಳಿಗೆ ವಿನ್ಯಾಸಗೊಳಿಸಿರುವ ಎಂಎಸ್‌ಐಇಡಿ ಕಿಟ್ ● ಸೆರೆಬ್ರಲ್ ಪಾಲ್ಸಿ ಸಮಸ್ಯೆಯುಳ್ಳವರಿಗೆ ವಿಶೇಷ ಕುರ್ಚಿ ● ದೃಷ್ಟಿಯಿಲ್ಲದವರಿಗೆ ಮಡಿಸುವ ಬ್ರೈಲ್ ಕೇನ್ ಸ್ಟಿಕ್ ● ಬ್ರೈಲ್ ಸ್ಲೇಟ್ ● ಬ್ರೈಲ್ ಕಿಟ್ ● ನಡಿಗೆಗೆ ಎಲೆಕ್ಟ್ರಾನಿಕ್ ಸ್ಮಾರ್ಟ್ ಕೇನ್, ಸ್ಮಾರ್ಟ್ ಫೋನ್ ● ಹಿಯರಿಂಗ್ ಸೌಂಡ್ ಆಂಪ್ಲಿಫೈಯರ್ ● ಕೈ–ಕಾಲು ಕೃತಕ ಅಂಗಗಳು

ಒಂಟಿಕೊಪ್ಪಲ್ ಪಂಚಾಂಗದಲ್ಲಿ ಸಿದ್ದರಾಮೋತ್ಸವ ಸೇರಿಸಬೇಕು!

ಸಂಸದ ಶ್ರೀನಿವಾಸಪ್ರಸಾದ್ ವ್ಯಂಗ್ಯ

ಚಾಮರಾಜನಗರ, ಜು. 11(ಎಸ್‌ಎಸ್)–ಬಿಳಿಗಿರಿರಂಗನ ರಥೋತ್ಸವ, ಮೇಲುಕೋಟೆ ರಥೋತ್ಸವ ಎಂದೆಲ್ಲ ಕೇಳಿದ್ದೆವು. ಇನ್ನು ಮೇಲೆ ಒಂಟಿಕೊಪ್ಪಲ್ ಪಂಚಾಂಗದಲ್ಲಿ ಸಿದ್ದರಾಮೋತ್ಸವ ಎಂಬುದನ್ನೂ ಸೇರಿಸಬೇಕು ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ವ್ಯಂಗ್ಯವಾಡಿದರು. ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ 75ನೇ ಹುಟ್ಟುಹಬ್ಬ ಆಚರಣೆ ಅಂಗವಾಗಿ ದಾವಣಗೆರೆಯಲ್ಲಿ ಹಮ್ಮಿಕೊಂಡಿರುವ ಸಿದ್ದರಾಮೋತ್ಸವ ಕಾರ್ಯಕ್ರಮದ ಬಗ್ಗೆ ನಗರದಲ್ಲಿಂದು ಸುದ್ದಿಗಾರರಿಗೆ ▶ 2ನೇ ಪುಟಕ್ಕೆ

ಇಂದು ಬನುಮಯ್ಯ ಬಾಲಕಿಯರ ಪ್ರೌಢಶಾಲೆಯಲ್ಲಿ ಆಲೂರು ವೆಂಕಟರಾಯರ ಜನ್ಮದಿನೋತ್ಸವ



ಮೈಸೂರು, ಜು. 11– ಒಂದು ಕಣ್ಣಲ್ಲಿ ಕನ್ನಡಾಭಿಮಾನ ಮತ್ತೊಂದು ಕಣ್ಣಲ್ಲಿ ದೇಶಾಭಿಮಾನ ತುಂಬಿಕೊಂಡಿದ್ದ ಅಪ್ರತಿಮ ಕನ್ನಡ ಸೇನಾನಿ, ಅಸಾಧಾರಣ ಸ್ವಾತಂತ್ರ್ಯ ಯೋಧ, ಕನ್ನಡ ಕುಲ ಪುರೋಹಿತ ಆಲೂರು ವೆಂಕಟರಾಯರ ಜನ್ಮ ದಿನೋತ್ಸವವನ್ನು ಇದೇ ಜುಲೈ 12ರಂದು ಮಂಗಳವಾರ ಮಧ್ಯಾಹ್ನ 2:30 ಗಂಟೆಗೆ ನಗರದ ಸಯ್ಯಾಜಿರಾವ್ ರಸ್ತೆಯಲ್ಲಿರುವ ಧರ್ಮಪ್ರಕಾಶ ಡಿ.ಬನುಮಯ್ಯ ಬಾಲಕಿಯರ ಪ್ರೌಢಶಾಲೆಯಲ್ಲಿ ಏರ್ಪಡಿಸಲಾಗಿದೆ.

ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗದ ಸಂಯುಕ್ತ ಆಶ್ರಯದಲ್ಲಿ ನಡೆಯಲಿರುವ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎಸ್.ಎಸ್.ತಿಪ್ಪೇಸ್ವಾಮಿ ವಹಿಸಲಿದ್ದು, ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರನ್ನು ಕುರಿತು ಸಾಹಿತಿ ಬನ್ನೂರು ಕೆ.ರಾಜು ಪ್ರಧಾನ ಭಾಷಣ ಮಾಡುವರು. ಮುಖ್ಯ ಅತಿಥಿಗಳಾಗಿ ಪತ್ರಕರ್ತ ದೊಡ್ಡನಹುಂಡಿ ರಾಜಣ್ಣ ಮತ್ತು ಚಿತ್ರಕಲಾವಿದ ಜಿ.ಟಿ.ಶ್ರೀನಿವಾಸ ಮೂರ್ತಿ ಭಾಗವಹಿಸಲಿದ್ದು ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ ಹಾಗೂ ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ ಉಪಸ್ಥಿತರಿರುವರು.

ಇದೇ ಸಂದರ್ಭದಲ್ಲಿ ಪ್ರಸ್ತುತ ಸಾಲಿನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿತರಾದ ಧರ್ಮ ಪ್ರಕಾಶ ಡಿ.ಬನುಮಯ್ಯ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿಯರಾದ ಎಂ.ಎ.ತಸ್ಮಿಯಾ ಮತ್ತು ನೀಲಾ ಅವರನ್ನು ಹಿರಣ್ಮಯಿ ಪ್ರತಿಷ್ಠಾನ ಹಾಗೂ ಕಾವೇರಿ ಬಳಗದಿಂದ ಅಭಿನಂದಿಸಿ, ಸನ್ಮಾನಿಸಲಾಗುವುದು.



ಮೈಸೂರಿನ ಕುವೆಂಪುನಗರದ ಮೂರ್ತಿ ಅಕಾಡೆಮಿ ವತಿಯಿಂದ ಗಾನಭಾರತಿ (ವೀಣೆ ಶೇಷಣ್ಣ ಭವನ)ದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಮೈಕಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಕೆ.ಸವಿತಾ, ಶಾರದಾ ವಿಲಾಸ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ರಾಜೇಂದ್ರಪ್ರಸಾದ್ ಹೊನ್ನಲಗೆರೆ, ಮೂರ್ತಿ ಅಕಾಡೆಮಿಯ ಅಧ್ಯಕ್ಷ ಮೂರ್ತಿ, ಶಾರದಾ ವಿದ್ಯಾ ಮಂದಿರ ಕಾಲೇಜಿನ ಪ್ರಾಂಶುಪಾಲ ಹಾಗೂ ಸಂಗೀತ ವಿದ್ವಾನ್ ಸಾಗರ್ ಚಕ್ರವರ್ತಿ, ಕಾಲೇಜಿನ ಪ್ರಾಂಶುಪಾಲರಾದ ಟಿ.ಆರ್.ರೂಪ ಚಿತ್ರದಲ್ಲಿದ್ದಾರೆ.

ನಿಧನ



ಜಿ.ವಿ.ಕೃಷ್ಣಸ್ವಾಮಿ

ಮೈಸೂರು, ಜು. 11– ನಗರದ ತೊಣಚಿಕೊಪ್ಪಲಿನ ಮಾರುತಿ ದೇವಸ್ಥಾನದ ರಸ್ತೆಯ ನಿವಾಸಿ ಹಾಗೂ ಹಿರಿಯ ವಕೀಲ ಜಿ.ವಿ.ಕೃಷ್ಣಸ್ವಾಮಿ (76)ಭಾನುವಾರ ಬೆಳಗ್ಗೆ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಮರಿಮಲ್ಲಪ್ಪ ಪಿಯು ಕಾಲೇಜು ಪ್ರಾಂಶುಪಾಲರಾಗಿದ್ದ ರತ್ನಮ್ಮ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅವರ ಹಿರಿಯ ಮಗ ವಿಶ್ಜಿತ್ ಅಮೆರಿಕೆಯಲ್ಲಿದ್ದು, ಆತ ಬಂದ ನಂತರ ನಾಳೆ (ಮಂಗಳವಾರ) ಬೆಳಗ್ಗೆ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ಪಾದದ ಬಳಿಯ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಬಸವೇಗೌಡ

ಮೈಸೂರು, ಜು.11– ಮೈಸೂರು ತಾಲೂಕಿನ ಮಾಣಿಕ್ಯಪುರದ ನಿವಾಸಿ ಬಸವೇಗೌಡ(60) ಸೋಮವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಾಣಿಕ್ಯಪುರದಲ್ಲಿರುವ ತಮ್ಮ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಚಾಮರಾಜನಗರ ಆಯ್ಕೆ

ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಜಂಟಿ ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದರು. ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಸದರು, ಜಿಲ್ಲೆಯ ವಿಕಲಚೇತನರು ಹಾಗೂ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಅಗತ್ಯವಿರುವ ಸಾಧನ– ಸಲಕರಣೆಗಳನ್ನು ಉಚಿತವಾಗಿ ವಿತರಿಸುವ ಸಲುವಾಗಿ ಜು.19ರಿಂದ 22ರವರೆಗೆ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯ ಜನತೆ ಇದನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಜು.19ರಂದು ಹನೂರು ಪಟ್ಟಣದ ಬಿಆರ್‌ಸಿ ಸೆಂಟರ್, ಜು.20ರಂದು ಕೊಳ್ಳೇಗಾಲ ಪಟ್ಟಣದ ನ್ಯಾಷನಲ್ ಹಿರಿಯ ಪ್ರಾಥಮಿಕ ಶಾಲೆ, ಜು.20ರಂದು ಗುಂಡ್ಲುಪೇಟೆ ಪಟ್ಟಣದ ಶಿಕ್ಷಕರ ಭವನ, ಜು.22ರಂದು ಚಾಮರಾಜನಗರ ಪಟ್ಟಣದ ಪೇಟೆ ಪ್ರೈಮರಿ ಶಾಲೆಯಲ್ಲಿ ಶಿಬಿರ ಏರ್ಪಡಿಸಲಾಗಿದೆ. ಆ ದಿನಗಳಂದು ಬೆಳಗ್ಗೆ 9 ಗಂಟೆಯಿಂದಲೇ ತಪಾಸಣೆ ಆರಂಭಿಸಲಾಗುತ್ತದೆ. ಒಂದೇ ದಿನದಲ್ಲಿ ತಪಾಸಣೆ ಪೂರ್ಣಗೊಳ್ಳದಿದ್ದಲ್ಲಿ ಮತ್ತೊಂದು ದಿನಕ್ಕೂ ವಿಸ್ತರಿಸಲಾಗುತ್ತದೆ ಎಂದರು.

ವಿಕಲಚೇತನರು ಹಾಗೂ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಭಾರೀ ಸಮಸ್ಯೆ ಎದುರಿಸುತ್ತಿದ್ದಾರೆ. ಇದನ್ನು ಮನಗಂಡಿರುವ ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ನೇತೃತ್ವದಲ್ಲಿ ವಿಶಿಷ್ಟ ಹಾಗೂ ವಿನೂತನ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದು, ಕೃತಕ ಅಂಗ ತಯಾರಿಕಾ ಕಾರ್ಪೊರೇಷನ್, ಜಿಲ್ಲಾಡಳಿತ, ಜಿಪಂ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಮತ್ತು ಆರೋಗ್ಯ ಇಲಾಖೆಗಳು ಸಹಕಾರ ನೀಡಲಿವೆ. ಜಿಲ್ಲಾ ಕೇಂದ್ರದಲ್ಲಿ ಈ ಹಿಂದೆಯೂ ಸಹ ಇಂತಹ ಬೃಹತ್ ಕಾರ್ಯಕ್ರಮವನ್ನು ಯಶಸ್ವಿಯಾಗಿ ಏರ್ಪಡಿಸಲಾಗಿದೆ ಎಂದು ಅವರು ತಿಳಿಸಿದರು.

ಆಯಾ ತಹಸೀಲ್ದಾರರು, ತಾಪಂ ಇಓಗಳು, ಸಿಡಿಓಗಳು ಹಾಗೂ ಪಿಡಿಓಗಳು ವೈಯಕ್ತಿಕ ಅಸಕ್ತಿ ವಹಿಸಿ ಆಯಾ ಭಾಗದ ಪ್ರತಿಯೊಬ್ಬ ವಿಕಲಚೇತನರನ್ನು ಗುರುತಿಸಿ ಅವರಿಗೆ ಯಾವುದೇ ತೊಂದರೆಯಾಗದಂತೆ ಪ್ರಯಾಣ, ಆತಿಥ್ಯ ಸೇರಿದಂತೆ ಎಲ್ಲಾ ವ್ಯವಸ್ಥೆ ಕಲ್ಪಿಸಿ ತಪಾಸಣಾ ಶಿಬಿರಗಳಿಗೆ ಕರೆತರಲಿದ್ದಾರೆ. ಜಿಲ್ಲೆಯ ಯಾವುದೇ ವಿಕಲಚೇತನರು ಹಾಗೂ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಶಿಬಿರದಿಂದ ವಂಚಿತರಾಗದಂತೆ ಜವಾಬ್ದಾರಿಯುತವಾಗಿ ನೋಡಿಕೊಳ್ಳಲು ಸೂಚಿಸಲಾಗಿದೆ ಎಂದರು.

ಶಿಬಿರಗಳಲ್ಲಿ ಅಂಗವಿಕಲತೆಯ ಪ್ರಮಾಣ ಪತ್ರ ಹಾಗೂ ಹಿರಿಯ ನಾಗರಿಕರಿಗೆ ಅಗತ್ಯ ದಾಖಲೆ ಆಧಾರದ ಮೇಲೆ ಸಲಕರಣೆಗಳನ್ನು ವಿತರಿಸಲಾಗುತ್ತದೆ. ಮಾಹಿತಿ ಸಂಗ್ರಹಣೆ ಹಾಗೂ ಅಗತ್ಯ ಕ್ರಮಗಳಿಗಾಗಿ ತಪಾಸಣಾ ಶಿಬಿರಗಳಿಗೆ ಕೇಂದ್ರದಿಂದ 4 ಅಧಿಕಾರಿಗಳನ್ನೊಳಗೊಂಡ ತಂಡ ಆಗಮಿಸಲಿದೆ ಎಂದು ಮಾಹಿತಿ ನೀಡಿದರು.

ಸಚಿವ ವಿ.ಸೋಮಣ್ಣ ಮಾತನಾಡಿ, ಕಾರ್ಯಕ್ರಮದ ಯಶಸ್ವಿ ಸಂಘಟನೆಗಾಗಿ ಡಿಸಿ, ಜಿಪಂ ಇಓ, ಡಿಹೆಚ್‌ಓ, ತಹಸೀಲ್ದಾರರು, ತಾಪಂ ಇಓಗಳನ್ನೊಳಗೊಂಡ ಸಮಿತಿ ರಚಿಸಲಾಗುವುದು ಎಂದು ತಿಳಿಸಿದರು. ಶಾಸಕರಾದ ಎನ್.ಮಹೇಶ್ ಮಾತನಾಡಿ, ಜಿಲ್ಲೆಯಲ್ಲಿ 20464 ಅಂಗವಿಕಲರನ್ನು ಈಗಾಗಲೇ ಗುರುತಿಸಲಾಗಿದ್ದು, 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರ ಮಾಹಿತಿಯನ್ನು ಕಲೆಹಾಕಲಾಗುತ್ತಿದೆ. ಎಲ್ಲಾ ವಿಕಲಚೇತನರಿಗೂ ಸೌಲಭ್ಯ ನೀಡುವ ನಿಟ್ಟಿನಲ್ಲಿ ತಪಾಸಣಾ ಶಿಬಿರಗಳ ಯಶಸ್ಸಿಗೆ ಶ್ರಮಿಸಲಾಗುವುದು ಎಂದರು. ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಶಾಸಕರಾದ ಸಿ.ಎಸ್.ನಿರಂಜನಕುಮಾರ್, ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಡಿಸಿ ಎಸ್.ಕಾತ್ಯಾಯಿನಿದೇವಿ, ಎಎಸ್ಪಿ ಕೆ.ಎಸ್.ಸುಂದರರಾಜು, ಎಸಿ ಗೀತಾ ಹುಡೇದ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಗೀತಾಲಕ್ಷ್ಮಿ ಪತ್ರಿಕಾಗೋಷ್ಠಿಯಲ್ಲಿದ್ದರು.

ಪಂಚಾಂಗದಲ್ಲಿ ಸಿದ್ದರಾಮೋತ್ಸವ ಸೇರಿಸಬೇಕು!

ಪ್ರತಿಕ್ರಿಯಿಸಿದರು. ಸಿದ್ದರಾಮಯ್ಯ ಅವರು ತಮ್ಮ ಜಾತಿಯವರ ಶಕ್ತಿ ಪ್ರದರ್ಶನ ಮಾಡಬೇಕು ಎಂಬ ಉದ್ದೇಶದಿಂದ ಐದು ಲಕ್ಷ ಜನರನ್ನು ಸೇರಿಸಿ ದೊಡ್ಡ ಕಾರ್ಯಕ್ರಮ ಮಾಡಲು ಹೊರಟಿದ್ದರು. ಆದರೆ ಇದಕ್ಕೆ ಪಕ್ಷದಲ್ಲಿ ವಿರೋಧ ವ್ಯಕ್ತವಾಯಿತು. ಆ ಬಳಿಕ ಪಕ್ಷದಿಂದಲೇ ಕಾರ್ಯಕ್ರಮ ಮಾಡಬೇಕು ಎಂದು ದೊಡ್ಡ ಸಮಿತಿ ರಚಿಸಿಕೊಂಡಿದ್ದಾರೆ. ಇವೆಲ್ಲವನ್ನೂ ಸಿದ್ದರಾಮಯ್ಯ ಪ್ರಚಾರಕ್ಕಾಗಿ ಮಾಡುತ್ತಿದ್ದಾರೆ. ಏನೇನು ಆಟ ಆಡಬೇಕೋ ಆಡಲಿ ಎಂದು ಟೀಕಿಸಿದರು.

ಮೋದಿ ಸರ್ಕಾರ ತೊಲಗಿದರೆ ದೇಶಕ್ಕೆ ಒಳ್ಳೆಯದು ಎಂಬ ಸಿದ್ದರಾಮಯ್ಯ ಹೇಳಿಕೆ ಸರಿಯಲ್ಲ. ಮೋದಿ ಜನಾದೇಶದ ಮೇಲೆ ಅಧಿಕಾರಕ್ಕೆ ಬಂದಿದ್ದಾರೆಯೇ ವಿನಾ, ಸಿದ್ದರಾಮಯ್ಯ ಅವರನ್ನು ಕೇಳಿಕೊಂಡು ಅಧಿಕಾರಕ್ಕೆ ಬಂದಿಲ್ಲ. ಪ್ರಚಾರಕ್ಕಾಗಿ ಸಿದ್ದರಾಮಯ್ಯ ಮೈ ಪರಚಿಕೊಂಡು ಕಿರುಚಾಡುತ್ತಿದ್ದಾರೆ. ತಮ್ಮ ಸ್ಥಿತಿ ಏನು ಎಂಬುದನ್ನು ಅವರು ಅರ್ಥಮಾಡಿಕೊಳ್ಳಬೇಕು ಎಂದು ಕುಟುಕಿದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ 36 ಸಾವಿರ ಮತಗಳಿಂದ ಸಿದ್ದರಾಮಯ್ಯ ಸೋತಾಯಿತು. 17 ಸಚಿವ, ಶಾಸಕರನ್ನು ಪಕ್ಷ ಬಿಡಿಸಿ ಕಳುಹಿಸಿದ್ದಾಯಿತು. ಕಳೆದ ಲೋಕಸಭಾ ಚುನವಣೆಯಲ್ಲಿ 28 ಕ್ಷೇತ್ರದಲ್ಲಿ ಒಂದು ಸ್ಥಾನಕ್ಕೆ ಮಾತ್ರ ತೃಪ್ತಿಪಟ್ಟುಕೊಳ್ಳುವಂತಾಯಿತು. ಈಗಲಾದರೂ ಅನಗತ್ಯವಾಗಿ ಮಾತನಾಡುವುದನ್ನು ಸಿದ್ದರಾಮಯ್ಯ ಅವರು ಬಿಡಬೇಕು ಎಂದು ಶ್ರೀನಿವಾಸಪ್ರಸಾದ್ ಸಲಹೆ ನೀಡಿದರು.


ಹಿರಿಯ ಲೇಖಕ ಡಾ.ಜಿ.ಎಸ್.ಭಟ್ಟರ ಮೂರು ಕೃತಿಗಳ ಬಿಡುಗಡೆ

ಇತಿಹಾಸದ ವಿಚಾರಗಳಿಗೆ ಸಾಹಿತ್ಯ ರೂಪ ಕೊಟ್ಟ ಸಾರ್ಥಕ ಸಾಹಿತಿ

ಭಟ್ಟರ ಕಾರ್ಯಕ್ಕೆ ಸಾಹಿತಿ ಡಾ.ಡಿ.ಕೆ.ರಾಜೇಂದ್ರ ಪ್ರಶಂಸೆ

ಮೈಸೂರು, ಜು.11(ಆರ್‌ಕೆಬಿ)– ಮೈಸೂರಿನ ವಿಜಯ ವಿಠ್ಠಲ ಕಾಲೇಜು ಸಭಾಂಗಣದಲ್ಲಿ ಸೋಮವಾರ ಯಕ್ಷಗಾನ ಚಿಂತಕ ಹಾಗೂ ಹಿರಿಯ ಲೇಖಕ ಜಿ.ಎಸ್.ಭಟ್ಟ ಅವರ ಮೂರು ಕೃತಿಗಳನ್ನು ಸಾಹಿತಿ ಡಾ.ಡಿ.ಕೆ.ರಾಜೇಂದ್ರ ಬಿಡುಗಡೆ ಮಾಡಿದರು.

ವಿಜಯವಿಠ್ಠಲ ವಿದ್ಯಾಸಂಸ್ಥೆ, ಕನ್ನಡ ಸಾಹಿತ್ಯ ಕಲಾ ಕೂಟ, ರೇಣುಕಾ ಪ್ರಕಾಶನ ಹಾಗೂ ಸಂಪ್ರತಿ ಎಂಟರ್‌ಪ್ರೈಸಸ್ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ 'ಲೋಕಮಾನ್ಯ ಬಾಲಗಂಗಾಧರ ತಿಲಕ್', 'ಲಾಲಾ ಲಜಪತ್ ರಾಯ್' ಮತ್ತು 'ರಾಜಾ ರಾಮಮೋಹನ ರಾಯ್' ಕೃತಿಗಳನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಜೀವನ ಚರಿತ್ರೆಗಳಲ್ಲಿ ಬದುಕಿನ ಪಾಠವಿದೆ. ಅದನ್ನು ಅರಿತಿರುವ ಜಿ.ಎಸ್.ಭಟ್ಟ ಅವರು ತಮ್ಮ ನಿವೃತ್ತಿ



ಮೈಸೂರಿನ ವಿಜಯ ವಿಠ್ಠಲ ಕಾಲೇಜು ಸಭಾಂಗಣದಲ್ಲಿ ಯಕ್ಷಗಾನ ಚಿಂತಕ ಹಾಗೂ ಹಿರಿಯ ಲೇಖಕ ಜಿ.ಎಸ್.ಭಟ್ಟ ಅವರ ಮೂರು ಕೃತಿಗಳನ್ನು ಸಾಹಿತಿ ಡಾ.ಡಿ.ಕೆ.ರಾಜೇಂದ್ರ ಬಿಡುಗಡೆ ಮಾಡಿದರು. ಚಿತ್ರದಲ್ಲಿ ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ, ಕಾಲೇಜು ಪ್ರಾಂಶುಪಾಲ ಹೆಚ್.ಸತ್ಯಪ್ರಸಾದ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕರ್ನಾಟಕ ಯಕ್ಷಗಾನ ಅಕಾಡೆಮಿ ಸದಸ್ಯ ಜಿ.ಎಸ್.ಭಟ್ಟ, ಸಹಕಾರಿ ಜಗದೀಶ್ ಹೆಬ್ಬಾರ್ ಅವರನ್ನು ಕಾಣಬಹುದು.

ಜೀವನದಲ್ಲಿ ಬಹು ದೊಡ್ಡ ಸಾಧಕರನ್ನು ಕುರಿತು ಪುಸ್ತಕಗಳನ್ನು ಬರೆದಿದ್ದಾರೆ. ಈ ಸಾಧನೆಯ ಹಿಂದೆ ಬದ್ಧತೆ ಇದೆ. ಹೀಗಾಗಿಯೇ ಇತಿಹಾಸದ ವಿಚಾರಗಳನ್ನು ಸಂಗ್ರಹಿಸಿ ಅದಕ್ಕೆ ಸಾಹಿತ್ಯ ರೂಪ ನೀಡುವ ಸಾರ್ಥಕ ಕಾರ್ಯ ಮಾಡಿದ್ದಾರೆ ಎಂದು ತಿಳಿಸಿದರು. ನಂತರ ಕೃತಿ ಕುರಿತು ಮಾತನಾಡಿದ ಲೇಖಕ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ ಅವರು, ಐತಿಹಾಸಿಕ ವ್ಯಕ್ತಿಗಳ ವ್ಯಕ್ತಿ ಚಿತ್ರ ಬರೆಯುವುದು ಸಂಶೋಧನಾತ್ಮಕ ಕಾರ್ಯವಾಗಿದೆ. ಇದಕ್ಕೆ ಕಾದಂಬರಿ, ಕಥೆಗಳನ್ನು ರಚಿಸುವುದಕ್ಕಿಂತ ಹೆಚ್ಚು ಸಾಮರ್ಥ್ಯ ಬೇಕಾಗುತ್ತದೆ. ಇತಿಹಾಸದ ಪಾತ್ರಗಳಿಗೆ ಸಾಹಿತ್ಯ ರೂಪ ನೀಡುವ ಕಾರ್ಯ ಶ್ಲಾಘನೀಯ ಎಂದು ಹೇಳಿದರು. ವಿಜಯವಿಠ್ಠಲ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಹೆಚ್.ಸತ್ಯಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕರ್ನಾಟಕ ಯಕ್ಷಗಾನ ಅಕಾಡೆಮಿ ಸದಸ್ಯ ಜಿ.ಎಸ್. ಭಟ್ಟ, ಸಹಕಾರಿ ಜಗದೀಶ್ ಹೆಬ್ಬಾರ್ ಇನ್ನಿತರರು ಉಪಸ್ಥಿತರಿದ್ದರು.

ಜು.19ರಿಂದ 3 ದಿನ ಶ್ರೀ ಚಾಮುಂಡೇಶ್ವರಿ ಪೂಜಾ ಮಹೋತ್ಸವ

ಮೈಸೂರು, ಜು.11(ಆರ್‌ಕೆಬಿ)–ಮೈಸೂರಿನ ಶಾರದಾದೇವಿನಗರದ ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಯುವಕರ ಸೇವಾ ಸಮಿತಿಯ 24ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ ಜು.19 ರಿಂದ ಮೂರು ದಿನ ನಡೆಯಲಿದೆ.

19ರಂದು ಪ್ರತಿಷ್ಠಾಪನೆ, 20ರಂದು ದೇವಿಗೆ ವಿಶೇಷ ಪೂಜೆ, 21ರಂದು ಅನ್ನಸಂತರ್ಪಣೆ ಹಾಗೂ ಸಂಜೆ ದೇವಿ ವಿಗ್ರಹ ವಿಸರ್ಜನೆ ನಡೆಯಲಿದೆ. ಕಾರ್ಯಕ್ರಮಕ್ಕೆ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಸಂಸದ ಪ್ರತಾಪ್‌ಸಿಂಹ, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ನಗರಪಾಲಿಕೆ ಸದಸ್ಯೆ ನಿರ್ಮಲಾ ಹರೀಶ್ ಇನ್ನಿತರರು ಭಾಗವಹಿಸಲಿದ್ದಾರೆ.

ಜು.19ರಂದು ಬೆಳಗ್ಗೆ 9:30ಕ್ಕೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಮೂರ್ತಿಯ ಮೆರವಣಿಗೆ ಅರಳಿಕಟ್ಟೆಯಿಂದ ಹೊರಟು ಶಾರದಾದೇವಿನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ, ಸಂಜೆ 7ಕ್ಕೆ ವಿದುಷಿ ಲಕ್ಷ್ಮೀ ನಾಜರೆ ಶಿಷ್ಯವೃಂದದಿಂದ ಭರತನಾಟ್ಯ, ನಂತರ ರಸಮಂಜರಿ ಕಾರ್ಯಕ್ರಮವಿದೆ.



ಜು.20ರಂದು ಸಂಜೆ 6 ಗಂಟೆಗೆ ಹರಿದಾಸ ಪೂಜೆ, ಶ್ರೀಹರಿ ಹರಿದಾಸ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ. ಜು.21ರಂದು ಬೆಳಗ್ಗೆ 11.30ಕ್ಕೆ ವಿದ್ವಾನ್ ಬಿಳಿಕೆರೆ ಬಿ.ಎಸ್.ಗಂಗಾಧರ ಆಚಾರ್ ಅವರಿಂದ ಶ್ರೀದೇವಿ ಮಹಾತ್ಮೆ ಅಥವಾ ಶ್ರೀ ಚಾಮುಂಡೇಶ್ವರಿ ವೈಭವ ಭಕ್ತಿ ಪ್ರಧಾನ ಹರಿಕಥೆ. ಮಧ್ಯಾಹ್ನ 12.30 ಗಂಟೆಗೆ ಅನ್ನ ಸಂತರ್ಪಣೆ ನಡೆಯಲಿದೆ ಎಂದು ಸಂಘದ ಕಾರ್ಯದರ್ಶಿ ಹೇಮಂತ್ ಲಾಳಿಗೆ ತಿಳಿಸಿದ್ದಾರೆ.

3ನೇ ವರ್ಷದ ಪೂಜಾ ಮಹೋತ್ಸವ: ಕೃಷ್ಣರಾಜ ಕ್ಷೇತ್ರ ಶ್ರೀ ಭಾವಸಾರ ಕ್ಷತ್ರಿಯ ಸೇವಾ ಸಮಿತಿಯ ಆಶ್ರಯದಲ್ಲಿ 3ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ ಮೈಸೂರಿನ ಕೆ.ಆರ್.ಮೊಹಲ್ಲಾದ ಬಿ.ಬಿ.ಲಾಯ ರಸ್ತೆ ಜಯಲಕ್ಷ್ಮಿ ಸ್ಕೂಲ್ ಹತ್ತಿರ ಜು.19ರಿಂದ 21ರವರೆಗೆ ನಡೆಯಲಿದೆ.

ಜು.19ರಂದು ಬೆಳಗ್ಗೆ 10.45ಕ್ಕೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪ್ರತಿಷ್ಠಾಪನೆ, 20ರಂದು ಮಧ್ಯಾಹ್ನ 12.30 ಗಂಟೆಗೆ ಅನ್ನ ಸಂತರ್ಪಣೆ ಹಾಗೂ ಗಣ್ಯರಿಗೆ ಸನ್ಮಾನ ಕಾರ್ಯಕ್ರಮ, 21ರಂದು ಶ್ರೀರಂಗಪಟ್ಟಣದ ನಿಮಿಷಾಂಬ ದೇವಸ್ಥಾನದ ಬಳಿಯ ಕಾವೇರಿ ನದಿಯಲ್ಲಿ ದೇವಿಯ ವಿಗ್ರಹ ವಿಸರ್ಜನೆ ಮಾಡಲಾಗುವುದು. ವಿಶೇಷ ಅತಿಥಿಗಳಾಗಿ ಆಲ್ ಇಂಡಿಯಾ ಭಾವಸಾರ ಕ್ಷತ್ರಿಯ ಮಹಾಸಭಾ ರಾಜ್ಯಾಧ್ಯಕ್ಷ ಎನ್.ವಿ.ಶ್ರೀನಿವಾಸರಾವ್ ಪಿಸ್ಸೆ, ಮೈಸೂರು ಭಾವಸಾರ ಕ್ಷತ್ರಿಯ ಮಂಡಳಿ ಅಧ್ಯಕ್ಷ ಶಿವಾಜಿರಾವ್ ರುಷೂರೆ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಸಮಿತಿಯ ಕಾರ್ಯದರ್ಶಿ ಚಂದ್ರಶೇಖರ್ ಪತಂಗೆ ತಿಳಿಸಿದ್ದಾರೆ.

ರಾಷ್ಟ್ರಪತಿ ಚುನಾವಣೆ ಶಿವಸೇನೆಯ 13 ಸಂಸದರ ಸಭೆ

ಮುರ್ಮುಗೆ ಹೆಚ್ಚು ಬೆಂಬಲ

ಮುಂಬೈ: ರಾಷ್ಟ್ರಪತಿ ಚುನಾವಣೆ ವಿಷಯವಾಗಿ ಶಿವಸೇನೆಯ 18 ಸಂಸದರ ಪೈಕಿ 13 ಮಂದಿ ಜು.11 ರಂದು ಮಹಾರಾಷ್ಟ್ರದಲ್ಲಿ ಸಭೆ ನಡೆಸಿದ್ದಾರೆ.

ಸಭೆಯಲ್ಲಿ ಭಾಗವಹಿಸಿದ್ದವರ ಪೈಕಿ ಹೆಚ್ಚಿನ ಸದಸ್ಯರು ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರನ್ನು ಬೆಂಬಲಿಸಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದು ಪಕ್ಷದ ನಾಯಕ ಗಜಾನನ್ ಕಿರಿತ್ಕರ್ ಹೇಳಿದ್ದಾರೆ. ಆದರೆ ಪಕ್ಷದ ಸಂಸದರೂ ಆಗಿರುವ ಮುಖ್ಯ ವಕ್ತಾರ ಸಂಜಯ್ ರೌತ್, ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯದ ಬಗ್ಗೆ ಹೆಚ್ಚಿನ ವಿವರಗಳನ್ನು ನೀಡಲಿಲ್ಲ ಎಂದರು.

ಆದರ್ಶ ವಿದ್ಯಾಲಯ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು.ಜು.11 ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(ಡಯಟ್) ವತಿಯಿಂದ 2022–23ನೇ ಸಾಲಿನ ಜಿಲ್ಲೆಯ 6 ಆದರ್ಶ ವಿದ್ಯಾಲಯಗಳಲ್ಲಿ 7, 8 ಮತ್ತು 9ನೇ ತರಗತಿಗಳಿಗೆ ಖಾಲಿ ಇರುವ ಸೀಟುಗಳನ್ನು ಭರ್ತಿ ಮಾಡಲು ಪ್ರವೇಶ ಪರೀಕ್ಷೆ ನಡೆಸುತ್ತಿದ್ದು, ಅರ್ಜಿ ಸಲ್ಲಿಸಲು ಜು.18 ಕೊನೆಯ ದಿನ. ಪರೀಕ್ಷಾ ದಿನಾಂಕವು ಜು.26ರಂದು ಮಂಗಳವಾರ ಬೆಳಗ್ಗೆ 10.30 ರಿಂದ 1 ಗಂಟೆವರೆಗೆ ಆಯಾ ತಾಲೂಕಿನ ಆದರ್ಶ ವಿದ್ಯಾಲಯಗಳು (ಮೈಸೂರು ದಕ್ಷಿಣ ವಲಯ, ತಿ ನರಸೀಪುರ, ನಂಜನಗೂಡು, ಹೆಚ್.ಡಿ.ಕೋಟೆ, ಕೆ.ಆರ್.ನಗರ, ಹುಣಸೂರು) ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಕೇವಲ ತರಗತಿವಾರು ಖಾಲಿ ಇರುವ ಸೀಟುಗಳನ್ನು ಮಾತ್ರ ಮೀಸಲಾತಿ ಅನುಸಾರ ಪರೀಕ್ಷೆಯಲ್ಲಿ ಅರ್ಹತೆ ಪಡೆದ ಆಯಾ ವರ್ಗದ ವಿದ್ಯಾರ್ಥಿಗಳಿಂದಲೇ ದಾಖಲಾತಿ ಮಾಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರನ್ನು ಖುದ್ದು ಸಂಪರ್ಕಿಸಲು ಕೋರಿದೆ ಅಥವಾ 9972 713465 ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಜನಸಂಖ್ಯೆ ನಿಯಂತ್ರಣಕ್ಕೆ ಕುಟುಂಬ ಯೋಜನೆ ಅಳವಡಿಕೆ ಜನಾಂದೋಲನವಾಗಬೇಕು

● ಆರೋಗ್ಯ ಸಚಿವ ಡಾ.ಸುಧಾಕರ್ ಅಭಿಮತ ● ಭಾರತದಲ್ಲಿ ಯುವಕರ ಸಂಖ್ಯೆ ಶೇ.60 ಇರುವುದು ಸದಾಶಯ

ಬೆಂಗಳೂರು, ಜು.11(ಕೆಎಂಶಿ)–ಭಾರತದ ಜನಸಂಖ್ಯೆ 140 ಕೋಟಿಗೆ ಸಮೀಪದಲ್ಲಿದ್ದರೂ, ಯುವಜನರ ಸಂಖ್ಯೆ ಹೆಚ್ಚಿರುವುದು ದೇಶಕ್ಕೆ ಲಾಭದಾಯಕ. ಆದರೂ ಜನಸಂಖ್ಯೆ ಏರಿಕೆಗೆ ಮಿತಿ ಹೇರಲು ಕುಟುಂಬ ಯೋಜನೆಯ ಅಳವಡಿಕೆ ಜನಾಂದೋಲನದಂತೆ ನಡೆಯಬೇಕಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಕರೆ ನೀಡಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನಡೆದ 'ವಿಶ್ವ ಜನಸಂಖ್ಯಾ ದಿನಾಚರಣೆ'ಯಲ್ಲಿ ಮಾತನಾಡಿದ ಸಚಿವರು, ವೈದ್ಯಕೀಯ ಆವಿಷ್ಕಾರ ಹಾಗೂ ಉತ್ಕೃಷ್ಟ ಆರೋಗ್ಯ ಸೇವೆಗಳಿಂದಾಗಿ ಜನರ ಗರಿಷ್ಠ ವಯೋಮಿತಿ 65–70 ಕ್ಕೆ ತಲುಪಿದೆ. ಮುಂದುವರಿದ ದೇಶಗಳಲ್ಲಿ 80 ವರ್ಷ ವಯಸ್ಸಿನವರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಜಪಾನ್, ಇಟಲಿ, ಸ್ಪೇನ್ ಮೊದಲಾದ ದೇಶಗಳಲ್ಲಿ ಹಿರಿಯ ನಾಗರಿಕರು ಹೆಚ್ಚಿದ್ದು, ಯುವಜನರ ಸಂಖ್ಯೆ ಕಡಿಮೆಯಾಗಿದೆ. ಆದರೆ ಭಾರತದಲ್ಲಿ ಶೇ.60 ರಷ್ಟು ಮಂದಿ 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದಾರೆ. ಇಂತಹ ಯುವಜನರು ದೇಶದ ಶಕ್ತಿಯಾಗಿದ್ದಾರೆ. ಜನಸಂಖ್ಯೆ ಹೆಚ್ಚಿದ್ದರೂ, ಯುವಜನರು ಹೆಚ್ಚಿರುವುದರಿಂದ ದೇಶಕ್ಕೆ ಲಾಭವಾಗಿದೆ. ಜಗತ್ತಿನಲ್ಲಿ ಭಾರತ ಮೂರನೇ ಅತಿ ದೊಡ್ಡ ಆರ್ಥಿಕ ವ್ಯವಸ್ಥೆಯಾಗಿದೆ. ಅತೀ ಹೆಚ್ಚು ಗ್ರಾಹಕರನ್ನು ದೇಶ ಹೊಂದಿರುವುದರಿಂದ ಬಹುರಾಷ್ಟ್ರೀಯ ಕಂಪನಿಗಳು ಇತ್ತ ಕಡೆ ನೋಡುತ್ತಿವೆ ಎಂದರು.



ಭಾರತದಲ್ಲಿ ಜನಸಂಖ್ಯೆ ವೇಗವಾಗಿ ಏರಿಕೆಯಾಗುತ್ತಿದೆ. ಜಗತ್ತಿನ ಜನಸಂಖ್ಯೆ 500 ಕೋಟಿಯಿಂದ 800 ಕೋಟಿಗೆ ತಲುಪಿದೆ. ಭಾರತದ ಜನಸಂಖ್ಯೆ 1.4 ಬಿಲಿಯನ್‌ಗೆ ತಲುಪಿದೆ. ಇದರಿಂದಾಗಿ ಸಮಾಜಕ್ಕೆ, ಪರಿಸರಕ್ಕಾಗುವ ದುಷ್ಪರಿಣಾಮವೇನು ಎಂದು ಕೂಡ ಆಲೋಚಿಸಬೇಕಿದೆ. ಹಾಗೆಯೇ ಸೂಕ್ಷ್ಮವಾಗಿ ಅವಲೋಕಿಸಿ ನಿರ್ಧಾರಗಳನ್ನು ಕೈಗೊಳ್ಳಬೇಕಿದೆ. ಹಿಂದೆ ಭಾರತದ ಕುಟುಂಬಗಳಲ್ಲಿ ಮೂರು ನಾಲ್ಕು ಮಕ್ಕಳಿರುತ್ತಿದ್ದರು. ಕಾಲಕ್ರಮೇಣ ಅವಿಭಕ್ತ ಕುಟುಂಬ ಪದ್ಧತಿ ಮರೆಯಾಗುತ್ತಿದೆ ಎಂದರು.

ಕುಟುಂಬದಲ್ಲಿ ಹೆಚ್ಚು ಮಕ್ಕಳಿದ್ದರೆ ಖರ್ಚು ಹೆಚ್ಚುತ್ತದೆ. ನಾಲ್ಕು ಮಕ್ಕಳ ಬದಲು ಇಬ್ಬರಿದ್ದರೆ ಅವರಿಗೆ ಉತ್ತಮ ಶಿಕ್ಷಣ, ಆರೋಗ್ಯ ಸೌಲಭ್ಯವನ್ನು ನೀಡಬಹುದು. ನೈಸರ್ಗಿಕ ಸಂಪನ್ಮೂಲ ಹಿಂದೆ ಇದ್ದಷ್ಟೇ ಇರುತ್ತದೆ. ಹಾಗೆಯೇ ಭೌಗೋಳಿಕ ವಿಸ್ತೀರ್ಣ ಕೂಡ ಅಷ್ಟೇ ಇರುತ್ತದೆ. ಹಿಂದಿಗಿಂತ ದೇಶದ ಜನಸಂಖ್ಯೆ 6–7 ಪಟ್ಟು ಹೆಚ್ಚಿದ್ದರೂ, ಭೂಮಿ, ನೀರು ಮೊದಲಾದ ಸಂಪನ್ಮೂಲಗಳೇನೂ ಹೆಚ್ಚಾಗುವುದಿಲ್ಲ. ರಾಜ್ಯದ ಕೆಲ ಜಿಲ್ಲೆಗಳಲ್ಲಿ ಭೂ ಕುಸಿತ, ಭಾರಿ ಮಳೆ ಸೇರಿದಂತೆ ವಿವಿಧ ಬಗೆಯ ಹವಾಮಾನ ವೈಪರೀತ್ಯ ಉಂಟಾಗುತ್ತಿದೆ. ಇದಕ್ಕೆ ಜನಸಂಖ್ಯೆ ಏರಿಕೆ ಕೂಡ ಕಾರಣ ಎಂದರು.

ಹಿಂದೆ ಆರೋಗ್ಯ ಸೌಲಭ್ಯಗಳು ಕಡಿಮೆ ಇದ್ದಿದ್ದರಿಂದ ಆತಂಕ ಇತ್ತು. ಆದರೆ ಇಂದು ಆರೋಗ್ಯ ಸೌಲಭ್ಯಗಳು ಉತ್ತಮವಾಗಿರುವುದರಿಂದ ಆ ಆತಂಕ ಈಗಿಲ್ಲ. ಹಿಂದಿಗಿಂತಲೂ ಜೀವನ ಗುಣಮಟ್ಟ ಈಗ ಹೆಚ್ಚಿದೆ. ಆದ್ದರಿಂದ ಸಣ್ಣ ಸಂಸಾರವಿದ್ದರೆ ಆರ್ಥಿಕತೆ ಉತ್ತಮವಾಗಿರುತ್ತದೆ. ಈ ಬಗ್ಗೆ ಹೆಚ್ಚು ಅರಿವು ಮೂಡಿಸುವ ಕೆಲಸವಾಗಬೇಕಿದೆ. ಕುಟುಂಬ ಯೋಜನೆಯ ಜಾರಿಯಲ್ಲಿ ಆಶಾ ಕಾರ್ಯಕರ್ತೆಯರು ಪ್ರಮುಖ ಪಾತ್ರ ವಹಿಸಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಈ ಕುರಿತು ಇನ್ನಷ್ಟು ಜಾಗೃತಿ ಕಾರ್ಯ ನಡೆಯಬೇಕು ಎಂದು ಸೂಚಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು 'ನಮ್ಮ ಕ್ಲಿನಿಕ್' ಯೋಜನೆ ಜಾರಿಗೆ ತಂದಿದ್ದಾರೆ. ಕೇಂದ್ರ ಸರ್ಕಾರವು ಮಹಿಳೆಯರಿಗಾಗಿ ಕ್ಲಿನಿಕ್‌ಗಳನ್ನು ತೆರೆಯಬೇಕೆಂದು ಹೇಳಿದೆ. ಇಂತಹ ಕ್ಲಿನಿಕ್‌ಗಳಲ್ಲಿ ಕುಟುಂಬ ಯೋಜನೆ ಕುರಿತು ಜನರಿಗೆ ಅರಿವು ಮೂಡಿಸುವ ಕೆಲಸವಾಗಬೇಕು ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.07.2022 ಮಂಗಳವಾರ, ಮಳೆ ನಕ್ಷತ್ರ : ಪುನರ್ವಸು, 06.07.2022 ರಿಂದ 19.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ
ತಿಥಿ: ಚತುರ್ದಶಿ, ನಕ್ಷತ್ರ : ಮೂಲಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಫೆಸ್ಟಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೊಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿ ಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ: 10 ಗಂಟೆಯಿಂದ ರಾತ್ರಿ 9.30 ಗಂಟೆವರೆಗೆ.

■ **ಭಾರತೀಯ ರೆಡ್ ಕ್ರಾಸ್ ಸೊಸೈಟಿ, ಸಮದೃಷ್ಟಿ, ಕ್ಷಮತಾವಿಕಾಸ ಮತ್ತು ಅನುಸಂಧಾನ ಮಂಡಲ :** 143ನೇ ಹೆಲ್ಲನ್ ಕೆಲ್ಲರ್ ಜಯಂತ್ಯೋತ್ಸವದ ಅಂಗವಾಗಿ ರಕ್ತದಾನ ಶಿಬಿರ, ಅಧ್ಯಕ್ಷತೆ : ಸಕ್ಷಮ ಜಿಲ್ಲಾ ಸಮಿತಿ ಅಧ್ಯಕ್ಷ ಡಾ. ಚಂದ್ರಶೇಖರ್, ಉದ್ಘಾಟನೆ : ಅರ್ಪಿತಾ ಪ್ರತಾಪ್ ಸಿಂಹ, ಉಪಸ್ಥಿತರು : ಭಾರತೀಯ ರೆಡ್ ಕ್ರಾಸ್ ಸೊಸೈಟಿ ಸಭಾಪತಿ ಡಾ. ಎಂ.ಎಸ್. ಜಯಂತ್, ವಕೀಲ ಎಸ್.ಎಸ್. ವೈದ್ಯನಾಥ್, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ರಕ್ತನಿಧಿ ಕೇಂದ್ರದ ಮುಖ್ಯಸ್ಥ ಡಾ. ಬಿ.ಎಸ್. ಮಂಜುನಾಥ್, ಎಂ.ಎಸ್. ಶರತ್, ಅರುಣಾಚಲ ಶರ್ಮ, ಸ್ಥಳ: ಮಾಧವ ಕೃಪಾ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30 ರಿಂದ.

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ :** ಜನಪದ ಸಂಭ್ರಮ, ಉದ್ಘಾಟನೆ : ಶಾಸಕ ಅಶ್ವಿನ್ ಕುಮಾರ್, ಅಧ್ಯಕ್ಷತೆ : ಸಾಹಿತಿ ಕಾಳೇಗೌಡ ನಾಗವಾರ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ ವಿ.ಎಸ್., ಡಾ. ಎಂ.ಡಿ. ಸುದರ್ಶನ್, ಡಾ. ವಿಜಯಲಕ್ಷ್ಮಿ ಮನಾಪುರ, ಶ್ರೀವತ್ಸ, ಕೃಷ್ಣಮೂರ್ತಿ ತಲಕಾಡು, ಸ್ಥಳ: ಕಿರುರಂಗಮಂದಿರ, ಕಲಾಮಂದಿರದ ಆವರಣ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ :** ದಿವಂಗತ ಕೆ.ಹೆಚ್. ರಾಮಯ್ಯ ಅವರ ಹುಟ್ಟುಹಬ್ಬದ ಪ್ರಯುಕ್ತ ಅವರ ಸಮಾಧಿಗೆ ಪೂಜೆ, ಅಧ್ಯಕ್ಷತೆ : ವೇದಿಕೆ ಗೌರವಾಧ್ಯಕ್ಷ ಹೆಚ್.ಕೆ. ರಾಮು, ಸ್ಥಳ: ಕೆ.ಹೆಚ್. ರಾಮಯ್ಯನವರ ಸಮಾಧಿ, ಚಾಮುಂಡಿಬೆಟ್ಟದ ತಪ್ಪಲು, ಬೆಳಗ್ಗೆ 11.30ಕ್ಕೆ.

■ **ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ, ಕೆ.ಆರ್. ಮಿಲ್ಸ್ ಕಾಲೋನಿ:** ಶ್ರೀ ಚಾಮುಂಡೇಶ್ವರಿ ಅಮ್ಮನವರ 19ನೇ ವರ್ಷದ ಜಾತ್ರಾ ಮಹೋತ್ಸವ, ಬೆಳಗ್ಗೆ 6ಕ್ಕೆ ಅಮ್ಮನವರಿಗೆ ತಂಬಿಟ್ಟಿನ ಆರತಿ, ಮಧ್ಯಾಹ್ನ 12ಕ್ಕೆ ಅನ್ನಸಂತರ್ಪಣೆ, ಸಂಜೆ 7ಕ್ಕೆ ರಸಮಂಜರಿ ಕಾರ್ಯಕ್ರಮ, ಸ್ಥಳ: ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ, ಕೆ.ಆರ್.ಮಿಲ್ಸ್ ಕಾಲೋನಿ.

■ **ಧರ್ಮಪ್ರಕಾಶ ಡಿ. ಬನುಮಯ್ಯ ಬಾಲಕಿಯರ ಪ್ರೌಢಶಾಲೆ, ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ :** ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರ ಜನ್ಮ ದಿನಾಚರಣೆ, ಅಧ್ಯಕ್ಷತೆ : ಪ್ರೌಢಶಾಲಾ ಮುಖ್ಯ ಶಿಕ್ಷಕ ಎಚ್.ಎಸ್. ತಿಪ್ಪೇಸ್ವಾಮಿ, ಪ್ರಧಾನ ಭಾಷಣ : ಸಾಹಿತಿ ಬನ್ನೂರು ಕೆ. ರಾಜು, ಮುಖ್ಯ ಅತಿಥಿಗಳು : ಪತ್ರಕರ್ತ ದೊಡ್ಡನಹುಂಡಿ ರಾಜಣ್ಣ, ಚಿತ್ರ ಕಲಾವಿದ ಜಿ.ಟಿ. ಶ್ರೀನಿವಾಸಮೂರ್ತಿ, ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ. ಕಾವೇರಿಯಮ್ಮ, ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ. ಸಂಗಪ್ಪ, ಸ್ಥಳ: ಡಿ. ಬನುಮಯ್ಯ ಬಾಲಕಿಯರ ಪ್ರೌಢಶಾಲೆ, ಮಧ್ಯಾಹ್ನ 2.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿ.ಎಸ್. ಗೋಪಾಲ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್., 9.30 ವೃತ್ತಿ ಮಾರ್ಗದರ್ಶನ–ಕೃಷಿ ವಿಜ್ಞಾನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ಎಸ್.ಎಸ್. ಪ್ರಕಾಶ್ ಅವರೊಂದಿಗೆ ಮಾತುಕತೆ, 10.00 ಗಾನ ರಸೋತ್ತುಂಗ ಶ್ರೀ ಶ್ಯಾಮಕೃಷ್ಣ –ಶ್ರೀ ಶ್ಯಾಮಾಶಾಸ್ತ್ರಿಗಳ ಕೃತಿಗಳನ್ನಾಧರಿಸಿದ ಕಾರ್ಯಕ್ರಮ, 10.30 ನಮ್ಮ ಆರೋಗ್ಯ–ಕ್ಯಾನ್ಸರ್ ಜಾಗೃತಿ ಪ್ರಾಯೋಜಿತ ಕಾರ್ಯಕ್ರಮ, ಭಾಗವಹಿಸುವ ತಜ್ಞರು– ಡಾ.ಎಂ.ಎಸ್. ಗಿರೀಶ್

ಮಧ್ಯಾಹ್ನ: 12.05 ವನಿತಾ ವಿಹಾರ–ಸ್ತ್ರೀಚೇತನ, ಅನಾಥ ಪ್ರಾಣಿಗಳ ಸಂರಕ್ಷಣೆ ಕುರಿತು ಶಿಲ್ಪಶ್ರೀ ಅವರೊಂದಿಗೆ ಮಾತುಕತೆ, 12.30 ದೇವರನಾಮ–ಎ.ಎನ್. ಶೀಲಾ, 1.20 ಭಾವಗೀತೆ – ಜಿ. ಪುಷ್ಪಲತಾ, 3.00 ಕೆ. ಸುಧಾ–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ 'ನಲ್ಲ ತಂಗಾದೇವಿ', ಪ್ರಸ್ತುತಿ – ವಿದ್ವಾನ್ ಆರ್. ಗುರುರಾಜುಲು ನಾಯ್ಡು, 6.50 ಕೃಷಿರಂಗ–ಕಿಸಾನ್ ವಾಣಿ, ಗೋಸಂರಕ್ಷಣೆಗೆ ಯೋಜನೆಗಳು ಹಾಗೂ ಗೋ ಹತ್ಯಾ ನಿಷೇಧ ಕಾಯ್ದೆ ಕುರಿತು ಡಾ.ವೈ.ಡಿ. ರಾಜಣ್ಣ ಅವರೊಂದಿಗೆ ಸಂದರ್ಶನ, 9.30 ತಿಟ್ಟೆಕೃಷ್ಣ ಅಯ್ಯಂಗಾರ್ – ಹಾಡುಗಾರಿಕೆ, 10.00 ಯಕ್ಷ ಸಂಪದ–ಯಕ್ಷಗಾನ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ, ನಿರ್ಮಾಣ – ದಿವಾಕರ ಹೆಗಡೆ, 10.30 ಸವಿನೆನಪು

■ **ಚಿನ್ಮಯ ಮಿಷನ್ ಮೈಸೂರು :** ಸ್ವಾಮಿ ಅಪರಾಜಿತನಂದ ಅವರಿಂದ ಇಂಗ್ಲಿಷ್‌ನಲ್ಲಿ ಗೀತಾ ಜ್ಞಾನ ಯಜ್ಞ, ಪುರುಷೋತ್ತಮ ಯೋಗ (ಭಗವದ್ಗೀತೆಯ 15 ಚಾಪ್ಟರ್) ಕುರಿತು ಉಪನ್ಯಾಸ, ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಸಂಜೆ 6.30ರಿಂದ.

■ **ದತ್ತ ಕ್ರಿಯಾ ಯೋಗ ಅಂತಾರಾಷ್ಟ್ರೀಯ ಸಂಸ್ಥೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು:** ಯೋಗ ಶಿಕ್ಷಕ ಎನ್. ಅನಂತ ರಚಿಸಿರುವ ಯೋಗಿರಾಜ ಶ್ರೀ ತಿರುಮಲೆ ಕೃಷ್ಣಮಾಚಾರ್ಯ ಕೃತಿ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಕೃತಿ ಬಿಡುಗಡೆ : ಜಿಲ್ಲಾ ಉಸ್ತುವಾರಿ ಸಚಿ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು : ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಭರತ್ ಶೆಟ್ಟಿ, ಡಾ.ಕೆ.ರಘುರಾಂ ವಾಜಪೇಯಿ, ಡಾ.ಎಸ್.ಪಿ.ಯೋಗಣ್ಣ, ಎನ್. ಅನಂತ, ಡಾ. ಪಿ.ವಿ. ಫಣಿಶ್ರೀ, ಡಾ. ಬಿ.ಪಿ. ಮೂರ್ತಿ, ಎಂ.ವಿ. ನಾಗೇಂದ್ರಬಾಬು, ವಿಕಾಸ್ ಶಾಸ್ತ್ರಿ, ಸ್ಥಳ: ಪೌಂಡರೀಕ ಸಭಾಂಗಣ, ಅವಧೂತ ದತ್ತಪೀಠ, ಸಂಜೆ 6.30ಕ್ಕೆ.

■ **ನಾದರಂಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ರಂಗ ಸಂಭ್ರಮ–2022, ಮೈಸೂರಿನ ನಾದರಂಗ ಅವರಿಂದ ಮೈಸೂರು ಆರ್. ಜಯರಾಂ ವಿರಚಿತ 'ಛತ್ರಪತಿ ಶಿವಾಜಿ' ಐತಿಹಾಸಿಕ ನಾಟಕ ಪ್ರದರ್ಶನ, ನಿರ್ದೇಶನ: ಗೋಪಾಲರಾವ್ ಜಾದವ್, ನಿರ್ವಹಣೆ: ಡಿ.ನಾಗೇಂದ್ರಕುಮಾರ್, ಸ್ಥಳ:ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 7ಕ್ಕೆ.

ಗುರು ಪೂರ್ಣಿಮೆ: ನಾಳೆ ವಿಶೇಷ ಪೂಜೆ

ಮೈಸೂರು, ಜು.11– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಬುಧವಾರ ಗುರುಪೂರ್ಣಿಮೆ ಪ್ರಯುಕ್ತ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಶ್ರೀ ಸತ್ಯನಾರಾಯಣ ಪೂಜೆ, ಮಹಾ ಸುದರ್ಶನ ಹೋಮ, ಮಹಾ ಮೃತ್ಯುಂಜಯ ಹೋಮ, ಮಿಥುನ, ಕನ್ಯಾ, ಧನಸ್ಸು, ಮಕರ, ಕುಂಭ ರಾಶಿಯವರಿಗೆ ವಿಶೇಷ ಸಂಕಲ್ಪದೊಂದಿಗೆ ಶನಿ ಮಹಾಶಾಂತಿ ಏರ್ಪಡಿಸಲಾಗಿದೆ. ಬೆಳಗ್ಗೆ 9 ಗಂಟೆಗೆ ಪ್ರಾರಂಭವಾಗಿ 12 ಗಂಟೆಗೆ ಪೂರ್ಣಾಹುತಿ. ಹೆಚ್ಚಿನ ವಿವರಗಳಿಗೆ ಮೈ ಕುಮಾರ್ (ಜಾತಕ ವಿಮರ್ಶಕ)ರನ್ನು ಮೊ.ಸಂಖ್ಯೆ 9845183392 9342183392 ಮೂಲಕ ಸಂಪರ್ಕಿಸಬಹುದು.

ಟಿ.ಎಸ್.ನಾಗಾಭರಣ ಇಂದು ಜಿಲ್ಲಾ ಪ್ರವಾಸ



ಮೈಸೂರು,ಜು.11–ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಭರಣ, ಜು.12ರಂದು ಮೈಸೂರು ಜಿಲ್ಲಾ ಪ್ರವಾಸ ಹಮ್ಮಿಕೊಂಡಿದ್ದಾರೆ. ಅಂದು ಬೆಳಗ್ಗೆ 9 ಗಂಟೆಗೆ ಜಿಲ್ಲಾ ಜಾಗೃತಿ ಸದಸ್ಯರೊಂದಿಗೆ ಸರ್ಕಾರಿ ಅತಿಥಿ ಗೃಹದಲ್ಲಿ ಚರ್ಚೆ ನಡೆಸುವರು. ಬೆಳಗ್ಗೆ 11.30 ಗಂಟೆಗೆ ಮೈಸೂರಿನಲ್ಲಿ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯನ್ನು ಡಿಸಿ ಕಚೇರಿಯಲ್ಲಿ ನಡೆಸುವರು. ಸಂಜೆ 5 ಗಂಟೆಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರತಿಕಾಗೋಷ್ಠಿ ನಡೆಸುವರು ಎಂದು ಅವರ ಆಪ್ತ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ತಪ್ತ ಮುದ್ರಾಧಾರಣೆ

ಮೈಸೂರು,ಜು.11–ಸೋಸಲೆ ಶ್ರೀ ವ್ಯಾಸರಾಜ ಮಠದ ವತಿಯಿಂದ ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀವ್ಯಾಸತೀರ್ಥ ವಿದ್ಯಾಪೀಠದಲ್ಲಿ ಜು.13ರಂದು ಬೆಳಗ್ಗೆ 7ರಿಂದ 9.30ರವರೆಗೆ ಶ್ರೀ ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರು ತಪ್ತ ಮುದ್ರಾಧಾರಣೆ ನಡೆಸಿಕೊಡಲಿದ್ದಾರೆ. ಆಸ್ತಿಕ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಭಗವಂತನ ಕೃಪೆಗೆ ಪಾತ್ರರಾಗಬೇಕೆಂದು ಪ್ರಕಟಣೆಯಲ್ಲಿ ಕೋರಲಾಗಿದೆ.

ಯುವತಿ ನಾಪತ್ತೆ



ಮೈಸೂರು,ಜು.11–ತಾಲೂಕಿನ ಹಂಚ್ಯಾ ಗ್ರಾಮದ 17 ವರ್ಷದ ರಕ್ಷಿತಾ ಎಂಬ ಯುವತಿ ಜು.5ರಂದು ಬೆಳಗಿನ ಜಾವ 5 ಗಂಟೆಯಿಂದ ಕಾಣೆಯಾಗಿದ್ದಾಳೆ. ಈ ಸಂಬಂಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವತಿ ಚಹರೆ: 4.3 ಅಡಿ ಎತ್ತರ, ಸಾಧಾರಣ ಮೈಕಟ್ಟು, ಕನ್ನಡ ಭಾಷೆ ಮಾತನಾಡುತ್ತಾರೆ, ಬಿಳಿಬಣ್ಣದ ಟಾಪ್ ಹಾಗೂ ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ. ಮಾಹಿತಿ ದೊರೆತಲ್ಲಿ ಎಸ್ಪಿ ದೂ.ಸಂ: 2520040, ಮೈಸೂರು ನಗರ ನಿಸ್ತಂತು ಕೊಠಡಿ ಸಂ: 0821–2444800, ಮೈಸೂರು ಸೌತ್ ಪೊಲೀಸ್ ಠಾಣೆ ಸಂ:0821–2444955 ಸಂಪರ್ಕಿಸಿ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಸೋಮವಾರ	122.54 ಅಡಿ
ಒಳಹರಿವು	71147 ಕ್ಯೂಸೆಕ್
ಹೊರಹರಿವು	72612 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಸೋಮವಾರ	2282.68 ಅಡಿ
ಒಳ ಹರಿವು	32232 ಕ್ಯೂಸೆಕ್
ಹೊರ ಹರಿವು	38000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಸೋಮವಾರ	2854.00 ಅಡಿ
ಒಳ ಹರಿವು	19380 ಕ್ಯೂಸೆಕ್
ಹೊರ ಹರಿವು	25000 ಕ್ಯೂಸೆಕ್

ಹೇಮಾವತಿ ನೀರಿನ ಮಟ್ಟ



ಗರಿಷ್ಠ ಮಟ್ಟ	2922 ಅಡಿ
ಸೋಮವಾರ	2919.22 ಅಡಿ
ಒಳ ಹರಿವು	24509 ಕ್ಯೂಸೆಕ್
ಹೊರ ಹರಿವು	29575 ಕ್ಯೂಸೆಕ್

ವಿವಿಧ ಬೇಡಿಕೆಗಳ ಈಡೇರಿಸಲು ಆಗ್ರಹಿಸಿ ಮಳೆಯ ನಡುವೆಯೂ ಮೈಸೂರಲ್ಲಿ

ಅಂಗನವಾಡಿ ಕಾರ್ಯಕರ್ತರ ಪ್ರತಿಭಟನಾ ಮೆರವಣಿಗೆ

- ಚಾಮರಾಜನಗರ, ಮೈಸೂರು ಸಂಸದರ ಕಚೇರಿಗಳಲ್ಲಿ ಮನವಿ ಸಲ್ಲಿಕೆ
- ಸೇವಾ ಭದ್ರತೆಗೆ ಆತಂಕಕಾರಿಯಾದ ಕೇಂದ್ರ ಸುತ್ತೋಲೆ ವಾಪಸ್‌ಗೆ ಆಗ್ರಹ



ರಾಜ್ಯ ನಿಗದಿತ ಪಿಂಚಣಿ ಯೋಜನೆ ಜಾರಿಗೊಳಿಸಬೇಕು. ಕೇಂದ್ರ ಸರ್ಕಾರದ ಸುತ್ತೋಲೆ ವಾಪಸ್ ಪಡೆಯಬೇಕು. 26 ಸಾವಿರ ಕನಿಷ್ಠ ವೇತನ ಮತ್ತು ಹತ್ತು ಸಾವಿರ ನಿವೃತ್ತಿ ವೇತನ ನೀಡಬೇಕು. ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಜು.26ರಿಂದ ಪಾರ್ಲಿಮೆಂಟ್ ಎದುರು ಅನಿರ್ದಿಷ್ಟಾವಧಿ ಹೋರಾಟ ನಡೆಸಲಾಗುತ್ತದೆ.



ಮೈಸೂರು,ಜು.11(ಎಂಟಿವೈ)– ಗ್ರಾಚ್ಯುಟಿ ಕಾಯ್ದೆ 1972ಅನ್ನು ಜಾರಿಗೊಳಿಸಿ ಅಂಗನವಾಡಿ ಕಾರ್ಯಕರ್ತೆಯರಿಗೆ ಸಾಮಾಜಿಕ ಭದ್ರತಾ ಕಲ್ಯಾಣ ಶಾಸನಬದ್ಧ ಸೌಲಭ್ಯ ನೀಡುವುದರೊಂದಿಗೆ ಐಸಿಡಿಎಸ್ ಯೋಜನೆಗೆ ಅಗತ್ಯ ಅನುದಾನ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮೈಸೂರಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಭಾರೀ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮಳೆಯನ್ನೂ ಲೆಕ್ಕಿಸದೇ ಕೊಡೆ ಹಿಡಿದುಕೊಂಡೇ ಎರಡು ಪ್ರತ್ಯೇಕ ತಂಡವಾಗಿ ಮೈಸೂರು ಹಾಗೂ ಚಾಮರಾಜನಗರ ಸಂಸದರ ಕಚೇರಿವರೆಗೆ ಮೆರವಣಿಗೆ ನಡೆಸಿ, ಅಂಗನವಾಡಿ ಕಾರ್ಯಕರ್ತರ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ನೇತೃತ್ವದಲ್ಲಿ ಗನ್‌ಹೌಸ್‌ನಿಂದ ಹೆಚ್.ಡಿ.ಕೋಟೆ, ನಂಜನಗೂಡು, ಬಿಳಿಗೆರೆ ವಿಭಾಗ ಅಂಗನವಾಡಿ ಕಾರ್ಯಕರ್ತೆಯರು ಕಾಡಾ ಕಚೇರಿಯಲ್ಲಿರುವ ಚಾಮರಾಜನಗರ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಕಚೇರಿಗೆ ಮೆರವಣಿಗೆಯಲ್ಲಿ ತೆರಳಿ ಮನವಿ ಸಲ್ಲಿಸಿದರೆ, ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರದ ಅಂಗನವಾಡಿ ಕಾರ್ಯಕರ್ತೆಯರು ಜಿಲ್ಲಾಧಿಕಾರಿ ಕಚೇರಿಯಿಂದ ಜಲದರ್ಶಿನಿ ಅತಿಥಿ ಗೃಹದಲ್ಲಿರುವ ಸಂಸದ ಪ್ರತಾಪ ಸಿಂಹ ಕಚೇರಿಗೆ ಮೆರವಣಿಗೆಯಲ್ಲಿ ತೆರಳಿ ಬೇಡಿಕೆ ಈಡೇರಿಕೆಗೆ ಹಕ್ಕೊತ್ತಾಯ ಮಂಡಿಸಿದರು. ಐಸಿಡಿಸಿ ಯೋಜನೆ ಪ್ರಾರಂಭವಾಗಿ 48 ವರ್ಷಗಳಾಗಿದ್ದರೂ ಇದುವರೆಗೆ ಅಂಗನವಾಡಿ ಕಾರ್ಯಕರ್ತರನ್ನು ಖಾಯಂ ಮಾಡಿಲ್ಲ. ಕಾರ್ಮಿಕರಿಗೆ ಸರ್ಕಾರದ ಸೌಲಭ್ಯ ಅಂಗನವಾಡಿ ಕಾರ್ಯಕರ್ತರಿಗೆ ಸಿಗುತ್ತಿಲ್ಲ. ಇಂದಿಗೂ 3–4 ತಿಂಗಳಿಗೊಮ್ಮೆ ವೇತನ ಬಿಡುಗಡೆ. ಅಲ್ಲದೇ ಉದ್ದೇಶಪೂರ್ವಕವಾಗಿ ಶಿಸ್ತುಕ್ರಮ ಹೆಚ್ಚಿಸಲಾಗುತ್ತಿದೆ. ನಮ್ಮನ್ನು ತುಚ್ಛವಾಗಿ ನಡೆಸಿಕೊಳ್ಳುವುದು, ಎಲ್ಲ ಕೆಲಸಗಳಿಗೂ ಕಾರ್ಯಕರ್ತೆಯರನ್ನು ಬಳಸಿಕೊಳ್ಳಲಾಗುತ್ತಿದೆ. ಇಂತಹ ಕೆಟ್ಟ ಪರಿಸ್ಥಿತಿಯನ್ನು ವಿರೋಧಿಸಿ ಸಂಘಟಿತರಾಗಿ ಪ್ರತಿ ಭಟಿಸುವ ಹಕ್ಕನ್ನು ಕೇಂದ್ರ ಸರ್ಕಾರ ಕಿತ್ತುಕೊಳ್ಳುತ್ತಿದೆ. ಆದ್ದರಿಂದ ಕೇಂದ್ರ ಸರ್ಕಾರ ಈ ಸುತ್ತೋಲೆ ವಾಪಸ್ಸು ಪಡೆಯಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ಸುನಂದ, ಎಸ್.ವರಲಕ್ಷ್ಮಿ, ವಸಂತ, ಪುಷ್ಪಲತಾ, ಲೀಲಾವತಿ, ನೀಲಮ್ಮ, ಮಂಜುಳಾ, ಮಂಗಳ, ಗೌರಮ್ಮ, ಕಾವೇರಮ್ಮ, ಪುಷ್ಪಲತಾ, ವಸಂತಮ್ಮ, ಲತಾ ಹಾಗೂ 6 ತಿಂಗಳ ಹಸುಗೂಸಿನೊಂದಿಗೆ ಪಾಲ್ಗೊಂಡಿದ್ದ ಅಂಗನವಾಡಿ ಕಾರ್ಯಕರ್ತೆಯೊಬ್ಬರೂ ಸೇರಿದಂತೆ ನೂರಾರು ಮಂದಿ ಕಾರ್ಯಕರ್ತೆಯರು ಪಾಲ್ಗೊಂಡಿದ್ದರು.

ಹೊಸ ಪಿಂಚಣಿ ಸಂಬಂಧ ಖಜಾನೆ ಅಧಿಕಾರಿಗಳಿಗೆ ತರಬೇತಿ ಕಾರ್ಯಾಗಾರ



ಮೈಸೂರು,ಜು.11(ಎಂಟಿವೈ)– ಸರ್ಕಾರ ನೂತನವಾಗಿ ಜಾರಿಗೆ ತಂದಿರುವ ಹೊಸ ಪಿಂಚಣಿ ಯೋಜನೆ(ಎನ್‌ಪಿಎಸ್) ಕುರಿತಂತೆ ಜಿಲ್ಲಾ ಖಜಾನೆ ಸಿಬ್ಬಂದಿ, ಬಟವಾಡೆ ಅಧಿಕಾರಿಗಳು ಹಾಗೂ ಸರ್ಕಾರಿ ನೌಕರರಿಗೆ ಮಾಹಿತಿ ನೀಡುವ ನಿಟ್ಟಿನಲ್ಲಿ ಒಂದು ದಿನ ತರಬೇತಿ ಕಾರ್ಯಾಗಾರ ಆಯೋಜಿಸಲಾಗಿತ್ತು.

ಮೈಸೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸೋಮವಾರ ಎನ್‌ಪಿಎಸ್ ಘಟಕ, ಸಿಆರ್‌ಎ– ಎನ್‌ಎಸ್‌ಡಿಎಲ್, ಜಿಲ್ಲಾ ಖಜಾನೆ ವತಿಯಿಂದ ನಡೆದ ತರಬೇತಿ ಕಾರ್ಯಾಗಾರದಲ್ಲಿ ನೂತನ ಪಿಂಚಣಿ ಯೋಜನೆಯ ಬಗ್ಗೆ ವಿವರಿಸಲಾಯಿತು.

ರಾಷ್ಟ್ರೀಯ ಪಿಂಚಣಿ ಯೋಜನೆಯ (ಎನ್‌ಪಿಎಸ್) ಅನುಷ್ಠಾನ ಕುರಿತಂತೆ ನೌಕರರಲ್ಲಿ ತಪ್ಪು ಕಲ್ಪನೆ ಹೋಗಲಾಡಿಸುವ ನಿಟ್ಟಿನಲ್ಲಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಹೊಸ ಪಿಂಚಣಿ ಯೋಜನೆಯಿಂದ ಆಗುವ ಅನುಕೂಲದ ಬಗ್ಗೆ ವಿವರಿಸಲಾಯಿತು. ವೆಬ್‌ಸೈಟ್ ಲಾಗಿನ್, ಸಬ್‌ಸ್ಕ್ರೈಬರ್ ಮಾಹಿತಿ, ಎಸ್‌ಸಿಎಫ್ ಫಾರಂ ಜನರೇಷನ್, ಪಾರ್ಷಿಯಲ್ ವಿತ್‌ಡ್ರಾ, ಸೂಪರ್ ಅನಿಮೇಶನ್, ಪರ್ಸೆಂಟೇಜ್ ಆಫ್ ಆನ್ಯುಯಿಟಿ ಸರ್ವಿಸ್ ಪ್ರೊವೈಡರ್, ಡಿಡಿಒ ಲಾಗಿನ್, ಡಿಡಿಒ ಸಬ್‌ಸ್ಕ್ರೈಬರ್ ಅಪ್ಡೇಟ್ ಡೀಟೇಲ್ಸ್, ಮಹಾಲೇಖಪಾಲರಿಗೆ ಡಿಸಿಆರ್‌ಜಿಗಾಗಿ ಪ್ರಸ್ತಾವನೆ ಸಲ್ಲಿಸುವ ವಿಧಾನವನ್ನು ಪ್ರಾತ್ಯಕ್ಷಿಕೆಯೊಂದಿಗೆ ವಿವರಿಸಲಾಯಿತು.

ಹೊಸ ಪಿಂಚಣಿ ವ್ಯವಸ್ಥೆಯಿಂದ ನಿವೃತ್ತಿಯಾದ ನೌಕರರಿಗೆ ಇಡುಗಂಟಲ್ಲಿ ಶೇ.60 ನೀಡಲಾಗುತ್ತದೆ. ಉಳಿದ ಶೇ.40 ಸರ್ಕಾರವೇ ಹೂಡಿಕೆ ಮಾಡುತ್ತದೆ. ಎಸ್‌ಬಿಐ, ಹೆಚ್‌ಡಿಎಫ್‌ಸಿ, ಎಲ್‌ಐಸಿ, ಟಾಟಾ ಸಂಸ್ಥೆ ಸೇರಿದಂತೆ ಕೆಲ ಆಯ್ದ ಸಂಸ್ಥೆಗಳ ಮೇಲೆ ಇನ್ವೆಸ್ಟ್ ಮಾಡಲಾಗುತ್ತದೆ. ಅದು ನೌಕರರು ಆಯ್ಕೆ ಮಾಡಿದ ಸಂಸ್ಥೆಗೆ ಹೂಡಿಕೆ ಮಾಡಲಾಗುತ್ತದೆ. ಹೂಡಿಕೆ ಮಾಡಿದ ಷೇರ್ ಮೊತ್ತದಲ್ಲಿ ಪಿಂಚಣಿ ನೀಡಲಾಗುತ್ತದೆ. ಸರ್ವಿಸ್‌ನಲ್ಲಿದ್ದಾಗಲೇ ಮೃತಪಟ್ಟ ನೌಕರರಿಗೆ ಬಿಸಿಆರ್‌ಸಿ ಮೊತ್ತವನ್ನು ನೀಡುತ್ತದೆ. ಹಳೆ ಪಿಂಚಣಿ ವ್ಯವಸ್ಥೆಯಡಿ ಫ್ಯಾಮಿಲಿ ಪೆನ್ಷನ್ ನೀಡಲಾಗುತ್ತದೆ. ಈ ಹಿಂದೆ ನಾಮಿನಿಯಾಗಿ ಪತಿ ಅಥವಾ ಪತ್ನಿಯನ್ನು ಮಾಡಲಾಗುತ್ತಿತ್ತು. ಆದರೆ ಈಗ ಮಕ್ಕಳಿಗೆ ನಾಮಿನಿ ಮಾಡಲಾಗುತ್ತದೆ. ಕರ್ತವ್ಯದಲ್ಲಿದ್ದಾಗಲೇ ಮೃತಪಟ್ಟರೆ ಮಕ್ಕಳಿಗೆ ಪೂರ್ಣ ಹಣ ನೀಡಲಾಗುತ್ತದೆ. ಮಕ್ಕಳಿಗೆ ಪಿಂಚಣಿ ಸೌಲಭ್ಯ ನೀಡಲಾಗುವುದಿಲ್ಲ ಎಂದು ವಿವರಿಸಲಾಯಿತು. ಪೆನ್ಷನ್ ಫಂಡ್ ಮ್ಯಾನೇಜ್ಮೆಂಟ್ (ಪಿಎಫ್‌ಎಂ) ಬಗ್ಗೆ ಎನ್‌ಎಸ್‌ಡಿಎಲ್‌ನ ಹಿರಿಯ ವ್ಯವಸ್ಥಾಪಕ ಅಭಿಷೇಕ್ ಧುರಿ, ಸಹಾಯಕ ವ್ಯವಸ್ಥಾಪಕರಾದ ಸೋನು ಕುಮಾರ್ ಸಿಂಗ್ ಅವರು ಜಿಲ್ಲೆಯ ಬಟವಾಡೆ ಅಧಿಕಾರಿಗಳಿಗೆ ಮಾಹಿತಿಯನ್ನು ಒದಗಿಸಿದರು. ಕಾರ್ಯಾಗಾರದಲ್ಲಿ ಜಿಲ್ಲಾ ಖಜಾನೆ ಸಿಬ್ಬಂದಿ, ತಾಲೂಕು ಖಜಾನೆ ಅಧಿಕಾರಿಗಳು, ಸಿಬ್ಬಂದಿ, ಎಲ್ಲಾ ಬಟವಾಡೆ ಅಧಿಕಾರಿಗಳು ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು. ಇದಕ್ಕೂ ಮುನ್ನ ಈ ಕಾರ್ಯಾಗಾರವನ್ನು ಜಿಲ್ಲಾ ಖಜಾನೆ ಜಂಟಿ ನಿರ್ದೇಶಕಿ ಎನ್.ಯಶೋಧ ಉದ್ಘಾಟಿಸಿದರು. ಸಹಾಯಕ ನಿರ್ದೇಶಕಿ ಎಚ್.ಎಸ್.ಗಿರಿಜಾಂಬ, ಎನ್‌ಪಿಎಸ್ ಘಟಕದ ಸಹಾಯಕ ನಿರ್ದೇಶಕ ವಿ.ಎಲ್.ನಾಗರಾಜು, ಪ್ರಥಮ ದರ್ಜೆ ಸಹಾಯಕಿ ಎನ್.ಎಸ್.ಕಾವ್ಯ ಹಾಗೂ ಇನ್ನಿತರರು ಇದ್ದರು.



ಕೆಆರ್‌ಎಸ್ ಜಲಾಶಯಕ್ಕೆ ಮುಖ್ಯಮಂತ್ರಿಗಳು ಬಾಗಿನ ಅರ್ಪಿಸುವ ವೇಳೆ ಮೈಸೂರು ರಾಜವಂಶದ ಉತ್ತರಾಧಿಕಾರಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನೂ ಆಹ್ವಾನಿಸುವಂತೆ ಮಂಡ್ಯ ಜಿಲ್ಲಾಧಿಕಾರಿ ಅಶ್ವಥಿ ಅವರಿಗೆ ನಗರಪಾಲಿಕೆ ಸದಸ್ಯ ಲೋಕೇಶ್ ಪಿಯಾ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು.

ಅರ್ಜಿ ಆಹ್ವಾನ

ಮೈಸೂರು,ಜು.11–ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶದಲ್ಲಿ ಶೇ.80 ರಷ್ಟು ಅಂಕ ಪಡೆದ ಸವಿತಾ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಿದೆ. ಜು.26ರಂದು ಮೈಸೂರಿನಲ್ಲಿ ನಡೆಯುವ ಶ್ರೀಶಿವ ಶರಣ ಹಡಪದ ಅಪ್ಪಣ್ಣನವರ ಜಯಂತಿ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಗುವುದು. ಜು.19 ರೊಳಗೆ ಜಿಲ್ಲೆಯ ಸಮಾಜದ ತಾಲೂಕು ಅಧ್ಯಕ್ಷರು ಅಥವಾ ಮೈಸೂರು ಜಿಲ್ಲಾಧ್ಯಕ್ಷರು, ಕಾರ್ಯದರ್ಶಿಗಳಿಗೆ ಅಂಕಪಟ್ಟಿಯ ಜೆರಾಕ್ಸ್‌ನೊಂದಿಗೆ ಸಲ್ಲಿಸಬೇಕು. ಮಾಹಿತಿಗೆ ಮೊ: 9845636754 ಸಂಪರ್ಕಿಸಲು ಪ್ರಕಟಣೆಯಲ್ಲಿ ಕೋರಿದ್ದಾರೆ.

ನಾಳೆ ವನಸಿರಿ ಕಾರ್ಯಕ್ರಮ



ಮೈಸೂರು, ಜು.11–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಮತ್ತು ರಾಜೀವ್ ಸ್ನೇಹ ಬಳಗ ಇವರ ಸಂಯುಕ್ತಾಶ್ರಯದಲ್ಲಿ 25 ಸಾವಿರ ಸಸಿ ನೆಡುವ ವನಸಿರಿ ಕಾರ್ಯಕ್ರಮವನ್ನು ಜು.13ರಂದು ಬುಧವಾರ ಬೆಳಗ್ಗೆ 10 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸಸಿ ನೆಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸುವರು. ವೇದಿಕೆ ಕಾರ್ಯಕ್ರಮವನ್ನು ಸಹಕಾರ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್ ವಹಿಸುವರು. ಕಾರ್ಯಕ್ರಮದಲ್ಲಿ ಪಬ್ಲಿಕ್ ಟಿವಿ ಮುಖ್ಯಸ್ಥ ಎಚ್.ಆರ್.ರಂಗನಾಥ್ ಸಮಾಜಮುಖಿ ಪುಸ್ತಕವನ್ನು ಲೋಕಾರ್ಪಣೆ ಮಾಡುವರು. ಪ್ರಜಾವಾಣಿಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಸಿರಿ ಸಂವರ್ಧನ ಪ್ರಶಸ್ತಿ ಪ್ರದಾನ ಮಾಡುವರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಸಂಸದ ಪ್ರತಾಪ್ ಸಿಂಹ, ವಿಧಾನಸಭೆ ಮತ್ತು ವಿಧಾನಪರಿಷತ್ ಸದಸ್ಯರು, ಅನೇಕ ಗಣ್ಯರು ಉಪಸ್ಥಿತರಿರುವರು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆಯಿಷ್‌ನಲ್ಲಿ ಪೊಲೀಸರಿಗೆ ಮೂರು ದಿನಗಳ ಆರೋಗ್ಯ ತಪಾಸಣಾ ಶಿಬಿರ ಆರಂಭ





ಮೈಸೂರಿನ ಆಯಿಷ್‌ನಲ್ಲಿ ಆರಂಭವಾದ ಮೂರು ದಿನಗಳ ಆರೋಗ್ಯ ತಪಾಸಣಾ ಶಿಬಿರವನ್ನು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಉದ್ಘಾಟಿಸಿ, ತಪಾಸಣೆ ಮಾಡಿಸಿಕೊಂಡರು. ಆಯಿಷ್ ನಿರ್ದೇಶಕಿ ಡಾ. ಪುಷ್ಪಾವತಿ, ಸಿಎಆರ್ ಡಿಸಿಪಿ ಶಿವರಾಜ್ ಇದ್ದಾರೆ (ಎಡಚಿತ್ರ). ಪೊಲೀಸರ ಕಿವಿ, ಧ್ವನಿ ಆರೋಗ್ಯ ತಪಾಸಣೆ ಮಾಡುತ್ತಿರುವುದನ್ನು ಬಲಚಿತ್ರದಲ್ಲಿ ಕಾಣಬಹುದು.


ಮೈಸೂರು, ಜು. 11(ಆರ್‌ಕೆ)– ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (AIISH)ಯಲ್ಲಿ ಪೊಲೀಸ್ ಸಿಬ್ಬಂದಿ ಮತ್ತು ಕುಟುಂಬದವರಿಗೆ 3 ದಿನಗಳ ಉಚಿತ ಆರೋಗ್ಯ ತಪಾಸಣಾ ಶಿಬಿರ ಇಂದಿನಿಂದ ಆರಂಭವಾಯಿತು.

ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಶಿಬಿರವನ್ನು ಉದ್ಘಾಟಿಸಿ, ಮಾತನಾಡುತ್ತ, ಪ್ರಧಾನಮಂತ್ರಿಗಳು ಮೈಸೂರು ಪ್ರವಾಸ ಕೈಗೊಂಡಿದ್ದಾಗ ಆಯಿಷ್ ಸಂಸ್ಥೆಗೂ ಭೇಟಿ ನೀಡುತ್ತಾರೆ ಎಂಬ ಮಾಹಿತಿ ಇದ್ದ ಕಾರಣ, ಭದ್ರತಾ ಯೋಜನೆ ರೂಪಿಸುವ ಸಲುವಾಗಿ ಸ್ಥಳ ಪರಿಶೀಲನೆಗಾಗಿ ಬಂದಾಗಲೇ ನಮಗೆ ಸಂಸ್ಥೆಯ ಸೇವೆ ತಿಳಿಯಿತು. ಕಿವಿ, ಗಂಟಲು ಸಮಸ್ಯೆಯಂತಹ ಅಂಗವೈಕಲ್ಯತೆಯಿಂದ ಬಳಲುತ್ತಿರುವವರಿಗೆ ಚಿಕಿತ್ಸೆ ನೀಡುತ್ತಿರುವ ಅತೀ ದೊಡ್ಡ ಸಂಸ್ಥೆ ಮೈಸೂರಿನಲ್ಲಿದೆ ಎಂಬುದನ್ನು ತಿಳಿದು ಸಂತೋಷವಾಯಿತು ಎಂದರು.

ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕಿ ಡಾ.ಎಂ.ಪುಷ್ಪಾವತಿ ಮಾತನಾಡಿ, ಸದಾ ಒತ್ತಡದಲ್ಲಿ ಕೆಲಸ ಮಾಡುವ ಪೊಲೀಸರು ವಾಹನಗಳ ಶಬ್ದಮಾಲಿನ್ಯ ಮತ್ತು ವಾಯು ಮಾಲಿನ್ಯದಿಂದಾಗಿ ಕಿವಿ ಮತ್ತು ಗಂಟಲಿನ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಸುರಕ್ಷಾ ಮುಂಜಾಗ್ರತಾ ಕ್ರಮ ವಹಿಸುವ ಬಗ್ಗೆ ಜಾಗೃತಿ ಮೂಡಿಸಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ ನೀಡುವ ಸಲುವಾಗಿ ಪೊಲೀಸರು ಮತ್ತು ಅವರ ಕುಟುಂಬದವರಿಗಾಗಿ 3 ದಿನಗಳ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿದ್ದಾಗಿ ತಿಳಿಸಿದರು. ಡಿಸಿಪಿ (ಸಿಎಆರ್) ಶಿವರಾಜ್, ಅಶ್ವಾರೋಹಿ ದಳದ ಕಮಾಂಡೆಂಟ್ ನಾಗರಾಜ್ ಹಾಗೂ ಇತರ ಅಧಿಕಾರಿಗಳು ಈ ಸಂದರ್ಭ ಉಪಸ್ಥಿತರಿದ್ದರು. ಮೊದಲ ದಿನವಾದ ಇಂದು 150ಕ್ಕೂ ಹೆಚ್ಚು ಮಂದಿ ಪೊಲೀಸ್ ಸಿಬ್ಬಂದಿ ಹಾಗೂ ಕುಟುಂಬದ ಸದಸ್ಯರು ಆರೋಗ್ಯ ತಪಾಸಣೆ ಮಾಡಿಸಿಕೊಂಡರು.

ಕೆಆರ್ ಆಸ್ಪತ್ರೆ ಕಣ್ಣಿನ ವಿಭಾಗದಲ್ಲಿ ನಿತ್ಯ 40 ಪೊರೆ ಶಸ್ತ್ರಚಿಕಿತ್ಸೆ, ಲೆನ್ಸ್ ಅಳವಡಿಕೆ





ಮೊದಲೇ ಕಣ್ಣಿನ ದಾನ ಮಾಡಲು ನೋಂದಣಿ ಮಾಡಿದ್ದವರು ಮೃತಪಟ್ಟಲ್ಲಿ 8 ಗಂಟೆಯೊಳಗಾಗಿ ಕಣ್ಣುಗಳನ್ನು ಸಂಗ್ರಹಿಸಲಾಗುತ್ತದೆ. ಕ್ಯಾನ್ಸರ್, ಹೆಚ್‌ಐವಿ ಏಡ್ಸ್‌ನಂತಹ ಖಾಯಿಲೆ ಹಾಗೂ ಯಾವುದೇ ಇನ್ನಿತರ ಸೋಂಕು (Infection) ಇದ್ದವರನ್ನು ಹೊರತುಪಡಿಸಿ ಉಳಿದಂತೆ ಎಲ್ಲ ವಯಸ್ಸಿನ ನೋಂದಾಯಿತ ಮೃತಪಟ್ಟವರ ದೇಹದಿಂದ ಕಣ್ಣುಗಳನ್ನು ಸಂಗ್ರಹಿಸಲಾಗುವುದು. ಕಣ್ಣುಗಳ ದಾನ ಮಾಡಲು ಬಯಸುವವರು ಕೆಆರ್ ಆಸ್ಪತ್ರೆ ನೇತ್ರ ಭಂಡಾರದ ನೇತ್ರಾಧಿಕಾರಿ ಡಾ. ಚಂದ್ರಕಲಾ ಅವರನ್ನು ಮೊ.ಸಂಖ್ಯೆ 831045 9334, 9448392947, 9449406787 ನೋಂದಾಯಿಸಿಕೊಳ್ಳಬಹುದು.

> “ವಿಭಾಗದಲ್ಲಿ ಸುಮಾರು ಮೂರು ಕೋಟಿ ರೂ. ಬೆಲೆಬಾಳುವ ಆಧುನಿಕ ಉಪಕರಣಗಳನ್ನು ಅಳವಡಿಸಲಾಗಿದ್ದು, ಅವುಗಳ ಮೂಲಕ ಪ್ರತೀ ವರ್ಷ 5000 ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ನಡೆಸಿ ಲೆನ್ಸ್ ಅಳವಡಿಸಲಾಗುತ್ತಿದೆ. ಅದಲ್ಲದೆ, ಕಾರ್ನಿಯಲ್ ಟ್ರಾನ್ಸ್‌ಪ್ಲಾಂಟ್, ಟ್ರಬೆಕುಲೆಕ್ಟಮಿ, ಡಾಕ್ರಿ ಯೊಸೈಟೆಕ್ಟಮಿ, ಪ್ಟೆರಿಜಿಯಮ್ ಎಕ್ಸಿಸನ್ ಅಂಡ್ ಆಟೋಗ್ರಾಫ್ಟಿಂಗ್, ಆಕ್ಯುಲೋಪ್ಲಾಸ್ಟಿ ಹಾಗೂ ಇನ್ನಿತರ ಆಪರೇಷನ್‌ಗಳನ್ನೂ ಉಚಿತವಾಗಿ ಕಣ್ಣಿನ ವಿಭಾಗದಲ್ಲಿ ನಡೆಸಲಾಗುತ್ತಿದೆ
> –ಡಾ.ಕೆ.ಸತೀಶ್, ಕೆ.ಆರ್.ಆಸ್ಪತ್ರೆ ಕಣ್ಣಿನ ವಿಭಾಗದ ಮುಖ್ಯಸ್ಥ



ಮೈಸೂರು, ಜು. 11(ಆರ್‌ಕೆ)– ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಯ ಕಣ್ಣಿನ ವಿಭಾಗ (ಆಪ್ತಾಮಲಜಿ)ದಲ್ಲಿ ಪ್ರತಿನಿತ್ಯ 40 ಮಂದಿಗೆ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ, ಅತ್ಯಾಧುನಿಕ ಲೆನ್ಸ್ ಅಳವಡಿಸಲಾಗುತ್ತಿದೆ. ಆಧುನಿಕ ವೃತ್ತಿಪರತೆ ಹಾಗೂ ಜೀವನಶೈಲಿಯಿಂದ 50 ವರ್ಷದ ಮೇಲ್ಪಟ್ಟವರಿಗೆ ಕಣ್ಣಿನ ಪೊರೆ ಸಮಸ್ಯೆ ಹೆಚ್ಚಾಗುತ್ತಿರುವುದರಿಂದ ಹಲವು ಖಾಸಗಿ ಕಣ್ಣಿನ ಆಸ್ಪತ್ರೆಗಳು ತಲೆಯೆತ್ತಿದ್ದರೂ ಕೆಆರ್ ಆಸ್ಪತ್ರೆಯ ಕಣ್ಣಾಸ್ಪತ್ರೆಗೆ ಪ್ರತಿನಿತ್ಯ 300 ರಿಂದ 400 ಮಂದಿ ಹೊರರೋಗಿಗಳು ತಪಾಸಣೆ ಮಾಡಿಸಿಕೊಳ್ಳುತ್ತಿದ್ದು, ಆ ಪೈಕಿ 40 ಮಂದಿಗೆ ಕ್ಯಾಟರ್ಯಾಕ್ಟ್ ಆಪರೇಷನ್ ಮೂಲಕ ಉಚಿತವಾಗಿ ಲೆನ್ಸ್ ಅಳವಡಿಸಲಾಗುತ್ತಿದೆ.

ರೆಟಿನಾ ಶಸ್ತ್ರಚಿಕಿತ್ಸೆಗಾಗಿ ಸ್ವಿಟ್ಜರ್‌ಲ್ಯಾಂಡ್‌ನಿಂದ 50 ಲಕ್ಷ ರೂ. ಮೌಲ್ಯದ ವಿಟ್ರೆಕ್ಟಮಿ ಅಂಡ್ ಫೋಕೋ ಉಪಕರಣ, 20 ಲಕ್ಷ ಬೆಲೆಯ ಎನ್‌ಡಿಯಾಗ್ ಲೇಸರ್ ಕ್ಯಾಪ್ಸಲೊಟಮಿ ಸೇರಿದಂತೆ ಹಂಫ್ರೇ ಫೀಲ್ಡ್ ಅನಲೈಸರ್, ಮೈಕ್ರೋಸ್ಕೋಪ್ ಮತ್ತು ಹೆಚ್.ಡಿ. ಕ್ಯಾಮರಾ, ಡಿಜಿಟಲ್ ಮೋನೋ ಮೀಟರ್, ಆಟೋ–ಕ್ಲೇವರ್, ಜಿಯೆಸ್ಪಾಕೋ, ಎಎಂಓ ಫಾಕೋ, ಓಸಿಟಿ, ಫಂಡಸ್ ಕ್ಯಾಮರಾ, ಸ್ಲಿಟ್‌ಲ್ಯಾಂಪ್ ಲೇಸರ್‌ಗಳಂತಹ ಅತ್ಯಾಧುನಿಕ ಉಪಕರಣಗಳನ್ನು ಕಣ್ಣಿನ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸೆಗಾಗಿ ಬಳಸಲಾಗುತ್ತಿದೆ ಎಂದು ಕೆಆರ್ ಆಸ್ಪತ್ರೆ ಕಣ್ಣಿನ ವಿಭಾಗದ ಮುಖ್ಯಸ್ಥ ಡಾ.ಕೆ.ಸತೀಶ್ ತಿಳಿಸಿದ್ದಾರೆ. ತಮ್ಮೊಂದಿಗೆ ಸಹಪ್ರಾಧ್ಯಾಪಕರಾದ ಡಾ.ಎನ್.ಪ್ರಕಾಶ್, ಡಾ. ಮಧುಸೂದನ್, ಡಾ. ಆರ್. ರಾಘವೇಂದ್ರ, ಡಾ.ಎಸ್. ಶುಭ್ರತಾ, ಸಹಾಯಕ ಪ್ರಾಧ್ಯಾಪಕರಾದ ಡಾ.ಆರ್. ಸ್ವಾತಿ, ಡಾ. ಸಂಧ್ಯಾ ಧಾರವಾಡ್ಕರ್, ಡಾ. ಮಾಧುರಿ ಪರಂಡೆ ಅವರು ಕಣ್ಣಿನ ತಪಾಸಣೆ, ಚಿಕಿತ್ಸೆ ಮತ್ತು ಸರ್ಜರಿ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವುದರಿಂದ ರೋಗಿಗಳಿಗೆ ಉತ್ತಮ ಸೇವೆ ಒದಗಿಸಲು ಸಾಧ್ಯವಾಗುತ್ತಿದೆ ಎಂದು ಡಾ. ಸತೀಶ್ ನುಡಿದರು.

ಆದರೆ ನಿವೃತ್ತರಾದ ವೈದ್ಯರು, ದೃಷ್ಟಿ ಪರೀಕ್ಷೆ ಮಾಡುವ ಟೆಕ್ನಿಷಿಯನ್‌ಗಳು, ನರ್ಸ್ ಹಾಗೂ ‘ಡಿ’ ಗ್ರೂಪ್ ನೌಕರರ ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರುವುದರಿಂದ ಕಣ್ಣಿನ ವಿಭಾಗಕ್ಕೆ ಚಿಕಿತ್ಸೆ ಬಯಸಿ ಬರುತ್ತಿರುವ ರೋಗಿಗಳ ಸಂಖ್ಯೆ ದಿನದಿಂದ ದಿನಕ್ಕೆ ಜಾಸ್ತಿಯಾಗುತ್ತಿರುವ ಕಾರಣ ನಿರ್ವಹಣೆ ಕಷ್ಟವಾಗುತ್ತಿದೆಯಾದರೂ, ಉತ್ತಮ ಚಿಕಿತ್ಸೆ ನೀಡುತ್ತಿದ್ದೇವೆ ಎಂದು ಡಾ. ಸತೀಶ್ ತಿಳಿಸಿದರು. ಟೆಕ್ನಿಷಿಯನ್, ನರ್ಸ್ ಹಾಗೂ ಗ್ರೂಪ್ ‘ಡಿ’ ಸಿಬ್ಬಂದಿಗಳನ್ನಾದರೂ ನೇಮಕ ಮಾಡಿಕೊಟ್ಟರೆ ನಮ್ಮ ಆಸ್ಪತ್ರೆಯಲ್ಲಿ ದೃಷ್ಟಿದೋಷವುಳ್ಳ ರೋಗಿಗಳಿಗೆ ಇನ್ನೂ ಉತ್ಕೃಷ್ಟ ಸೇವೆ ಸಲ್ಲಿಸಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

ನೇತ್ರದಾನಿಗಳ ಸಂಖ್ಯೆ ಹೆಚ್ಚಳ



ಮೈಸೂರು: ನಟ ಪುನೀತ್ ರಾಜ್‌ಕುಮಾರ್ ಅವರು ಸಾವನ್ನಪ್ಪಿದ ನಂತರ ಮೈಸೂರು ಕೆಆರ್ ಆಸ್ಪತ್ರೆ ಕಣ್ಣಿನ ವಿಭಾಗದ ನೇತ್ರ ಭಂಡಾರಕ್ಕೆ ಕಣ್ಣು ದಾನ ಮಾಡುವವರ ಸಂಖ್ಯೆ ಹೆಚ್ಚಾಗಿದೆ. 2021ರ ನವಂಬರ್ ಮಾಹೆಯಲ್ಲಿ 219 ಮಂದಿ ಕಣ್ಣಿನ ದಾನ ಮಾಡಲಿಚ್ಛಿಸಿ ಒಪ್ಪಿಗೆ ಪತ್ರ ನೀಡಿ ನೋಂದಣಿ ಮಾಡಿಸಿದ್ದರು. ಆ ತಿಂಗಳಲ್ಲಿ ಮೃತಪಟ್ಟ 14 ಮಂದಿಯ ಕಣ್ಣುಗಳನ್ನು ಪಡೆಯಲಾಯಿತು. ಅದರಂತೆ ಡಿಸೆಂಬರ್‌ನಲ್ಲಿ 16, 2022ರ ಜನವರಿಯಲ್ಲಿ 12, ಫೆಬ್ರವರಿಯಲ್ಲಿ 10, ಮಾರ್ಚ್‌ನಲ್ಲಿ 16, ಏಪ್ರಿಲ್‌ನಲ್ಲಿ 6, ಮೇ ಮಾಹೆಯಲ್ಲಿ 6 ಹಾಗೂ ಜೂನ್‌ನಲ್ಲಿ 8 ಮಂದಿಯ ನೇತ್ರಗಳನ್ನು ಸಂಗ್ರಹಿಸಲಾಗಿದೆ. 2021ರ ಏಪ್ರಿಲ್ 1ರಿಂದ 2022ರ ಮಾರ್ಚ್ 31ರವರೆಗೆ ಆರೋಗ್ಯವಂತ 87 ಮಂದಿ ಅಸುನೀಗಿದಾಗ ಅವರ ಕಣ್ಣು (Eye Ball)ಗಳನ್ನು ಸಂಗ್ರಹಿಸಲಾಗಿದೆ. ಅವುಗಳನ್ನು ಆಸ್ಪತ್ರೆಯಲ್ಲಿ ತಪಾಸಣೆ ಮಾಡಿಸಿಕೊಂಡು ಕಣ್ಣಿನ ದೃಷ್ಟಿ ಸಂಪೂರ್ಣ ನಷ್ಟವಾಗಿದೆ ಎಂದು ಕಂಡುಬಂದ, ಮೊದಲೇ ನೋಂದಾಯಿಸಿಕೊಂಡಿರುವ ಫಲಾನುಭವಿಗಳಿಗೆ ಜೋಡಣೆ ಮಾಡಲಾಗಿದ್ದು, ಉಳಿದವು, ಅಗತ್ಯವಿರುವ ಆಸ್ಪತ್ರೆ (ಸರ್ಕಾರಿ)ಗಳಿಗೆ ಕಳುಹಿಸಿ ಅಲ್ಲಿ ಅಗತ್ಯವಿರುವವರಿಗೆ ಅಳವಡಿಸಲಾಗುತ್ತಿದೆ ಎಂದು ಕೆಆರ್ ಆಸ್ಪತ್ರೆ ಕಣ್ಣಿನ ವಿಭಾಗದ ಮುಖ್ಯಸ್ಥ ಡಾ.ಕೆ.ಸತೀಶ್ ತಿಳಿಸಿದ್ದಾರೆ. ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಕೆಲಸದವ : ಸಾರ್, ಬೇಗ ಏಳಿ ಸಾರ್, ಬೇಗ ಏಳಿ
ಯಜಮಾನ : ಯಾಕಯ್ಯ ಎಬ್ಬಿಸಿದೆ, ಏನು ಸಮಾಚಾರ?
ಕೆಲಸದವ : ನೀವೀಗ ನಿದ್ದೆಗುಳಿಗೆ ತಗೊಳ್ಳೋ ಹೊತ್ತು...!

ಮೈಸೂರು ಮಿತ್ರ
ಮಂಗಳವಾರ, 12 ಜುಲೈ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಒಳ್ಳೆಯ ಮಿತ್ರರನ್ನು ಹುಡುಕುವ ಮೊದಲು ನಾವು ಒಳ್ಳೆಯ ಮಿತ್ರರಾಗುವುದು ಅಗತ್ಯ. –ಜಗ್ಗಿ ವಾಸುದೇವ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಮಣ್ಣು ಬಿಟ್ಟು ಮಡಿಕೆ ಇಲ್ಲ. ತನ್ನ ಬಿಟ್ಟು ದೇವರಿಲ್ಲ

ನಿಮ್ಮ ಪತ್ರಗಳು

ಶ್ರೀ ವೀರೇಂದ್ರ ಹೆಗ್ಗಡೆಯವರು ರಾಜ್ಯಸಭೆಗೆ ನಾಮ ನಿರ್ದೇಶನ ಸ್ವಾಗತಾರ್ಹ

ಮಾನ್ಯರೆ,



ಲಕ್ಷಾಂತರ ಭಕ್ತರ ಆರಾಧ್ಯ ದೈವ ಶ್ರೀ ಮಂಜುನಾಥನ ದಿವ್ಯ ಸನ್ನಿಧಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ರಾಜರ್ಷಿ ಶ್ರೀ ವೀರೇಂದ್ರ ಹೆಗ್ಗಡೆ ಅವರನ್ನು ರಾಜ್ಯಸಭೆಗೆ ನಾಮ ನಿರ್ದೇಶನ ಮಾಡಿದ್ದು ನಮ್ಮ ರಾಜ್ಯಕ್ಕೆ ಅತ್ಯಂತ ಹೆಮ್ಮೆಯ ವಿಚಾರ, ಗೌರವ ತಂದ ವಿಷಯ. ಆ ಸ್ಥಾನವು ಶ್ರೀಯುತರಿಗೆ ಸಂದಿದ್ದು, ತನ್ನ ಗೌರವವನ್ನು ಇಮ್ಮಡಿಗೊಳಿಸಿಕೊಂಡಿದೆ.

ಶ್ರೀ ವೀರೇಂದ್ರ ಹೆಗ್ಗಡೆಯವರು ತಮ್ಮ ಸೇವೆಯನ್ನು ಕೇವಲ ಧರ್ಮಾಧಿಕಾರಿಯಾಗಿ ಧಾರ್ಮಿಕ, ಆಧ್ಯಾತ್ಮಿಕ ಕ್ಷೇತ್ರಕ್ಕೇ ಮಾತ್ರ ಸೀಮಿತಗೊಳಿಸದೇ, ಆರೋಗ್ಯ ಕ್ಷೇತ್ರ, ಶಿಕ್ಷಣ ಕ್ಷೇತ್ರ ಗ್ರಾಮೀಣಾಭಿವೃದ್ಧಿಯಲ್ಲೂ ಮಹೋನ್ನತ ಸೇವೆ ಸಲ್ಲಿಸಿದ್ದಾರೆ. ತಮ್ಮದೇ ಆದ ಅನೇಕ ಯೋಜನೆಗಳ ಮೂಲಕ ದುರ್ಬಲರಿಗೆ, ಮಹಿಳೆಯರಿಗೆ, ಬಡವರಿಗೆ ಸಹಾಯ ಹಸ್ತ ನೀಡಿದ್ದಾರೆ. ಹಲವಾರು ಮಂದಿಗೆ ದಾರಿದೀಪವಾಗಿದ್ದಾರೆ.

ಹಿಂದೂ, ಜೈನ ಧರ್ಮದ ಸಾಮರಸ್ಯದ ಸಂಕೇತವಾದ ಇವರು ಸರಳ ಸಜ್ಜನಿಕೆಯ ಸಹೃದಯಿ ಸೇವಾ ಮನೋಭಾವವುಳ್ಳ ಮೇರು ವ್ಯಕ್ತಿತ್ವ. ಕೇಂದ್ರ ಸರ್ಕಾರದ ರಾಜ್ಯ ಸರ್ಕಾರದ ಅನೇಕ ಪ್ರಗತಿಪರ ಯೋಜನೆಗಳು ಜನ ಸಾಮಾನ್ಯರಿಗೆ ತಿಳಿದೇ ಇರುವುದಿಲ್ಲ. ಅದರ ಅರಿವು ಮಾಹಿತಿಯನ್ನು ಜನರಿಗೆ ತಲುಪಿಸುವಲ್ಲಿ ಶ್ರೀಯುತರು ಯಶಸ್ವಿಯಾಗಿದ್ದಾರೆ. ಇಂಥ ನಿಸ್ವಾರ್ಥ ಸೇವೆಯ ಶ್ರೀಯುತರು ತಮ್ಮ ಸಮಾಜ ಸೇವೆ, ಅನೇಕ ಪ್ರಗತಿಪರ ಯೋಜನೆಗಳಿಂದ ರಾಜ್ಯಕ್ಕೆ ಸೇವೆ ಸಲ್ಲಿಸಿ, ಪ್ರಾತಃಸ್ಮರಣೀಯರಾಗಿದ್ದಾರೆ. ಇದೀಗ ಅವರ ಯೋಜನೆಗಳು ಚಿಂತನೆಗಳು ಇಡೀ ಭಾರತಕ್ಕೆ ವ್ಯಾಪಿಸುವ ಸುಸಂದರ್ಭ ಒದಗಿ ಬಂದಿದೆ. ಅದರ ಸದುಪಯೋಗ ಎಲ್ಲಾ ರಾಜ್ಯಗಳು ಪಡೆದುಕೊಳ್ಳಲಿ. ಶ್ರೀ ವೀರೇಂದ್ರ ಹೆಗ್ಗಡೆಯವರ ಹೆಸರು ವಿಶ್ವವ್ಯಾಪಿಯಾಗಿ ಬೆಳಗಲಿ. ಕಂಗೊಳಿಸಲಿ. ಕರುನಾಡ ತಾಯಿ ಧನ್ಯಳು.

–ಪುಷ್ಪಲತಾ ಫಣಿರಾಜ್, ಅಗ್ರಹಾರ ಮೈಸೂರು.

ಅನುಮತಿ ಇಲ್ಲದೆ ದೇವರಾಜ ಸರ್ಕಾರಿ ಶಾಲೆಗೆ ಸೇರಿದ ಜಾಗದಲ್ಲಿ ಪಪೂ ಕಾಲೇಜು ಕಟ್ಟಡ ನಿರ್ಮಾಣ

ಮಾನ್ಯರೆ,

ನಗರದ ದೇವರಾಜ ಶಾಲೆಗೆ ಸೇರಿದ ಸುಸಜ್ಜಿತವಾಗಿ ಇದ್ದ ಕಟ್ಟಡ ಏಕಾಏಕಿ ನೆಲಸಮ ಮಾಡಿ ಪ್ರಾಥಮಿಕ ಶಿಕ್ಷಣ ಇಲಾಖೆಯ ಅನುಮತಿ ಪಡೆಯದೇ ಪದವಿ ಪೂರ್ವ ಕಾಲೇಜು ಕಟ್ಟಲು ಮುಂದಾಗಿದ್ದು ಈಗ ಬೆಳಕಿಗೆ ಬಂದಿದೆ. ಇದನ್ನು ಕೇಳಿದರೆ ಶಿಕ್ಷಣ ಇಲಾಖೆಯಲ್ಲಿ ಯಾವುದೇ ಮಾಹಿತಿ ಇಲ್ಲ. ಇದನ್ನು ನೋಡಿದರೆ ಸಂತ ಶಿಶುನಾಳ ಶರೀಫರ ರಚಿತ "ಕೋಡಗನ ಕೋಳಿ ನುಂಗಿತ್ತಾ" ಎಂಬ ಹಾಡು ನೆನಪಿಗೆ ಬರುತ್ತದೆ.



18 ಕೊಠಡಿಗಳುಳ್ಳ ದೇವರಾಜ ಶಾಲೆಯಲ್ಲಿ ಹಾಲಿ 63 ಮಕ್ಕಳಿದ್ದು, 18 ಕೊಠಡಿಯಲ್ಲಿ 8 ಕೊಠಡಿ ನೆಲಸಮ ಮಾಡಿ ಶಾಲಾ ಮಕ್ಕಳಿಗೆ ಆಟದ ಮೈದಾನ ಇಲ್ಲದ ಹಾಗೆ ಮಾಡಿ ಅದೇ ಜಾಗದಲ್ಲಿ 3 ಕೊಠಡಿ ಪದವಿಪೂರ್ವ ಕಾಲೇಜಿಗಾಗಿ ಕಟ್ಟಿಸಿ ಪ್ರಾಥಮಿಕ ಶಾಲೆಯನ್ನು ಪದವಿಪೂರ್ವ ಕಾಲೇಜು ನುಂಗಿತ್ತಾ ಎಂಬ ಮಾತು ಕೇಳಿ ಬರುತ್ತಿದೆ. ಶಿಕ್ಷಣ ಇಲಾಖೆಯಿಂದ ಪೂರ್ವಾನುಮತಿ ಪಡೆಯದೆ ಇರುವುದು ಹಾಗೂ ಶಾಲಾ ಅಭಿವೃದ್ಧಿ ನಿರ್ವಹಣಾ ಸಮಿತಿ (SDMC) ಸಭೆಯಲ್ಲಿ ಪ್ರಸ್ತಾವನೆ ಇಡದೆ ಯಾರ ಗಮನಕ್ಕೂ ತರದೆ ಇರುವುದು ನಿಜಕ್ಕೂ ದುರಂತ. ಶಿಕ್ಷಣ ಸಚಿವರು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಮನವಿ.

–ಅರವಿಂದ್ ಶರ್ಮ, ಮೈಸೂರು.

ಚಂದ್ರಶೇಖರ ಗುರೂಜಿಯ ಹತ್ಯೆ ಖಂಡನೀಯ!

ಮಾನ್ಯರೆ,



ಹುಬ್ಬಳ್ಳಿಯಲ್ಲಿ ಸರಳ ವಾಸ್ತು ಖ್ಯಾತಿಯ ವಾಸ್ತುತಜ್ಞ ಚಂದ್ರಶೇಖರ ಗುರೂಜಿಯವರು ಹಾಡುಹಗಲೇ ಭೀಕರವಾಗಿ ಕೊಲೆಯಾಗಿರುವುದು ಇಡೀ ರಾಜ್ಯದ ಜನತೆ ಬೆಚ್ಚಿ ಬೀಳುವ ಸಂಗತಿಯಾಗಿದೆ. ಇದು ಈಶಾನ್ಯ ಮೂಲೆಯಾದ ಕಾರಣ ಸಂಪು ಇಲ್ಲೇ ಬರಬೇಕು. ಇದು ಅಗ್ನಿಮೂಲೆಯಾಗಿದ್ದು ಅಡುಗೆಮನೆ ಇಲ್ಲೇ ಆಗಬೇಕು. ಇದು ಕುಬೇರ ಮೂಲೆಯಾಗಿರುವುದರಿಂದ ಮನೆಯ ಯಜಮಾನ ಇಲ್ಲೇ ಮಲಗಿದರೆ ಶ್ರೇಷ್ಠ ಎಂದೆಲ್ಲಾ ಸಲಹೆ ಸೂಚನೆ ಮಾರ್ಗದರ್ಶನ ನೀಡುತ್ತಿದ್ದ ಪ್ರಸಿದ್ಧ ವಾಸ್ತು ತಜ್ಞನಿಗೆ ತಾನು ಕುಳಿತಿದ್ದ ಸ್ಥಳದಲ್ಲೇ ತನಗೆ ಸಾವು ಬರುತ್ತದೆ ಎಂದು ತಿಳಿಯದಾಗದದ್ದು ಮಾತ್ರ ವಿಪರ್ಯಾಸ!

ಇತ್ತೀಚೆಗೆ ಕೊಲೆ ಹತ್ಯೆಯಂತಹ ಅಪರಾಧ ಪ್ರಕರಣಗಳು ದಿನೇ ದಿನೆ ಹೆಚ್ಚಾಗುತ್ತಿರುವುದು ಅತ್ಯಂತ ಕಳವಳಕಾರಿಯಾದ ಸಂಗತಿಯಾಗಿದೆ. ದ್ವೇಷ ಅಸೂಯೆ ಆಸ್ತಿ ವ್ಯಾಜ್ಯ ಹೀಗೆ ನಾನಾ ಕಾರಣಗಳಿಗೆ ಬರ್ಬರ ಹತ್ಯೆಗಳು ನಡೆಯುತ್ತಿದ್ದರೆ ಮಾನವೀಯ ಮೌಲ್ಯಗಳಿಗೆ ಬೆಲೆ ಎಲ್ಲಿದೆ? ಜೀವನದಲ್ಲಿ ಹಣಕ್ಕೆ ಪ್ರಾಧಾನ್ಯತೆ ಕೊಟ್ಟು ಕೊಲೆಯಂತಹ ಪೈಶಾಚಿಕ ಕೃತ್ಯಕ್ಕೆ ಮಾನವ ಇಳಿದು ಬಿಟ್ಟರೆ ಮನುಷ್ಯ ಪ್ರೀತಿಗೆ ಅರ್ಥವೇನಿದೆ? ಸರಳ ವಾಸ್ತುತಜ್ಞ ಚಂದ್ರಶೇಖರ ಗುರೂಜಿಯ ಹತ್ಯೆ ಖಂಡನೀಯ. ಕೊಲೆಗೆ ಕಾರಣಗಳು ಏನೇ ಇರಲಿ, ಪೊಲೀಸರು ಮಾತ್ರ ಕೃತ್ಯ ಎಸಗಿದವರ ಹೆಡೆಮುರಿ ಕಟ್ಟಿ ನ್ಯಾಯಾಲಯಕ್ಕೊಪ್ಪಿಸಿ ಆರೋಪಿಗಳಿಗೆ ಶೀಘ್ರವಾಗಿ ಶಿಕ್ಷೆ ಕೊಡಿಸುವ ಕೆಲಸವನ್ನು ತುರ್ತಾಗಿ ಮಾಡಬೇಕಿದೆ.

–ಹರಳಹಳ್ಳಿಪುಟ್ಟರಾಜು, ಪಾಂಡವಪುರ.

ಹೊರವರ್ತುಲ ರಸ್ತೆಯಲ್ಲಿ ಸಿಟಿ ಬಸ್ ಸಂಚರಿಸಲಿ

ಮಾನ್ಯರೆ,

ಮೈಸೂರು ನಗರ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಬಿಎಂಟಿಸಿ ಬೆಂಗಳೂರಿನಲ್ಲಿ ಹೊರವರ್ತುಲ ರಸ್ತೆಯಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಸಿಟಿ ಬಸ್ ಸಂಚಾರದ ವ್ಯವಸ್ಥೆ ಮಾಡಿದೆ. ಆದರೆ ಮೈಸೂರಿನಲ್ಲಿ ಈ ವ್ಯವಸ್ಥೆ ಇಲ್ಲ. ಮಣಿಪಾಲ್ ಆಸ್ಪತ್ರೆ ಈ ಹಿಂದಿನ ಕೊಲಂಬಿಯಾ ಏಷಿಯಾ ವೃತ್ತದಿಂದ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್, ಮೇಟಗಳ್ಳಿ, ಹಿನಕಲ್, ಬೋಗಾದಿ, ಶಾರದಾದೇವಿನಗರ ಕಡೆಯಿಂದ ಮೈಸೂರು ನಗರ ಬಸ್ ನಿಲ್ದಾಣಕ್ಕೆ ಇದರ ವಿರುದ್ಧವಾಗಿ ಬಸ್‌ಗಳು ಸಂಚರಿಸಿದಲ್ಲಿ ಹಿರಿಯ ನಾಗರಿಕರಿಗೆ, ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಇದರ ಬಗ್ಗೆ ಗಮನಹರಿಸಬೇಕಾಗಿ ಮನವಿ.

– ನೊಂದ ಪ್ರಯಾಣಿಕರು, ಮೈಸೂರು.

ದೀಪ ಸಾಲು



ಡಾ. ಗುಬ್ಬಿಗೂಡು ರಮೇಶ್
ಮೊ : 9742934512

ನೈತಿಕ, ತಾಂತ್ರಿಕ ಶಿಕ್ಷಣ ಆತ್ಮಾನುಸಂಧಾನ

ರಾಷ್ಟ್ರೀಯ ಶಿಕ್ಷಣ ನೀತಿ ಸದ್ದು ಮಾಡುತ್ತಿರುವ ಈ ದಿನಗಳಲ್ಲಿ ಭಾರತದ ಬಹುಸಂಖ್ಯಾತ ಜನರಿಗೆ ವೈಯಕ್ತಿಕವಾಗಿ ತಲುಪಲೇಬೇಕಾದ ವ್ಯವಸ್ಥೆಗಳೆಂದರೆ ಆರೋಗ್ಯ, ಶಿಕ್ಷಣ, ಉದ್ಯೋಗಾವಕಾಶ. ಈ ಮೂರೂ ವಿಚಾರಗಳಿಗೂ ಪರಸ್ಪರ ಒಂದಕ್ಕೊಂದು ಸಾಮ್ಯತೆಗಳಿವೆ. ಅಂದರೆ ಸರಿಯಾದ ಶಿಕ್ಷಣವಿದ್ದರೆ, ಉದ್ಯೋಗಾವಕಾಶ, ಉದ್ಯೋಗವಿದ್ದರೆ, ಆರೋಗ್ಯ ಏರುಪೇರಾದರೆ, ಶುಶ್ರೂಷೆ ಮತ್ತು ವೈದ್ಯಕೀಯ ಸೇವೆ ಎರಡನ್ನೂ ಪಡೆಯುವ ಶಕ್ತಿ ಸಂಚಯನವಾಗುತ್ತದೆ. ಆದರೆ, ಇಂದು ಶಿಕ್ಷಣ ಎಂದರೆ ಸಂಸ್ಕಾರ ಕೊಡುವ, ನೈತಿಕತೆ, ಸಂಪನ್ನತೆ ತುಂಬಿ ನಾಗರಿಕನನ್ನಾಗಿ ರೂಪಿಸುವ ಶಿಕ್ಷಣ ನಮ್ಮ ಮಕ್ಕಳಿಗೆ ಸಿಗಬೇಕೋ ಅಥವಾ ತಲೆತುಂಬ ಮಾಹಿತಿ ತುಂಬಿ ಉದ್ಯೋಗ ಕೊಡಿಸುವ, ನಾಗರಿಕತೆಯ ಬಳಕೆಗೆ ಒಗ್ಗಿಕೊಳ್ಳುವ, ದುಡ್ಡು ಸಂಪಾದಿಸುವ ಕಲೆ ಕಲಿಸಿ, ಸ್ಥಾನಮಾನ ಸೃಷ್ಟಿಸುವ ಶಿಕ್ಷಣ ಬೇಕೋ? ಎಂಬುದೇ ಒಂದು ಪ್ರಶ್ನೆಯಾಗಿದೆ.

ಶಿಕ್ಷಣ ತಜ್ಞರು, ಚಿಂತಕರು, ಪೋಷಕರು ಬಯಸುವ ಶಿಕ್ಷಣ ವ್ಯವಸ್ಥೆ ಎಂದರೆ ಈ ಎರಡನ್ನೂ ಸಮ್ಮಿಳಿತಗೊಳಿಸಿದ ಸಮಗ್ರ ಶಿಕ್ಷಣ ನೀತಿ. ಇದರಲ್ಲಿ ಈ ಬಗೆಯ ಎಲ್ಲಾ ವಿನ್ಯಾಸಗಳಿವೆ ಮತ್ತು ಅವಕಾಶಗಳಿವೆ. ಆದರೆ ಅದನ್ನು ಸರಿಯಾದ ರೀತಿಯಲ್ಲಿ ಚರ್ಚಿಸಬೇಕಾಗಿದೆ ಅಷ್ಟೆ.

ಗುರುಕುಲದಿಂದ ಆನ್‌ಲೈನ್ ತರಗತಿಯವರೆಗೆ ಭಾರತೀಯ ಶಿಕ್ಷಣ ವ್ಯವಸ್ಥೆ ಅನೂಚಾನವಾಗಿ ನಡೆಯುತ್ತಲೇ ಇದೆ. ಬದಲಾವಣೆ ಜಗದ ನಿಯಮ, ಹಾಗಾಗಿ ಗುರುಕುಲದಲ್ಲಿ ಋಷಿ ಸಂಸ್ಕೃತಿಯಿಂದ ಆರಂಭವಾದ ನಮ್ಮ ಶಿಕ್ಷಣ ಪರಂಪರೆ, ಅರವತ್ನಾಲ್ಕು ವಿದ್ಯೆಗಳನ್ನು ಕಲಿಸಿ, ಇಂದು ಆನ್‌ಲೈನ್ ಮತ್ತು ಸ್ಮಾರ್ಟ್‌ಕ್ಲಾಸ್‌ವರೆಗೂ ಬಂದು ನಿಂತಿದೆ. ಉದಾಹರಣೆಗೆ ನಾವು ಓದುವ ಕಾಲದಲ್ಲಿ 'ಮಣ್ಣಿ'ಗೆ ಸಂಬಂಧಪಟ್ಟ ಪಾಠ ಮಾಡುವುದಿದ್ದರೆ, ನಮ್ಮ ಅಧ್ಯಾಪಕರು ಪಠ್ಯಪುಸ್ತಕದಲ್ಲಿ ಸಂಗ್ರಹಿಸಿಕೊಟ್ಟಿರುವ ಮಾಹಿತಿಯನ್ನು ಹೇಳಿ ನೋಟ್ಸ್ ಬರೆದು ಕೈತೊಳೆದುಕೊಳ್ಳುತ್ತಿದ್ದರು. ಆದರೆ ಸ್ಮಾರ್ಟ್‌ಕ್ಲಾಸು, ಇಂಟರ್‌ನೆಟ್ಟು, ಗ್ಲೋಬಲ್ ಇನ್‌ಫರ್ಮೇಷನ್‌ಗಳ (Global Information) ಈ ಕಾಲದಲ್ಲಿ ಅಧ್ಯಾಪಕ ತರಗತಿಗೆ ಹೋಗುತ್ತಿದ್ದಂತೆ ಪೂರ್ವಸಿದ್ಧತೆಯಾಗಿ ಸ್ಮಾರ್ಟ್‌ಕ್ಲಾಸಿನ ಸ್ಕ್ರೀನಿನ ಮೇಲೆ ಎಜುಸ್ಯಾಟ್‌ನಿಂದ ಮಣ್ಣಿಗೆ ಸಂಬಂಧಿಸಿದ ನೂರಾರು ವಿವರಗಳು ಮತ್ತು ಅದರ ನಿರ್ವಹಣೆಗಳು, ವೈಜ್ಞಾನಿಕ ತಳಹದಿಯ ಮೇಲೆ ನಿರೂಪಿತವಾಗುತ್ತಿರುತ್ತವೆ. ಜಲಮಾರ್ಗಗಳ ಪಾಠ ಮಾಡುವ ಅಧ್ಯಾಪಕ ನದಿಗಳು, ಅಣೆಕಟ್ಟೆಗಳು, ಜಲಾನಯನ ಪ್ರದೇಶಗಳು, ನೌಕಾಸಂಚಾರ, ಪ್ರವಾಹ, ಒಹಾಯೋ, ಮಿಸ್ಸಿಸಿಪ್ಪಿ ನದಿ ಜಲಾನಯನಗಳು, ಇಂಗ್ಲೆಂಡ್‌ನ ಕಾಲುವೆಗಳ ಜಾಲ, ಕೆನಡಾದ ಲೇಕ್ ಸುಪೀರಿಯರ್‌ಗಳು, ಭಾರತದಲ್ಲಿ ಭೋರ್ಗರೆವ ಸಮುದ್ರಗಳು – ಹೀಗೆ ನೂರಾರು ಮಾಹಿತಿಗಳನ್ನು ಪವರ್‌ಪಾಯಿಂಟ್ ಪ್ರಸೆಂಟೇಷನ್ನಿನ ಮೂಲಕ ಜಗತ್ತಿನ ಜಲಸಂಚಾರವನ್ನೇ ವಿಶ್ಯುಯಲ್ ಎಫೆಕ್ಟ್‌ನ ಜೊತೆ ತೋರಿಸಿ, ಪಾಠ ಮಾಡುವ ಸ್ಮಾರ್ಟ್ ಕ್ಲಾಸ್‌ಗಳು ಜಗತ್ತಿನ ಶಿಕ್ಷಣ ಪದ್ಧತಿಯಾಗಿ ಅಸ್ತಿತ್ವಕ್ಕೆ ಬಂದಿವೆ. ಭಾರತ ಕೂಡ ಅದರಲ್ಲಿ ಹಿಂದೆ ಬಿದ್ದಿಲ್ಲ.

ನಮ್ಮ ಶಿಕ್ಷಣ ವ್ಯವಸ್ಥೆ ಕೂಡ ಇದೀಗ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಸಾರ ಅಪ್‌ಡೇಟ್ ಆಗುವ ಹಂತದಲ್ಲಿದೆ. ತಾಂತ್ರಿಕತೆ ಬೆಳೆದಂತೆಲ್ಲಾ ನಮ್ಮ ಸಾಮಾಜಿಕ ಜೀವನಶೈಲಿಗಳೂ ಬದಲಾಗುತ್ತಿರುತ್ತವೆ. ಪಾನಿಪುರಿ ತಿಂದು ಕೊಡಬೇಕಾದ 25 ರೂಪಾಯಿಗೆ ಗೂಗಲ್‌ಪೇ, ಫೋನ್‌ಪೇ ಮಾಡುವ ಆನ್‌ಲೈನ್ ವ್ಯವಹಾರ, ಗ್ರಾಹಕನ ಮೊಬೈಲ್ ಆಪ್‌ನಲ್ಲಿ ಸೆರೆಯಾಗಿದೆ. ಅಂದ ಮೇಲೆ ಇನ್ನು ಶಿಕ್ಷಣವೆಂಬುದು ಅಪ್‌ಡೇಟ್ ಆಗುವುದಿಲ್ಲವೇ? ಶಿಕ್ಷಣವೂ ಕೂಡ ಈಗ ಕೌಶಲ್ಯಾಧಾರಿತವಾಗ ಬೇಕಾಗಿದೆ. ಇಲ್ಲಿಯವರೆವಿಗೂ ಒಬ್ಬ ಪದವೀಧರ ಒಂದು ವಿಶ್ವವಿದ್ಯಾನಿಲಯದಿಂದ ಪದವಿ ಪಡೆದು ಉದ್ಯೋಗ ಅರಸಿ ಹೊರಟನೆಂದರೆ ಅವನ ಕೈಯ್ಯಲ್ಲಿ ಕೇವಲ ಅವನು ಓದಿ ಉರುಹಚ್ಚಿ ಪರೀಕ್ಷೆ ಬರೆದು ಪಡೆದ ವಿವಿಧ ಗ್ರೇಡಿನ ಅಂಕಪಟ್ಟಿ ಮಾತ್ರ ಇರುತ್ತಿತ್ತು.

ಹೊಸ ಶಿಕ್ಷಣ ನೀತಿಯಲ್ಲಿ ಕೌಶಲ್ಯಾಧಾರಿತ, ಗುಣಮಟ್ಟದ ಶಿಕ್ಷಣ ಚರ್ಚೆಯಾಗುತ್ತಿರುವುದರಿಂದ ಮುಂದಿನ ತಲೆಮಾರಿನ ಪದವೀಧರರ ಕೈಯ್ಯಲ್ಲಿ ಅಂಕಪಟ್ಟಿಯ ಜೊತೆಗೆ ಕೌಶಲ್ಯಾಧಾರಿತ ಕೆಲಸದ ಕೈಚಳಕ ಇರುತ್ತದೆ. ನಮ್ಮ ಕಾಲದ ಹಾಗೆ ಕೆಲಸ ಕೊಡಲು ಅನುಭವ ಕೇಳುವ ಷರತ್ತುಗಳಿರುವುದಿಲ್ಲ! ಕೌಶಲ್ಯ ಮತ್ತು ಬುದ್ಧಿವಂತಿಕೆ ಎರಡೂ ಮೇಳವಿಸಿದ, ಮಾದರಿ ವಿದ್ಯಾರ್ಥಿ ಸಮೂಹ ಸೃಷ್ಟಿಯಾಗುತ್ತದೆ. ಆದರೆ ಇಂಥ ಆಧುನಿಕ ಯಂತ್ರ ಮಾನವನನ್ನು ತಯಾರು ಮಾಡುವಾಗ ಆ ವಿದ್ಯಾರ್ಥಿಯ ಮಿದುಳಲ್ಲಿ ಅಧ್ಯಾಪಕ ಮಹಾಶಯ ನೈತಿಕ ಶಿಕ್ಷಣದ ಹೂರಣವಿಟ್ಟಾಗ ಮಾತ್ರ ನಮ್ಮ ವಿದ್ಯಾರ್ಥಿ ಸಮುದಾಯ ಸಮೃದ್ಧ, ಸಮಗ್ರ, ಸಕಾರಾತ್ಮಕ ನಾಗರಿಕನಾಗಿ ರೂಪುಗೊಳ್ಳಲು ಸಾಧ್ಯ.

ಉದ್ಯೋಗ ಗಿಟ್ಟಿಸಿಕೊಳ್ಳಲಿಕ್ಕಾಗಿಯೇ ಕಲಿಯುವ ಶಿಕ್ಷಣ ಸಮಾಜವನ್ನು ವ್ಯಕ್ತಿಯಿಂದ ಬೇರ್ಪಡಿಸಿ ಸ್ವಾರ್ಥಪರನನ್ನಾಗಿ ರೂಪಿಸಿಬಿಡುತ್ತದೆ. ಸಾಮಾಜಿಕ ಜವಾಬ್ದಾರಿಯಿಂದ ವಿಮುಖರನ್ನಾಗಿ ಮಾಡಿಬಿಡುತ್ತದೆ. ಅವನು ಸಮಾಜಸ್ನೇಹಿ ನಾಗರಿಕನಾಗಿ ರೂಪುಗೊಳ್ಳಬೇಕಾದರೆ, ಯಾವುದೋ ಸಿದ್ಧಾಂತ, ಯಾವುದೋ ಪ್ರೇರಣೆ, ಪ್ರಭಾವಗಳಿಗೆ ಒಳಗಾಗದೆ ಮನುಷ್ಯಪರ ನೈತಿಕತೆಯನ್ನು ಪಠ್ಯಕ್ರಮದಲ್ಲಿಯೇ ಓದಿ ಕೇಳಿ ತಿಳಿದು, ತಾಂತ್ರಿಕತೆಯನ್ನು ಕಲಿತು ಆಚೆ ಬಂದರೆ ಹೊಸಯುಗದ ಸಮಗ್ರ ಮಾದರಿ ಯುವ ವಿದ್ಯಾರ್ಥಿಯ ಪೋಷಾಕಿನಲ್ಲಿ ಆತ ಕಾಣಿಸುತ್ತಾನೆ. ನಮ್ಮ ಹೊಸ ಶಿಕ್ಷಣ ಪದ್ಧತಿ ಇಂತಹ ಸಮಗ್ರ ದೃಷ್ಟಿ, ಸಮನ್ವಯ ಪಥ ತೋರಿಸ ಬೇಕಾಗಿದೆ. ನೈತಿಕ ಶಿಕ್ಷಣಕ್ಕೂ, ತಾಂತ್ರಿಕ ಶಿಕ್ಷಣಕ್ಕೂ ಮಧ್ಯೆ ಅನುಸಂಧಾನವಿರಬೇಕು. ಒಮ್ಮೆ ಸೋಷಿಯಲ್ ಮೀಡಿಯಾದಲ್ಲಿ ಕೆಲವು ಜೋಕುಗಳು ಓಡಾಡುತ್ತಿದ್ದವು. ಅವುಗಳ ನಡುವೆ ತುಂಬಾ ಸೆನ್ಸಿಬಲ್ ಆದ ಘಟನೆಯೊಂದು ಗಮನ ಸೆಳೆಯುವಂತಿತ್ತು.

ಉದ್ಯೋಗ ಗಿಟ್ಟಿಸಿಕೊಳ್ಳಲಿಕ್ಕಾಗಿಯೇ ಕಲಿಯುವ ಶಿಕ್ಷಣ ಸಮಾಜವನ್ನು ವ್ಯಕ್ತಿಯಿಂದ ಬೇರ್ಪಡಿಸಿ ಸ್ವಾರ್ಥಪರನನ್ನಾಗಿ ರೂಪಿಸಿಬಿಡುತ್ತದೆ. ಸಾಮಾಜಿಕ ಜವಾಬ್ದಾರಿಯಿಂದ ವಿಮುಖರನ್ನಾಗಿ ಮಾಡಿ ಬಿಡುತ್ತದೆ. ಅವನು ಸಮಾಜಸ್ನೇಹಿ ನಾಗರಿಕನಾಗಿ ರೂಪುಗೊಳ್ಳ ಬೇಕಾದರೆ, ಯಾವುದೋ ಸಿದ್ಧಾಂತ, ಯಾವುದೋ ಪ್ರೇರಣೆ, ಪ್ರಭಾವಗಳಿಗೆ ಒಳಗಾಗದೆ ಮನುಷ್ಯಪರ ನೈತಿಕತೆಯನ್ನು ಪಠ್ಯಕ್ರಮದಲ್ಲಿಯೇ ಓದಿ ಕೇಳಿ ತಿಳಿದು, ತಾಂತ್ರಿಕತೆಯನ್ನು ಕಲಿತು ಆಚೆ ಬಂದರೆ ಹೊಸಯುಗದ ಸಮಗ್ರ ಮಾದರಿ ಯುವ ವಿದ್ಯಾರ್ಥಿಯ ಪೋಷಾಕಿನಲ್ಲಿ ಆತ ಕಾಣಿಸುತ್ತಾನೆ. ನಮ್ಮ ಹೊಸ ಶಿಕ್ಷಣ ಪದ್ಧತಿ ಇಂತಹ ಸಮಗ್ರ ದೃಷ್ಟಿ, ಸಮನ್ವಯ ಪಥ ತೋರಿಸ ಬೇಕಾಗಿದೆ. ನೈತಿಕ ಶಿಕ್ಷಣಕ್ಕೂ, ತಾಂತ್ರಿಕ ಶಿಕ್ಷಣಕ್ಕೂ ಮಧ್ಯೆ ಅನುಸಂಧಾನವಿರಬೇಕು.

ಶಿಕ್ಷಕರ ದಿನಾಚರಣೆಯ ದಿನ ವಿದ್ಯಾರ್ಥಿಯೊಬ್ಬ ತಮ್ಮ ಪ್ರೀತಿಪಾತ್ರ ಗುರುಗಳ ಬಳಿ ಬಂದ. ಬಂದವನೇ ನೇರವಾಗಿ ಅವರ ಕಾಲಿಗೆ ಎರಗಿ ನಮಸ್ಕರಿಸಿದ. ಶಿಕ್ಷಕರ ದಿನಕ್ಕೆ ಶುಭಕೋರಿದ. ಹುಡುಗನ ಪ್ರೀತಿ ಕಂಡು ನಿವೃತ್ತಿಯಾಗಿ ವಿಶ್ರಾಂತ ಜೀವನದಲ್ಲಿದ್ದ ಆ ಜೀವಕ್ಕೆ ಖುಷಿಯಾಯಿತು. ಮನೆವರೆಗೂ ಹುಡುಕಿಕೊಂಡು ಬಂದು ನಮಸ್ಕರಿಸಿ ಶುಭ ಕೋರಿದ ಆ ಹುಡುಗನನ್ನು ಅಕ್ಕರೆಯಿಂದ ಆಲಂಗಿಸಿದ ಗುರು ಗಳು ಕೇಳಿದರು! ಏನಪ್ಪ ನೀನೀಗ ಏನು ಮಾಡುತ್ತಿದ್ದೀ? ಅಂತ ಅದಕ್ಕೆ ವಿದ್ಯಾರ್ಥಿ ಉತ್ತರಿಸಿದ ನಿಮ್ಮ ಹಾಗೆ ನಾನೂ ಕೂಡ ಶಿಕ್ಷಕನಾಗಿದ್ದೇನೆ ಸರ್. ನೀವೇ ನನಗೆ ಆದರ್ಶ ಎಂದ. ಓ ನೀನು ನನ್ನಂತೆಯೇ ಶಿಕ್ಷಕನೇ ಆಗಿಬಿಟ್ಟೆಯಾ? ಕಾಲ ಬದಲಾಗಿದೆ. ಇನ್ನೂ ಎತ್ತರದ ಹುದ್ದೆಗಳಿಗೆ ಪ್ರಯ ತ್ನಿಸಬಹುದಿತ್ತಲ್ಲ? ಎಂದರು ಮೇಷ್ಟ್ರು. ಅದಕ್ಕೆ ವಿದ್ಯಾರ್ಥಿಯ ಉತ್ತರ ಹೇಗಿತ್ತು ನೋಡಿ. ಎಳೆ ವಯಸ್ಸಲ್ಲಿ ನೀವು ತೋರಿದ ನೈತಿಕತೆಯ ದಾರಿ ನನ್ನನ್ನು ಬಿಡದೇ ನಿಮ್ಮನ್ನೇ ಹಿಂಬಾಲಿಸುವಂತೆ ಮಾಡಿಬಿಟ್ಟಿತು ಸರ್, ಶಿಕ್ಷಣದ ತಾಂತ್ರಿಕತೆಗಿಂತ ಶಿಕ್ಷಕನ ಮಾಂತ್ರಿಕತೆ ನನ್ನನ್ನು ರೂಪಿಸಿತು ಸರ್. ನಾನು ನಿಮ್ಮಂತೆಯೇ ನೈತಿಕ ಶಿಕ್ಷಣದ ದಾರಿ ತೋರಿ ಮಕ್ಕಳನ್ನು ಬುದ್ಧಿವಂತಿಕೆ ಮತ್ತು ಹೃದಯವಂತಿಕೆಯ ಜಾಣರನ್ನಾಗಿ ಮಾಡಬೇಕೆಂದೇ ಇಲ್ಲಿಗೆ ಬಂದೆ ಸಾರ್. ಪ್ರಾಥಮಿಕ ಶಾಲೆಯಲ್ಲಿ ನಾನು ಮಾಡಿದ ಚಿಕ್ಕ ಅಪರಾಧವನ್ನು ಮರೆತು ನೀವು ನನ್ನನ್ನು ಕ್ಷಮಿಸಿ ಪೋಷಿಸದೇ ಹೋಗಿದ್ದರೆ ನಾನೀಗ ದೊಡ್ಡ ಹುದ್ದೆಯಲ್ಲಿದ್ದರೂ ಕದಿಯುವುದನ್ನು ಕಲಿಯುತ್ತಿದ್ದೆ. ಸಮಾಜದ ಸಂಪತ್ತನ್ನೂ ಬಿಡದೆ ನುಂಗಿಹಾಕುವ ಭ್ರಷ್ಟನಾಗುತ್ತಿದ್ದೆ. ಅಂದು ನೀವು, ನಾನು ಶಾಲೆಯಲ್ಲಿ ಕಳ್ಳತನ ಮಾಡಿದಾಗ ನಡೆದುಕೊಂಡ ರೀತಿ ನನ್ನನ್ನು ನೈತಿಕತೆಯ ಕಡೆಗೆ ಕರೆದೊಯ್ಯುದಿತ್ತು. ಹಾಗೆನ್ನುತ್ತಿರುವಾಗಲೇ ಹುಡುಗ ಗುರುಗಳ ಮುಖ ಗಮನಿಸಿದ ಅವರಿಗೆ ಹಳೆಯ ಘಟನೆಯೊಂದು ನೆನಪಾಗಿ ಅವರು ಪ್ರತಿಕ್ರಿಯಿಸಬಹುದು ಎಂದು ನಿರೀಕ್ಷಿಸಿದ ಆದರೆ ಅದು ಹಾಗಾಗಲಿಲ್ಲ. ಶಿಷ್ಯನ ಬಾಯಲ್ಲಿ ಕತೆ ಕೇಳುತ್ತಾ ಕುಳಿತಂತೆ ಕುಳಿತ ಗುರುಗಳ ಮುಖದಲ್ಲಿ ಯಾವ ಭಾವನೆಯೂ ಮೂಡಲಿಲ್ಲ. ಬದಲಿಗೆ ಏನೂ ತಿಳಿಯದವರಂತೆ ಅವರು ಕುಳಿತುಬಿಟ್ಟರು. ವಿದ್ಯಾರ್ಥಿಗೆ ಪರಮಾಶ್ಚರ್ಯ! ಅದೇ ಗುರುಗಳು ಚಿಕ್ಕಂದಿನಲ್ಲಿ ನಾನು ಮಾಡಿದ ಕಳ್ಳತನದ ಘಟನೆಯನ್ನು ಮರೆತುಬಿಟ್ಟಿದ್ದಾರಾ? ಅಂತ ಆಶ್ಚರ್ಯವಾಯಿತು. ಛಲಬಿಡದ ತ್ರಿವಿಕ್ರಮನಂತೆ ಆ ಹುಡುಗ ತನ್ನ ಮೇಷ್ಟ್ರಿಗೆ ಶಾಲಾದಿನಗಳಲ್ಲಿ ನಡೆದ ಚಿಕ್ಕದೊಂದು ಕಳ್ಳತನದ ಪ್ರಸಂಗವನ್ನು ನೆನಪಿಸಲು ಯತ್ನಿಸುತ್ತಾ ಅವರ ನೆನಪಿನ ಬುತ್ತಿ ಬಿಚ್ಚುತ್ತಾ ಕತೆ ಹೇಳುತ್ತಿದ್ದ.

ಗುರುಗಳೇ ನಿಮಗೆ ನೆನಪಿಲ್ಲವೇ? ನನ್ನ ಸಹಪಾಠಿಯೊಬ್ಬ ಆಗರ್ಭ ಶ್ರೀಮಂತರೊಬ್ಬರ ಮಗ. ಒಮ್ಮೆ ಆತ ಶಾಲೆಗೆ ಬೆಲೆಬಾಳುವ ವಾಚೊಂದನ್ನು ಕಟ್ಟಿಕೊಂಡು ಬಂದಿದ್ದ. ಊಟದ ಸಮಯದಲ್ಲಿ ಬಿಚ್ಚಿ ಬ್ಯಾಗಿನಲ್ಲಿಟ್ಟಿದ್ದ ವಾಚನ್ನು ನಾನು ಕದ್ದು ಬಿಟ್ಟೆ. ಆತ ಅಳುತ್ತಾ ನಿಮ್ಮ ಬಳಿ ದೂರು ಕೊಟ್ಟ, ಕದ್ದವರು ಯಾರೇ ಆಗಲಿ ಅವರಾಗಿ ಅವರೇ ವಾಚನ್ನು ತಂದುಕೊಟ್ಟರೆ ನಾನವರನ್ನು ಕ್ಷಮಿಸುತ್ತೇನೆ ಎಂದಿರಿ. ನಾನದನ್ನು ಕೊಟ್ಟರೆ, ಸಹಪಾಠಿಗಳ ಎದುರು ನಾನು ಕಳ್ಳನಾಗಿ ಹೋಗುತ್ತೇನೆ ಎನ್ನುವ ಭಯಕ್ಕೆ ನಾನು ಅದನ್ನು ಕೊಡಲಿಲ್ಲ. ಕೋಣೆ ಬಾಗಿಲು ಮುಚ್ಚಿ ಎಲ್ಲರನ್ನೂ ವೃತ್ತಾಕಾರವಾಗಿ ನಿಲ್ಲಿಸಿ ಎಲ್ಲರೂ ಕಣ್ಣು ಮುಚ್ಚಿಕೊಳ್ಳುವಂತೆ ಹೇಳಿದಿರಿ. ಕಣ್ಣುಮುಚ್ಚಿಕೊಂಡು ನಿಂತ ಎಲ್ಲರ ಜೇಬುಗಳನ್ನು ನೀವೇ ಸ್ವತಃ ನಿಮ್ಮ ಕೈಯ್ಯಾರ ತಡಕಾಡಿದಿರಿ, ವಾಚು ನನ್ನ ಜೇಬಿನಲ್ಲೇ ನಿಮಗೆ ಸಿಕ್ಕಿತು. ಅದನ್ನು ನನ್ನ ಸಹಪಾಠಿಗೆ ನೀಡಿ ಎಂದಿನಂತೆ ನೀವಿದ್ದುಬಿಟ್ಟಿರಿ. ಆದರೆ ನನಗೆ ಹೃದಯದ ಬಡಿತ ಜಾಸ್ತಿ ಆಗಿತ್ತು, ಎಲ್ಲಿ ಎಲ್ಲರೆದುರು ನಿಲ್ಲಿಸಿ ಹೊಡೆದು ಬಡಿದು ಮಾಡಿ ತರಗತಿಯಲ್ಲಿ ನನಗೆ ಅಪಮಾನ ಮಾಡುತ್ತೀರೋ ಎಂಬ ಗಾಬರಿಯಲ್ಲಿದ್ದೆ. ಆದರೆ ನೀವು ಅದನ್ನು ಮಾಡಲೇ ಇಲ್ಲ. ಮುಖ್ಯೋಪಾಧ್ಯಾಯರ ಕೊಠಡಿಗೆ ಕರೆಸಿ ವಿಚಾರಣೆ ಮಾಡುತ್ತೀರೆಂದು ಭಯಪಟ್ಟೆ, ಅದನ್ನೂ ಮಾಡಲಿಲ್ಲ. ಮಾರನೆಯ ದಿನ ನನ್ನ ಪೋಷಕರನ್ನು ಕರೆಸಿ ರಂಪಾಟ ನಡೆಸುತ್ತೀರೆಂದು ಎಣಿಸಿದೆ. ನೀವು ಅದನ್ನೂ ಮಾಡಲಿಲ್ಲ. ನಾನಾಗ ಒಂದು ನಿರ್ಧಾರಕ್ಕೆ ಬಂದೆ. ಯಾವ ಶಿಕ್ಷೆಯನ್ನೂ ಕೊಡದೆ ಮುಜುಗರ ಅಪಮಾನಗಳನ್ನು ಮಾಡದೇ, ನನ್ನ ಬಡತನವನ್ನು ಹಂಗಿಸದೆ ಒಳ್ಳೆಯದರ ಕಡೆಗೆ, ಸಚ್ಚಾರಿತ್ರ್ಯದ ಕಡೆಗೆ ನಡೆಯುವಂತೆ ನನ್ನನ್ನು ಪ್ರೇರೇಪಿಸಿದಿರಿ. ಅಂದೇ ಅಂದುಕೊಂಡೆ ಮುಂದೆ ನಾನೂ ಇವರಂತೆ ನೈತಿಕ ಶಿಕ್ಷಣದ ಪಥದಲ್ಲೇ ನಡೆದು ವಾತ್ಸಲ್ಯದಿಂದ ಮಕ್ಕಳ ಮನಸ್ಸನ್ನು ಪರಿವರ್ತಿಸಿ ಉತ್ತಮ ನಾಗರಿಕರನ್ನಾಗಿಸಲು ತೀರ್ಮಾನಿಸಿದೆ. ಹಾಗಾಗಿ ಇಂದು ಶಿಕ್ಷಕರ ದಿನ. ನಿಮಗಿಂದು ವಂದಿಸಿದರೆ ಅದು ಅರ್ಥಪೂರ್ಣ. ನಿಮ್ಮಿಂದ ಕಲಿತ ವಾತ್ಸಲ್ಯದ ಪಾಠ ನನ್ನನ್ನು ಇಲ್ಲಿಯವರೆಗೂ ಕರೆತಂದಿತು ಗುರುಗಳೇ, ಎಂದು ಹುಡುಗ ತನ್ನ ಮಾತು ನಿಲ್ಲಿಸಿದ. ಗುರುಗಳ ಪ್ರತಿಕ್ರಿಯೆಗಾಗಿ ಕಾಯುತ್ತಾ ನಿಂತ. ಕಣ್ಣಲ್ಲೇ ನೀರಾದ ಅವನ ಮೇಷ್ಟ್ರು ಆ ದಿನ ವಾಚು ಕದ್ದ ಹುಡುಗ ನೀನೇನ ಕಂದ ಎಂದರು. ಹೌದು ಗುರುಗಳೇ ಏಕೆ ಕತೆ ಕೇಳಿದ ಮೇಲೂ ನಿಮಗೆ ನಾನು ಯಾರೆಂದು ಗೊತ್ತಾಗಲಿಲ್ಲವೇ? ಎಂದ.

ಅದಕ್ಕೆ ಉತ್ತರಿಸುತ್ತಾ ಮೇಷ್ಟ್ರು ಹೇಳಿದರು. ನೀನೇ ಆ ಹುಡುಗ ಅಂತ ಇಲ್ಲಿವರೆಗೂ ನನಗೂ ಗೊತ್ತಿರಲಿಲ್ಲ ಮಗು! ಈಗಲೇ ಗೊತ್ತಾಗಿದ್ದು ಎಂದರು. ಹಾಗಾದರೆ ಆ ದಿನ ಜೇಬಿಗೆ ಕೈಹಾಕಿ ವಾಚು ತೆಗೆಯುವಾಗ ನೀವು........ ಎಂದು ಉದ್ಗಾರವೆಳೆದ ಹುಡುಗ, ಹುಡುಗನ ಉದ್ಗಾರವನ್ನೂ ಅರ್ಧಕ್ಕೇ ತಡೆದು ಗುರುಗಳು ಹೇಳಿದರು. ಆ ದಿನ ಆ ವಾಚು ಕದ್ದ ಹುಡುಗ ನನಗೂ ಗೊತ್ತಾಗ ಬಾರದು ಅಂತ ಜೇಬು ಚೆಕ್ ಮಾಡುವ ವೇಳೆ ನಿಮ್ಮೆಲ್ಲರಂತೆ ನಾನು ಕಣ್ಣು ಮುಚ್ಚಿಕೊಂಡಿದ್ದೆ ಕಂದ. ವಾಚು ಕದ್ದ ಹುಡುಗ ನನ್ನೆದುರಿಗೂ ಮುಜುಗರಪಡಬಾರದು ಎಂಬ ಕಾರಣಕ್ಕೆ ನಾನೂ ಕಣ್ಣು ಮುಚ್ಚಿದ್ದೆ ಎಂದು ಹುಡುಗನ ಮೈದಡವಲು ಹುಡುಗನನ್ನು ಹುಡುಕಿದರು ಮೇಷ್ಟ್ರು. ಹುಡುಗ ಮಾತ್ರ ಅವರ ಮಮಕಾರಕ್ಕೆ ಮಾರು ಹೋಗಿ ಅವರ ಪಾದಾರವಿಂದಗಳ ಮೇಲೆ ಧನ್ಯತೆಯಿಂದ ಮಲಗಿಬಿಟ್ಟಿದ್ದ. ಹೊಸ ಶಿಕ್ಷಣ ನೀತಿ ನಮ್ಮ ಮಕ್ಕಳಿಗೆ ಉದ್ಯೋಗ ಕೊಡಿಸಲು, ಅವಕಾಶಗಳ ಹೆಬ್ಬಾಗಿಲನ್ನೇ ತೆರೆಸಲಿ. ವಿಶ್ವಪ್ರಜೆಯನ್ನಾಗಿ ರೂಪಿಸಲಿ. ಸಮತೆಯ ಜ್ಯೋತಿ ಹಚ್ಚಲಿ. ಬಡವ ಬಲ್ಲಿದ ಒಟ್ಟಿಗೇ ಕುಳಿತು ಕಲಿಯುವಂತೆ ಮಾಡಲಿ. ತಂತ್ರಜ್ಞಾನದ ತಾಂತ್ರಿಕ ಶ್ರೀಮಂತಿಕೆ ತರಲಿ. ಅದರ ಜೊತೆಗೆ ನೈತಿಕ ಶಿಕ್ಷಣದ ಹೃದಯವಂತಿಕೆಯ ಹೊಸ ಮಾದರಿಗಳನ್ನು ಸೃಷ್ಟಿಸಲಿ. ಏನಂತೀರಿ?

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಯುವಕರಿಗೆ ಒಂದಲ್ಲ ಒಂದು ಉದ್ಯೋಗ ಖಾತರಿ

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಭರವಸೆ

ಬೆಂಗಳೂರು,ಜು.11(ಕೆಎಂಶಿ)–ಮುಂಬರುವ ವಿಧಾನ ಸಭೆ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ನಿರುದ್ಯೋಗಿ ಯುವಕರನ್ನು ಹುಡುಕಿ ಅವರಿಗೆ ಒಂದಲ್ಲ ಒಂದು ಕೆಲಸ ಅಥವಾ ಜವಾಬ್ದಾರಿಯನ್ನು ಕೊಡುವ ಭರವಸೆಯನ್ನು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇಂದಿಲ್ಲಿ ನೀಡಿಸಿದ್ದಾರೆ.

ನಗರದ ಅರಮನೆ ಆವರಣದಲ್ಲಿ ಯುವ ಕಾಂಗ್ರೆಸ್ ಏರ್ಪಡಿಸಿದ್ದ ಯುವಜನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಾವು ಅಧಿಕಾರಕ್ಕೆ ಬಂದರೆ ಪ್ರದೇಶವಾರು ಹಾಗೂ ತಾಲೂಕುವಾರು ಉದ್ಯೋಗ ನೀತಿ ರೂಪಿಸುತ್ತೇವೆ. ಮೇಳದಲ್ಲಿ ಅನೇಕ ಸಲಹೆಗಳು ಬಂದಿವೆ. ಅದರಲ್ಲಿ ಕೆಲವು ಉಪಯುಕ್ತ ಮತ್ತೆ ಕೆಲವು ಮಾಡಲು ಸಾಧ್ಯವಿಲ್ಲ. ಯುವ ಸಮುದಾಯ ಒಂದಾದರೆ ಏನು ಬೇಕಾದರೂ ಮಾಡಬಹುದು.

ನಾವಿಲ್ಲಿಗೆ ಚುನಾವಣಾ ಪ್ರಚಾರ, ಭಾಷಣ ಮಾಡಲು ಬಂದಿಲ್ಲ. ನಮಗೆ ಜೀವನದಲ್ಲಿ ಗುರಿ ಇದ್ದು, ನಾವದನ್ನು ತಲುಪಬೇಕು. ನಮ್ಮದು ಇತಿಹಾಸವುಳ್ಳ ರಾಷ್ಟ್ರ, ಪ್ರಜಾಪ್ರಭುತ್ವವುಳ್ಳ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಪಕ್ಷ. ಕಳೆದ 60ಕ್ಕೂ ಹೆಚ್ಚು ವರ್ಷಗಳ ಕಾಲ ದೇಶದಲ್ಲಿ ಅಧಿಕಾರ ನಡೆಸಿ, ಸಾಕಷ್ಟು ಬದಲಾವಣೆ ತಂದಿದ್ದೇವೆ. ನೆಹರೂ ಅವರ ಕಾಲದಲ್ಲಿ ಉದ್ಯೋಗ ಸೃಷ್ಟಿಸಲು ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಆರಂಭಿಸಲಾಯಿತು. ಉದ್ಯೋಗ ಸೃಷ್ಟಿ ಹಾಗೂ ದೇಶ ಸ್ವಾವಲಂಬನೆ ಸಾಧಿಸಲು ಹೆಚ್‌ಎಂಟಿ, ಐಟಿಐ, ಬೆಮೆಲ್, ಇಸ್ರೋ, ಬಿಹೆಚ್‌ಇಎಲ್ ಸೇರಿದಂತೆ ಹಲವು ಉದ್ದಿಮೆಗಳನ್ನು ಆರಂಭಿಸಲಾಯಿತು. ಈಗ ಅವುಗಳನ್ನೆಲ್ಲ ಮಾರಲಾಗುತ್ತಿದೆ. ಈಗ ಜಾಗತೀಕರಣ ಹಾಗೂ ಖಾಸಗೀಕರಣದತ್ತ ಸಮಾಜ ಸಾಗುತ್ತಿದ್ದು, ಜನಸಂಖ್ಯೆ ಹೆಚ್ಚುತ್ತಿದ್ದಂತೆ ಉದ್ಯೋಗಗಳ ಅಗತ್ಯತೆಯೂ ಹೆಚ್ಚಿದೆ. ದೇಶದಲ್ಲಿ 18 ವರ್ಷದಿಂದ 40 ವರ್ಷದ ವಯೋಮಾನದವರು ಶೇ.47ರಷ್ಟು ಜನ ಇದ್ದಾರೆ. ನಿರುದ್ಯೋಗದ ಬಗ್ಗೆ ಮಾತನಾಡಿ, ಬಿಜೆಪಿ ಟೀಕಿಸಲು ನಾವಿಲ್ಲಿ ಸೇರಿಲ್ಲ. ಕಾಂಗ್ರೆಸ್ ಪಕ್ಷದ ಮುಂದಿನ ಚಿಂತನೆ ಹೇಗಿರಬೇಕು? ನೀವು ಏನನ್ನು ನಿರೀಕ್ಷಿಸುತ್ತಿದ್ದೀರಿ? ಕೋವಿಡ್ ಸಮಯದಲ್ಲಿ ಉದ್ಯೋಗ ಕಳೆದುಕೊಂಡವರು ಯಾರು? ಎಷ್ಟು ಮಂದಿ ನಿರುದ್ಯೋಗಿಗಳಿದ್ದಾರೆ? ಎಂಬುದನ್ನು ತಿಳಿಯಬೇಕು. ಮುಂದೆ ನಾವು ಚುನಾವಣೆಗೆ ಹೋಗುವಾಗ ಯುವಕರಿಗೆ ಯಾವ ಭರವಸೆ ನೀಡಬೇಕು? ಪ್ರಣಾಳಿಕೆಯಲ್ಲಿ ಏನನ್ನು ಹೇಳಬೇಕು? ಕಳೆದ ಚುನಾವಣೆ ಸಂದರ್ಭದಲ್ಲಿ ರಾಹುಲ್ ಗಾಂಧಿ ಅವರು ನ್ಯಾಯ್



ಯೋಜನೆಯನ್ನು ತಿಳಿಸಿದ್ದರು. ಅದೇ ರೀತಿ ಬೇರೆ ಉತ್ತಮ ಯೋಜನೆ ನೀಡಬಹುದೇ? ಎಂದು ಆಲೋಚನೆ ಮಾಡಲು ನಿಮ್ಮನ್ನೆಲ್ಲಾ ಇಲ್ಲಿಗೆ ಕರೆದಿದ್ದೇವೆ. ಈ ವಿಚಾರವಾಗಿ ನೀವು ಸಮೀಕ್ಷೆ ಮಾಡಬೇಕು. ಪಕ್ಷ ನಿಮಗೆ ಅಗತ್ಯ ನೆರವು ನೀಡಲಿದೆ. ನೀವು ಮನೆ ಮನೆಗೂ ಹೋಗಿ ಆಫ್‌ಲೈನ್ ಆದರೂ ಮಾಡಬಹುದು, ಆನ್‌ಲೈನ್ ಆಗಿಯಾದರೂ ಸಮೀಕ್ಷೆ ಮಾಡಬಹುದು. ಆನ್‌ಲೈನ್‌ನಲ್ಲಿ ಸಮೀಕ್ಷೆ ಮಾಡಲು ಆಪ್ ಕೂಡ ಸಿದ್ಧಪಡಿಸಲಾಗಿದೆ. ಆ ಮೂಲಕ ಯುವಕರು ಏನನ್ನು ಬಯಸುತ್ತಿದ್ದಾರೆ ಎಂಬ ಅಭಿಪ್ರಾಯವನ್ನು ಸಂಗ್ರಹಿಸ ಬೇಕು. ಈ ರೀತಿ ಮಾಡುವಾಗ ಪಕ್ಷಕ್ಕೆ ಯಾರು ಸ್ಪಂದಿಸುತ್ತಾರೆ, ಯಾರು ಸ್ಪಂದಿಸುವುದಿಲ್ಲ ಎಂದು ತಿಳಿಯುತ್ತದೆ. ಡಿಜಿಟಲ್ ಯೂತ್ ನೇಮಕ ಮಾಡಲು, ಬೂತ್ ಮಟ್ಟದ ಸಮಿತಿ ಮಾಡಲು ಅವಕಾಶ ಸಿಗುತ್ತದೆ ಎಂದರು.

ರಾಜ್ಯದ 57 ನಿಗಮ ಮಂಡಳಿಗೆ ಶೀಘ್ರವೇ ಹೊಸ ನೇಮಕಾತಿ

ಬೆಂಗಳೂರು,ಜು.11–ರಾಜ್ಯದ 57 ವಿವಿಧ ನಿಗಮ ಮಂಡಳಿಗಳಿಗೆ ಯಾವುದೇ ಕ್ಷಣದಲ್ಲಿ ಅಧ್ಯಕ್ಷರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಲಿದೆ. ಇವುಗಳಿಗೆ ಹಾಲಿ ಅಧ್ಯಕ್ಷರಿದ್ದರೂ ಸಹ ವರಿಷ್ಠರ ಸೂಚನೆಯಂತೆ ಹೊಸದಾಗಿ ನೇಮಕಾತಿ ಮಾಡಿ, ಸರ್ಕಾರ ಆದೇಶ ಹೊರಡಿಸಲು ನಿರ್ಧರಿಸಿದೆ.

ಈ ನಿಗಮ ಮಂಡಳಿಗಳಿಗೆ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅಧ್ಯಕ್ಷರನ್ನು ನೇಮಿಸಿದ್ದರು. ಇವರಲ್ಲಿ ಬಹುತೇಕರು ಒಂದೇ ಸಮುದಾಯಕ್ಕೆ ಸೇರಿದವರು. ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ಅವಕಾಶ ಮಾಡಿಕೊಡುವ ಸಲುವಾಗಿ ಇವರಲ್ಲಿ ಬಹುತೇಕರ ಸ್ಥಾನಗಳಿಗೆ ಕುತ್ತು ಬರಲಿದೆ. ಈಗಾಗಲೇ ಪಟ್ಟಿ ಸಿದ್ಧಪಡಿಸಲಾಗಿದ್ದು, ಯಾವುದೇ ಕ್ಷಣದಲ್ಲಿ ಪ್ರಕಟಿಸುವ ಸಾಧ್ಯತೆ ಇದೆ. ಈ ಮಧ್ಯೆ ಕಂದಾಯ ಸಚಿವ ಆರ್.ಅಶೋಕ್ ನೇತೃತ್ವದ ಸಂಪುಟ ಉಪ ಸಮಿತಿ ನಷ್ಟದಲ್ಲಿರುವ ಶೇ.70 ನಿಗಮ ಮಂಡಳಿಗಳನ್ನು ರದ್ದುಪಡಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಅಲ್ಲದೆ ಒಂದು ಇಲಾಖೆಗೆ ಒಂದೇ ನಿಗಮ ಇರಬೇಕೆಂಬ ನಿಯಮವನ್ನು ರೂಪಿಸಿದೆ. ಇದರಿಂದಲೂ ಬಹುತೇಕ ನಿಗಮ ಮಂಡಳಿಗಳು ರದ್ದಾಗಲಿವೆ.



ಭಾರತದ 'ರಾಜ ಹುಲಿ' ಸಾವು

ಕೋಲ್ಕತ್ತ: ಭಾರತದ ಅತ್ಯಂತ ಹಿರಿಯ ವಯಸ್ಸಿನ ಹುಲಿಗಳಲ್ಲಿ ಒಂದಾದ 'ರಾಜ', ಸೋಮವಾರ ಪಶ್ಚಿಮಬಂಗಾಳದ ಅಲಿಪುರ್ದಾರ್ ಜಿಲ್ಲೆಯ ಜಲ್ದಪರದಲ್ಲಿರುವ ಖೈರಿಬರಿ ಹುಲಿ ಮತ್ತು ಚಿರತೆ ರಕ್ಷಣಾ ಕೇಂದ್ರದಲ್ಲಿ ಮೃತಪಟ್ಟಿದೆ. ಈ ಹುಲಿಗೆ 25 ವರ್ಷ 10 ತಿಂಗಳು ವಯಸ್ಸಾಗಿತ್ತು ಎಂದು ಜಲ್ದಪರದದ ವಿಭಾಗೀಯ ಅರಣ್ಯಾಧಿಕಾರಿ ಎಂ.ದೀಪಕ್ ತಿಳಿಸಿದ್ದಾರೆ. ದಕ್ಷಿಣ 24 ಪರಗಣ ಜಿಲ್ಲೆಯ ಮ್ಯಾಂಗ್ರೋವ್ ಅರಣ್ಯ ಮತ್ತು ಬಂಗಾಳದ ಹುಲಿಗಳ ವಾಸಸ್ಥಾನವಾದ ಸುಂದರಬನ್‌ನಲ್ಲಿ ಮೊಸಳೆ ದಾಳಿಯಿಂದ ಗಾಯಗೊಂಡಿದ್ದ ಈ ವ್ಯಾಘ್ರನನ್ನು ಆಗಸ್ಟ್ 2008ರಲ್ಲಿ ರಕ್ಷಣಾ ಕೇಂದ್ರಕ್ಕೆ ತರಲಾಗಿತ್ತು ಎಂದರು. ಅಂದಿನಿಂದ, ರಾಜ ಇಲ್ಲಿಯೇ ಇತ್ತು. ರಕ್ಷಣಾ ಕೇಂದ್ರದ ಭಾಗವಾಗಿತ್ತು ಎಂದೂ ಅವರು ತಿಳಿಸಿದ್ದಾರೆ. ರಾಜ ಕಳೆದ ಕೆಲವು ತಿಂಗಳುಗಳಿಂದ ವಯೋ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿತ್ತು. ಬಹು ಅಂಗಾಂಗ ವೈಫಲ್ಯದ ಹಿನ್ನೆಲೆಯಲ್ಲಿ ಸೋಮವಾರ ಮುಂಜಾನೆ ಮೃತಪಟ್ಟಿದೆ ಎಂದು ದೀಪಕ್ ಹೇಳಿದರು. ಸಾವಿನ ಸಮಯದಲ್ಲಿ ಹುಲಿಯು ಸುಮಾರು 140 ಕೆಜಿ ತೂಕವಿತ್ತು ಎಂದು ತಿಳಿಸಿದ್ದಾರೆ. ಖೈರಿಬರಿ ಹುಲಿ ಮತ್ತು ಚಿರತೆ ರಕ್ಷಣಾ ಕೇಂದ್ರಕ್ಕೆ ಆಗಮಿಸಿದ ಅಲಿಪುರ್ದೂರ್ ಜಿಲ್ಲಾ ಮ್ಯಾಜಿಸ್ಟ್ರೇಟ್ ಸುರೇಂದ್ರ ಕುಮಾರ್ ಮೀನಾ ಅವರು ಹುಲಿ 'ರಾಜ'ಗೆ ಪುಷ್ಪ ನಮನ ಸಲ್ಲಿಸಿದರು.

ಮಲ್ಯಗೆ 4 ತಿಂಗಳ ಜೈಲು



ನವದೆಹಲಿ: ಮದ್ಯದ ದೊರೆ ವಿಜಯ್ ಮಲ್ಯ ಅವರಿಗೆ ನ್ಯಾಯಾಂಗ ನಿಂದನೆ ಆರೋಪದಡಿ ನಾಲ್ಕು ತಿಂಗಳ ಜೈಲು ಶಿಕ್ಷೆ ಹಾಗೂ 2 ಸಾವಿರ ರೂ. ದಂಡ ವಿಧಿಸಿ ಸುಪ್ರೀಂ ಕೋರ್ಟ್ ಸೋಮವಾರ ತೀರ್ಪು ನೀಡಿದೆ. ಈ ಪ್ರಕರಣದಲ್ಲಿ ಶಿಕ್ಷೆ ಅತ್ಯಗತ್ಯ ಎಂದು ಸುಪ್ರೀಂಕೋರ್ಟ್‌ನ ನ್ಯಾಯಾಲಯ ಪೀಠ ಹೇಳಿದೆ. ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಮಲ್ಯ ಅವರ ಕುಟುಂಬ ಸದಸ್ಯರಿಗೆ ವರ್ಗಾಯಿಸಲಾದ 40 ಮಿಲಿಯನ್ ಡಾಲರ್‌ಗಳನ್ನು ಹಿಂದಿರುಗಿಸುವಂತೆ ಸುಪ್ರೀಂಕೋರ್ಟ್ ಆದೇಶಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ನಾನಾ ನಮೂನೆಯ ನಾಟಕಗಳ ಪ್ರದರ್ಶನ 'ರಂಗಸಂಭ್ರಮ'ಕ್ಕೆ ಚಾಲನೆ



ಮೈಸೂರು, ಜು.11(ಎಂಕೆ)– ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಾದರಂಗ ಆಯೋಜಿಸಿರುವ 'ರಂಗಸಂಭ್ರಮ–2022'(ಪೌರಾಣಿಕ, ಸಾಮಾಜಿಕ, ಐತಿಹಾಸಿಕ ನಾಟಕೋತ್ಸವ)ಕ್ಕೆ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಐದು ದಿನಗಳ ರಂಗಸಂಭ್ರಮದಲ್ಲಿ ಪೌರಾಣಿಕ, ಸಾಮಾಜಿಕ ಹಾಗೂ ಐತಿಹಾಸಿಕ ನಾಟಕಗಳ ಪ್ರದರ್ಶನ ಏರ್ಪಡಿಸುವ ಮೂಲಕ ನಾದರಂಗ ಯುವಕರನ್ನು ರಂಗಭೂಮಿಯತ್ತ ಕರೆತರುವ ಕೆಲಸ ಮಾಡುತ್ತಿದೆ. ಹಾಗೆಯೇ ಯುವಕರಲ್ಲಿ ಕಲೆ–ಸಾಹಿತ್ಯಾಭಿರುಚಿ ಹೆಚ್ಚಾಗಬೇಕಾದರೆ ಶಾಲಾ–ಕಾಲೇಜುಗಳಲ್ಲಿ ಪೌರಾಣಿಕ ನಾಟಕ ತರಬೇತಿ ಮತ್ತು ಪ್ರದರ್ಶನವನ್ನು ಕಡ್ಡಾಯಗೊಳಿಸಬೇಕು. ಈ ಕುರಿತು ಜಿಲ್ಲಾ ಕಸಾಪ ವತಿಯಿಂದ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ಶಾಲಾ–ಕಾಲೇಜುಗಳಲ್ಲಿ ಎಲ್ಲಾ ಸಮುದಾಯದ ವಿದ್ಯಾರ್ಥಿಗಳು ಒಂದಾಗಿ ನಾಟಕ ಅಭ್ಯಾಸ ಸೇರಿದಂತೆ ಇನ್ನಿತರೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗಿಯಾಗುವುದರಿಂದ ಪರಸ್ಪರ ಬಾಂಧವ್ಯ ಗಟ್ಟಿಯಾಗಲಿದೆ. ಯುದ್ಧ ಎಂಬುದು ಕಣ್ಮರೆಯಾಗಬೇಕಾದರೆ ಎಲ್ಲರಲ್ಲೂ ನಾವುಗಳು ಒಂದೇ ಎಂಬ ಭಾವನೆ ಬೆಳೆಯುವಂತೆ ಮಾಡಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ದೇಶಿರಂಗ ಸಾಂಸ್ಕೃತಿಕ ತಂಡದ ಅಧ್ಯಕ್ಷ ಕೃಷ್ಣ ಜನಮನ ಅವರನ್ನು ಅಭಿನಂದಿಸಲಾಯಿತು. ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ವೈ.ಎಂ.ಪುಟ್ಟಣ್ಣಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ನಾದರಂಗ ನಾಗೇಂದ್ರ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

'ವಿಷ ಜ್ವಾಲೆ' ನಾಟಕ ಪ್ರದರ್ಶನ....

ಮೈಸೂರಿನ ರಂಗಾನಂದ ಕಲಾ ಸಂಘದ ಕಲಾವಿದರು ಹಾಗೂ ರಂಗಸ್ವಾಮಿ ನಿರ್ದೇಶನದಲ್ಲಿ 'ವಿಷ ಜ್ವಾಲೆ' ಐತಿಹಾಸಿಕ ನಾಟಕ ಪ್ರದರ್ಶನಗೊಂಡಿತು. ನಾಳೆ(ಜು.12) ಸಂಜೆ 7 ಗಂಟೆಗೆ ಮೈಸೂರು ಜಯರಾಂ ವಿರಚಿತ 'ಛತ್ರಪತಿ ಶಿವಾಜಿ', ಜು.13ರಂದು ಹೆಚ್.ಎಸ್.ವೆಂಕಟೇಶ್ ಮೂರ್ತಿ ವಿರಚಿತ 'ಮಥನ', ಜು.14ರಂದು ಬೆಂಗಳೂರಿನ ರಂಗಸಂಚನ ತಂಡದಿಂದ 'ಗಂಟಿನ ನಂಟು' ಹಾಗೂ ಜು.15ರಂದು ಟಿ.ಪಿ.ಕೈಲಾಸಂ ರಚಿತ 'ಹೋಂ ರೂಲ್' ನಾಟಕಗಳು ಪ್ರದರ್ಶನಗೊಳ್ಳಲಿವೆ.

ಈ ಬಾರಿಯ ಗಜಪಡೆಗೆ ಐವರು ಹೊಸ ಭರವಸೆ ಸದಸ್ಯರು!

ಅಭಿಮನ್ಯು ಉತ್ತರಾಧಿಕಾರಿ ಆಯ್ಕೆ ಪ್ರಕ್ರಿಯೆ ಪ್ರಸಕ್ತ ಸಾಲಿನಿಂದಲೇ ಆರಂಭ



ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಜು.11– ದಸರಾ ಮಹೋತ್ಸವದಲ್ಲಿ ಮುಂದಿನ ಮೂರು ವರ್ಷದ ನಂತರ ಅಂಬಾರಿ ಹೊರುವ ಆನೆ ತಯಾರಿಗೆ ಅರಣ್ಯ ಇಲಾಖಾ ಅಧಿಕಾರಿಗಳು ಪ್ರಕ್ರಿಯೆ ಆರಂಭಿಸಿದ್ದಾರೆ. ಅದಕ್ಕಾಗಿ ಈ ಬಾರಿ ಗಜಪಡೆಯಲ್ಲಿ 5 ಹೊಸ ಆನೆಗಳನ್ನು ಕರೆತರಲು ಉದ್ದೇಶಿಸಲಾಗಿದೆ.

ಭವಿಷ್ಯದಲ್ಲಿ ದಸರಾ ಮಹೋತ್ಸವಕ್ಕೆ ಗಜಪಡೆಯನ್ನು ಬಲಪಡಿಸುವ ಸವಾಲು ಅರಣ್ಯ ಇಲಾಖೆಯ ಮುಂದೆ ಇದ್ದು, ಅದನ್ನು ನಿಭಾಯಿಸುವ ಮೊದಲ ಹೆಜ್ಜೆಯಾಗಿ ಪ್ರಸಕ್ತ ಸಾಲಿನಿಂದ ಸಮರ್ಥರ ಅನ್ವೇಷಣೆ ಆರಂಭವಾಗುತ್ತಿದೆ. ಇದರ ನಿಖರತೆ ಜು.25ರ ನಂತರ ಗೊತ್ತಾಗಲಿದೆ. ದಸರಾ ಪರಂಪರೆ ಮುಂದುವರೆಸಿಕೊಂಡು ಹೋಗುವ ನಿಟ್ಟಿನಲ್ಲಿ ಅಂಬಾರಿ ಆನೆ ಸಜ್ಜುಗೊಳಿಸುವ ಮಹತ್ತರ ಜವಾಬ್ದಾರಿ ಅರಣ್ಯ ಇಲಾಖೆಯ ಮೇಲಿದೆ. ಆ ನಿಟ್ಟಿನಲ್ಲಿ ಎರಡನೇ ಹಂತದ ಆನೆಗಳು ಸ್ಥಾನ ಪಡೆಯಲಿವೆ.

ಪರ್ಯಾಯ ಆನೆಯೇ ಇಲ್ಲ: ಮೊದಲಿನಿಂದಲೂ ಅಂಬಾರಿ ಆನೆಯೊಂದಿಗೆ ಪರ್ಯಾಯವಾಗಿ ಮತ್ತೊಂದಕ್ಕೆ ತರಬೇತಿ ನೀಡಿ ಸಜ್ಜುಗೊಳಿಸಲಾಗುತ್ತಿತ್ತು. ದ್ರೋಣ ಅಂಬಾರಿ ಹೊರುವಾಗ ಬಲರಾಮ, ಬಲರಾಮನಿದ್ದಾಗ ಅರ್ಜುನನಿಗೆ ಆದ್ಯತೆ, ಅರ್ಜುನ ಅಂಬಾರಿ ಹೊತ್ತಾಗ ಅಭಿಮನ್ಯು ಪರ್ಯಾಯ ಆನೆ ಜವಾಬ್ದಾರಿ ವಹಿಸಿಕೊಂಡಿದ್ದ. ಆದರೆ, ಈಗ ಅಭಿಮನ್ಯುವಿಗೆ ಪರ್ಯಾಯ ನಾಯಕನ ನಿಖರವಾಗಿ ಗುರುತಿಸಲು ಆಗಿಲ್ಲ. ಎರಡು ವರ್ಷ ಕೊರೊನಾ ಹಿನ್ನೆಲೆಯಲ್ಲಿ ಸರಳ ದಸರಾ ಆಚರಣೆ, ಎರಡನೇ ಹಂತದ ಆನೆ ಆಯ್ಕೆ ಮತ್ತು ತರಬೇತಿಗೂ ತೊಡಕಾಗಿತ್ತು. ಮುಂದಿನ ಮೂರು ವರ್ಷದಲ್ಲಿ 2–3 ಆನೆಗಳನ್ನು ಸಜ್ಜುಗೊಳಿಸಲೇಬೇಕಾದ ಕಠಿಣ ಸವಾಲು ಅರಣ್ಯ ಇಲಾಖೆಯ ಮುಂದೆ ಇದೆ.



ಡಾ.ವಿ.ಕರಿಕಾಳನ್

ಗಜಪಡೆಯಿಲ್ಲದೇ ವೈಭವ ಇರಲ್ಲ: ನಾಡಹಬ್ಬ ದಸರಾ ಮಹೋತ್ಸವದ ಹಿರಿಮೆ–ಗರಿಮೆ, ವೈಭವ ಹೆಚ್ಚಿಸುವುದು ಗಜಪಡೆಯೇ ಆಗಿದೆ. ಜಂಬೂ ಸವಾರಿಯಲ್ಲಿ ಆನೆಗಳ ಪಾತ್ರ ಕುರಿತಂತೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ ಸಾಂಪ್ರದಾಯಿಕವಾಗಿ ಆಚರಣೆ ಮಾಡಿಕೊಂಡು ಬರುತ್ತಿರುವ ದಸರಾ ಮಹೋತ್ಸವಕ್ಕೆ ಕಳೆ ಕಟ್ಟುವುದೇ ಗಜಪಡೆ ಈ ಹಿನ್ನೆಲೆಯಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದವರು ಸುಮ್ಮನಾಗಿದ್ದಾರೆ. ತಜ್ಞರು ಹಾಗೂ ಪಶುವೈದ್ಯರ ಅಭಿಪ್ರಾಯಕ್ಕೆ ನ್ಯಾಯಾಲಯವು ಮನ್ನಣೆ ನೀಡಿ, ಆದರೆ 60 ವರ್ಷ ಮೇಲ್ಪಟ್ಟ ಆನೆಗಳ ಮೇಲೆ ಭಾರ ಹೊರಿಸದಂತೆ ಆದೇಶಿಸಿದೆ ಅದನ್ನು ಪಾಲಿಸಲಾಗುತ್ತಿದೆ

ಸಾವಿರ ಕೆಜಿ ಹೊರಬಲ್ಲವು: ಆನೆಗಳು ಸಾಮಾನ್ಯವಾಗಿ 4200ರಿಂದ 5800 ಕೆಜಿ ತೂಕವುಳ್ಳ ಪ್ರಾಣಿ. ಅವುಗಳು ಒಂದು ಸಾವಿರ ಕೆಜಿ ತೂಕ ಹೊರಬಲ್ಲವು. ಆದರೆ, ಜನಜಂಗುಳಿ, ಸದ್ದುಗದ್ದಲದ ನಡುವೆ ಸಾಗಲು ತಯಾರಿ ಬೇಕು. 750 ಕೆಜಿ ತೂಕದ ಚಿನ್ನದ ಅಂಬಾರಿಯನ್ನು ಆನೆಯ ಮೇಲೆ ಕಟ್ಟಬೇಕಾದರೆ ಅವುಗಳ ಬೆನ್ನು ಸಮತಟ್ಟಾಗಿರಬೇಕು. ನೀಳಕಾಯ ದಂತ, ಮುಖ ಸೌಂದರ್ಯ, ಗಾಂಭೀರ್ಯ ನಡಿಗೆಯ ಲಕ್ಷಣವನ್ನು ಪರಿಗಣಿಸಿ ಅಂಬಾರಿ ಆನೆಯಾಗಿ ಆಯ್ಕೆ ಮಾಡಿ ತರಬೇತಿ ನೀಡಲಾಗುತ್ತದೆ.

ಈ ಬಾರಿ 15ರಲ್ಲಿ 5 ಹೊಸ ಆನೆ: ಈ ಕುರಿತು ಡಿಸಿಎಫ್ ಡಾ.ವಿ.ಕರಿಕಾಳನ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಈ ಬಾರಿ ಅದ್ಧೂರಿ ದಸರಾ ಆಚರಣೆ ಹಿನ್ನೆಲೆಯಲ್ಲಿ 15 ಆನೆಯನ್ನು ಕರೆತರಲೇಬೇಕು. ಮೊದಲ ತಂಡ, ಜಂಬೂಸವಾರಿಗೆ 55 ದಿನ ಮುನ್ನವೇ ಮೈಸೂರಿಗೆ ಕರೆತರಬೇಕು. ಅರಮನೆಯಿಂದ ಬನ್ನಿಮಂಟಪದವರೆಗೆ ಗಜಪಡೆಗೆ ತಾಲೀಮು ನಡೆಸಬೇಕಾಗಿದೆ. ಹಂತ ಹಂತವಾಗಿ ಭಾರ ಹೊರುವ ತಾಲೀಮು ನಡೆಸಿ ಜಂಬೂ ಸವಾರಿಗೆ ಸಜ್ಜುಗೊಳಿಸಲಾಗುತ್ತದೆ. ಅಲ್ಲದೆ, ಸಿಡಿಮದ್ದು ತಾಲೀಮು, ಪೊಲೀಸ್ ತುಕಡಿ, ಅಶ್ವಪಡೆಗಳೊಂದಿಗೆ ಹೆಜ್ಜೆ ಹಾಕುವ ತಾಲೀಮು ನೀಡಬೇಕಾಗಿದೆ. ಈ ಬಾರಿ ಕರೆತರಲು ಉದ್ದೇಶಿಸಿರುವ 15 ಆನೆಗಳಲ್ಲಿ ಕನಿಷ್ಠ 5 ಹೊಸ ಆನೆ ಎಂದರು.

ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಕೇವಲ 5 ಆನೆಗಳನ್ನು ಮಾತ್ರ ಕರೆತರಲಾಗಿತ್ತು. ಅಲ್ಲದೇ ಜಂಬೂ ಸವಾರಿ ಮೆರವಣಿಗೆ ಅರಮನೆ ಆವರಣಕ್ಕೆ ಮಾತ್ರ ಸೀಮಿತವಾಗಿತ್ತು. ಆದರೆ ಇದೀಗ ಕೋವಿಡ್ ಸಂಕಷ್ಟ ನಿವಾರಣೆಯಾಗಿರುವುದರಿಂದ ಅದ್ಧೂರಿಯಾಗಿ ದಸರಾ ಮಹೋತ್ಸವವನ್ನು ನಡೆಸಲು ಉದ್ದೇಶಿಸಿರುವುದರಿಂದ 14 ರಿಂದ 15 ಆನೆಗಳನ್ನು ತಂದು ತರಬೇತಿ ನೀಡಲಾಗುತ್ತದೆ ಎಂದು ತಿಳಿಸಿದರು.

ಶಿಬಿರಗಳಲ್ಲಿ 115 ಕ್ಕೂ ಹೆಚ್ಚು ಆನೆ: ದಸರಾ ಮಹೋತ್ಸವಕ್ಕೆ ಆನೆಗಳನ್ನು ಆಯ್ಕೆ ಮಾಡುವ ಆನೆ ಕ್ಯಾಂಪ್ ಸೇರಿದಂತೆ ವಿವಿಧ ಶಿಬಿರಗಳಲ್ಲಿ 115ಕ್ಕೂ ಹೆಚ್ಚು ಆನೆಗಳಿವೆ. ನಾಗರಹೊಳೆಯ ತಿತಿಮತಿ ಹಾಗೂ ಸುತ್ತಮುತ್ತಲಿನ ಆನೆ ಶಿಬಿರ, ಕೊಡಗು ಜಿಲ್ಲೆಯ ದುಬಾರೆ ಹಾಗೂ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ರಾಮಾಪುರ ಆನೆ ಶಿಬಿರದಿಂದಲೇ ಪ್ರಮುಖ ಆನೆಗಳನ್ನು ತರಲಾಗುತ್ತದೆ. ಜು.15ರಿಂದ ಆನೆಗಳ ಆರೋಗ್ಯ ತಪಾಸಣೆ ಆರಂಭಿಸಿ, ಪಟ್ಟಿ ತಯಾರಿಸಲಾಗುತ್ತದೆ. ಜು. 30 ರೊಳಗೆ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಲಾಗುತ್ತದೆ. ಆಗಸ್ಟ್ ಮೊದಲ ವಾರದಲ್ಲಿ ಮೈಸೂರಿಗೆ ಆನೆಗಳನ್ನು ತರಲಾಗುತ್ತದೆ ಎಂದು ವಿವರಿಸಿದರು.

ಬನ್ನಿಮಂಟಪ 'ಎ' ಕೈಗಾರಿಕಾ ಬಡಾವಣೆಯ

ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿಗೆ ತನ್ವೀರ್ ಸೇಠ್ ಚಾಲನೆ



ಮೈಸೂರು,ಜು.11(ಪಿಎಂ)– ನರಸಿಂಹರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬನ್ನಿಮಂಟಪ 'ಎ' ಕೈಗಾರಿಕಾ ಬಡಾವಣೆಯ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ರಸ್ತೆ ಸೇರಿದಂತೆ ವಿವಿಧ ರಸ್ತೆ ಹಾಗೂ ಚರಂಡಿಗಳ ಅಭಿವೃದ್ಧಿ ಕಾಮಗಾರಿಗೆ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಸೋಮವಾರ ಚಾಲನೆ ನೀಡಿದರು.

'ಸ್ಟಾರ್ ಆಫ್ ಮೈಸೂರ್' ಸಮೀಪ ನಡೆದ ಕಾರ್ಯಕ್ರಮದಲ್ಲಿ ಶಾಸಕರು ಗುದ್ದಲಿ ಪೂಜೆ ನೆರವೇರಿಸಿದರು. ಆ ಮೂಲಕ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ವತಿಯಿಂದ ಅಂದಾಜು 8.40 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಗೊಂಡಿರುವ ಒಟ್ಟು 10 ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆ ದೊರೆಯಿತು. ಗುತ್ತಿಗೆದಾರ ಜಿ.ಎಲ್.ಲಕ್ಷ್ಮೀಗೌಡ ಅವರಿಗೆ ಕಾಮಗಾರಿಯ ಟೆಂಡರ್ ನೀಡಿದ್ದು, 6 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಬೇಕಿದೆ.

'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ರಸ್ತೆ, ನೇಹಾ ವುಡ್ ಇಂಡಸ್ಟ್ರೀಸ್ ಎದುರಿನ ರಸ್ತೆ, ಸರ್ವೋ ಇಂಜಿನ್ ಆಯಿಲ್ ಗೋಡೌನ್ ಎದುರಿನ ರಸ್ತೆ, ದೇವಿ ಮನೆ ಮಂಜಮ್ಮ ದೇವಸ್ಥಾನದ ಎದುರಿನ ರಸ್ತೆ, ನ್ಯಾಷನಲ್ ಮಾರ್ಬಲ್ಸ್ ಮತ್ತು ಗ್ರಾನೈಟ್ಸ್ ಪಕ್ಕದ ರಸ್ತೆ, ಬಡಾವಣೆಯ ನಿವೇಶನ ಸಂಖ್ಯೆ 58ರಿಂದ 73ರವರೆಗಿನ ರಸ್ತೆ, ಬಾಲಾಜಿ ಚಿತ್ರಮಂದಿರ ಮತ್ತು ಮಳೆ ನೀರು ಚರಂಡಿ ಪಕ್ಕದ ರಸ್ತೆ, ಹೈಟೆನ್ಷನ್ ರಸ್ತೆ (ಜೋಡಿ ತೆಂಗಿನಮರ ರಸ್ತೆಯಿಂದ ಮೈಸೂರು–ಬೆಂಗಳೂರು ರೈಲ್ವೆ ಲೈನ್‌ವರೆಗೆ), ಹೈಟೆನ್ಷನ್ ಲೈನ್ ಪಕ್ಕದ ಕೊಳಗೇರಿ ಪ್ರದೇಶಕ್ಕೆ ಹೊಂದಿಕೊಂಡಿರುವ ರಸ್ತೆ ಹಾಗೂ ಮೈಸೂರು–ಬೆಂಗಳೂರು ರೈಲ್ವೆ ಲೈನಿಗೆ ಹೊಂದಿಕೊಂಡಿರುವ ರಸ್ತೆಗಳ ಅಭಿವೃದ್ಧಿ ಕಾಮಗಾರಿ ನಡೆಯಲಿದೆ.

ಇದೇ ವೇಳೆ ಮಾತನಾಡಿದ ಶಾಸಕರು, ಇಲ್ಲಿನ ಬಹುತೇಕ ರಸ್ತೆಗಳು ಹದಗೆಟ್ಟಿದ್ದು, ಇದರ ಪರಿಣಾಮ ಮಳೆಗಾಲದಲ್ಲಿ ರಸ್ತೆಗಳು ಕೆಸರು ಗದ್ದೆಯಂತಾಗಿ ವಾಹನ ಸವಾರರು, ಪಾದಚಾರಿಗಳ ಸುಗಮ ಸಂಚಾರಕ್ಕೆ ಸಮಸ್ಯೆ ಉಂಟಾಗಿದೆ. ಇದೀಗ ಈ ರಸ್ತೆಗಳ ಅಭಿವೃದ್ಧಿಗೆ ಕಾಮಗಾರಿ ಕೈಗೆತ್ತಿಕೊಂಡಿದ್ದು, ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದು ಎಂದು ತಿಳಿಸಿದರು.

ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಆಯುಕ್ತ ಜಿ.ಟಿ. ದಿನೇಶ್, ಕಾರ್ಯಪಾಲಕ ಅಭಿಯಂತರ ಸುನೀಲ್, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ರೂಪಶ್ರೀ, ಸಹಾಯಕ ಅಭಿಯಂತರ ರವೀಂದ್ರ, ಗುತ್ತಿಗೆದಾರ ಜಿ.ಎಲ್. ಲಕ್ಷ್ಮೀಗೌಡ, ರೈಲ್ವೆ ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದ ಅಧ್ಯಕ್ಷರೂ ಆದ ಜೆಡಿಎಸ್ ಮುಖಂಡ ಅಬ್ದುಲ್ ಖಾದರ್ ಶಾಹಿದ್, ಮುಖಂಡರಾದ ಜಿ.ಎನ್.ಮಂಜುನಾಥ್, ಶೌಕತ್ ಅಲಿಖಾನ್, ಜಮ್‌ಶೀದ್ ಬೇಗ್ ಮತ್ತಿತರರು ಹಾಜರಿದ್ದರು.

ಆರು ಕೋಟಿ ವೆಚ್ಚದ ವಿವಿಧ ಕಾಮಗಾರಿ: ಜಿ.ಟಿ.ದೇವೇಗೌಡರಿಂದ ಚಾಲನೆ



ಮೈಸೂರು, ಜು.11(ಎಸ್‌ಬಿಡಿ)– ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಕೈಗೊಂಡಿರುವ ಸುಮಾರು 6 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡರು ಸೋಮವಾರ ಚಾಲನೆ ನೀಡಿದರು.


ಮೊದಲಿಗೆ ಹಿನಕಲ್ ಗ್ರಾಮದ ಮಹಾಲಕ್ಷ್ಮಿ ಬಡಾವಣೆ ಹಾಗೂ ನನ್ನೇಶ್ವರ ಆಶ್ರಯ ಬಡಾವಣೆಯಲ್ಲಿ ಮುಡಾ ವತಿಯಿಂದ 4.60 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಕೈಗೊಂಡಿರುವ ಒಳಚರಂಡಿ, ಕಾಂಕ್ರೀಟ್ ಚರಂಡಿ, ಅಡ್ಡ ಮೋರಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದರು. ಇದೇ ವೇಳೆ ಮಹಾಲಕ್ಷ್ಮಿ ಬಡಾವಣೆಯ ರಸ್ತೆ ಅಭಿವೃದ್ಧಿಗೂ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಕ್ಷೇತ್ರದ ನಗರ ವ್ಯಾಪ್ತಿಯ 44ನೇ ವಾರ್ಡ್ ಬೋಗಾದಿ ಮುಖ್ಯ ರಸ್ತೆಯಲ್ಲಿ 62 ಲಕ್ಷ ರೂ.ಗಳಲ್ಲಿ ಕೈಗೊಳ್ಳಲಾಗಿರುವ ಮಳೆ ನೀರು ಚರಂಡಿ, 46ನೇ ವಾರ್ಡ್ ವಿಶ್ವಮಾನವ ಜೋಡಿ ರಸ್ತೆ ಶ್ರೀ ರಾಮಕೃಷ್ಣ ಪರಮಹಂಸರ ವೃತ್ತದಿಂದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ವೃತ್ತದವರೆಗೆ 45 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿ ಹಾಗೂ 58ನೇ ವಾರ್ಡ್ ಉದಯರವಿ ರಸ್ತೆಯಿಂದ ದಕ್ಷಿಣೇಶ್ವರ ರಸ್ತೆವರೆಗೆ 45 ಲಕ್ಷ ರೂ.ಗಳಲ್ಲಿ ಕೈಗೊಂಡಿರುವ ಆಯ್ದ ಭಾಗಗಳ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮೇಯರ್ ಸುನಂದಾ ಪಾಲನೇತ್ರ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ. ಹರೀಶ್‌ಗೌಡ, ಪಾಲಿಕೆ ಆಯುಕ್ತರಾದ ಲಕ್ಷ್ಮಿಕಾಂತರೆಡ್ಡಿ, ಪಾಲಿಕೆ ಸದಸ್ಯರಾದ ಸವಿತ ಸುರೇಶ್, ಲಕ್ಷ್ಮೀ ಕಿರಣ್, ಶರತ್ ಕುಮಾರ್, ಮುಖಂಡರಾದ ಹಿನಕಲ್ ರಾಜಣ್ಣ, ಹೊನ್ನಪ್ಪ ಜನತಾನಗರ ಕುಮಾರ್, ಮರಿಜೋಗೇಗೌಡ, ಪಾಲಿಕೆಯ ಅಧೀಕ್ಷಕ ಅಭಿಯಂತರ ಮಹೇಶ್, ಪಾಲಿಕೆ ವಲಯ ಆಯುಕ್ತ ಸತ್ಯಮೂರ್ತಿ, ಮುಡಾ ವಲಯಾಧಿಕಾರಿ ಶ್ರೀನಿವಾಸ್, ಪುಟ್ಟ ನಾಗರಾಜು ಮತ್ತಿತರರು ಉಪಸ್ಥಿತರಿದ್ದರು.

ಉನ್ನತ ಶಿಕ್ಷಣದಲ್ಲಿ ಯಶಸ್ವಿ ಬೋಧನೆಗೆ ಕೆಲ ಶೈಕ್ಷಣಿಕ ಮಾನದಂಡ ಅವಶ್ಯ

● ಯುಜಿಸಿ ವಿಶ್ರಾಂತ ಅಧ್ಯಕ್ಷ ಪ್ರೊ.ವೇದ್ ಪ್ರಕಾಶ್ ಅಭಿಮತ ● ರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ



ಮೈಸೂರು, ಜು.11(ಎಸ್‌ಬಿಡಿ)– ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧನೆ ಮತ್ತು ಕಲಿಕೆಯ ಯಶಸ್ಸಿಗೆ ಕೆಲವು ಶೈಕ್ಷಣಿಕ ಮಾನದಂಡಗಳನ್ನು ಅಳವಡಿಸಿಕೊಳ್ಳಬೇಕು ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ)ದ ವಿಶ್ರಾಂತ ಅಧ್ಯಕ್ಷ ಪ್ರೊ.ವೇದ್ ಪ್ರಕಾಶ್ ಸಲಹೆ ನೀಡಿದರು.

ಮೈಸೂರು–ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಯುಜಿಸಿ ವತಿಯಿಂದ ಆನ್‌ಲೈನ್ ಮೂಲಕ ಆಯೋಜಿಸಿರುವ 'ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನ ವಿಧಾನಗಳು: ಸಂಪ್ರದಾಯದಿಂದ ಮಿಶ್ರ ಪದ್ಧತಿ ಕಡೆಗೆ' ರಾಷ್ಟ್ರೀಯ ಸಮ್ಮೇಳನವನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದ ಅವರು, ಬೋಧನೆ ಹಾಗೂ ಕಲಿಕೆಗೆ ಪೂರಕವಾದ ಕೆಲ ಮಾನದಂಡಗಳನ್ನು ಅನುಸರಿಸಬೇಕು. ಆ ಮೂಲಕ ವಿದ್ಯಾರ್ಥಿಗಳು ಹಾಗೂ ಬೋಧಕರ ಕಾರ್ಯಕ್ಷಮತೆ ವೃದ್ಧಿಸಬಹುದು. ಇದರಿಂದ ವಿದ್ಯಾರ್ಥಿಯ ನೈಜ ಕಲಿಕಾ ಸಾಮರ್ಥ್ಯ ಅರಿತು ಅಗತ್ಯ ಸುಧಾರಣಾ ಕ್ರಮಕ್ಕೆ ಅನುಕೂಲವಾಗುತ್ತದೆ ಎಂದರು.

ವಿದ್ಯಾರ್ಥಿಗಳು ಕಲಿಕಾ ವಿಷಯದ ತಾತ್ವಿಕತೆಯನ್ನು ಅರಿತುಕೊಳ್ಳುವುದರಿಂದ ಜ್ಞಾನವೃದ್ಧಿಯಾಗುತ್ತದೆ. ಯಾವುದೇ ವಿಷಯ ಹಾಗೂ ಕೋರ್ಸ್ ಅನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ಪರಾಮರ್ಶೆ ಮಾಡಬೇಕು. ಆ ವಿಷಯಗಳ ಪರಿಮಿತಿ, ಉಪಯೋಗ, ಉದ್ಯೋಗಾವಕಾಶ ಹೀಗೆ ಎಲ್ಲಾ ಆಯಾಮಗಳನ್ನೂ ಯೋಚಿಸಿ, ಮುಂದುವರೆಯಬೇಕು ಎಂದು ಕಿವಿಮಾತು ಹೇಳಿದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳ ಪರಿಶ್ರಮದ ಜೊತೆಗೆ ಅವರ ಪೋಷಕರು ಹಾಗೂ ಬೋಧಕರ ಸಹಕಾರ ತುಂಬಾ ಮುಖ್ಯ. ಬೋಧನೆಯಲ್ಲಿ ಮೌಲ್ಯಗಳ ತಿಳುವಳಿಕೆ ನೀಡಬೇಕು. ಭವಿಷ್ಯದ ಬಗ್ಗೆ ಆಶಾಭಾವ ಮೂಡಿಸಿ, ಸಾಧನೆಗೆ ಪ್ರೋತ್ಸಾಹಿಸಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಸಮರ್ಥವಾಗಿ ಮುನ್ನಡೆಯಲು ಸೂಕ್ತ ಮಾರ್ಗದರ್ಶನ ನೀಡಬೇಕು ಎಂದು ಸಲಹೆ ನೀಡಿದರು.

ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ ಕುಮಾರ್ ಮಾತನಾಡಿ, ವಿದ್ಯಾರ್ಥಿಗಳ ಕೌಶಲ್ಯಾಭಿವೃದ್ಧಿ, ಉದ್ಯೋಗಾವಕಾಶ, ಉತ್ತಮ ಭವಿಷ್ಯಕ್ಕೆ ರಾಷ್ಟ್ರೀಯ ಶಿಕ್ಷಣ ನೀತಿ ಒತ್ತಾಸೆಯಾಗಿದೆ. ಶಿಕ್ಷಣ ನೀತಿಯಿಂದ ವಿದ್ಯಾರ್ಥಿಗಳಿಗೆ ವಿಫುಲ ಅವಕಾಶಗಳು ಸೃಷ್ಟಿಯಾಗುತ್ತವೆ. ಈ ನಿಟ್ಟಿನಲ್ಲಿ ಭೌತಿಕ, ಆನ್‌ಲೈನ್ ಹಾಗೂ ಮಿಶ್ರ ಪದ್ಧತಿಯೊಂದಿಗೆ ಸಮಗ್ರ ಅಧ್ಯಯನ ರೂಪಿಸಿ ವಿದ್ಯಾರ್ಥಿಗಳ ಅಗತ್ಯತೆಯನ್ನು ಪೂರೈಸಲಾಗುತ್ತಿದೆ. ಶಿಕ್ಷಕರ ಪ್ರೇರಣಾತ್ಮಕ ಹಾಗೂ ಪರಿಣಾಮಕಾರಿ ಬೋಧನೆ ಹಾಗೂ ವಿದ್ಯಾರ್ಥಿಗಳ ಕಲಿಕಾ ಆಸಕ್ತಿ ವೃದ್ಧಿಗೆ ಸಹಕಾರಿಯಾಗಿದೆ ಎಂದು ತಿಳಿಸಿದರು.

ಈ ವರ್ಚುವಲ್ ಕಾರ್ಯಕ್ರಮದಲ್ಲಿ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಪ್ರಾಂಶುಪಾಲ ಪ್ರೊ.ಎಂ.ಪಿ.ವಿಜಯೇಂದ್ರ ಕುಮಾರ್, ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ಎನ್.ರಾಜೇಂದ್ರ ಪ್ರಸಾದ್ ಮತ್ತಿತರರು ಭಾಗವಹಿಸಿದ್ದರು.

ಸಮ್ಮೇಳನದಲ್ಲಿ ದೇಶದ ವಿವಿಧೆಡೆಯಿಂದ ಸಂಪನ್ಮೂಲ ವ್ಯಕ್ತಿಗಳಾದ ಪ್ರೊ.ವಿಮಲ್ ರಾರ್ಹ್, ಪ್ರೊ.ಎ.ಬಾಲಸುಬ್ರಮಣಿಯನ್, ಪ್ರೊ.ಅಮಿತಾ ಪಾಂಡೆ ಭಾರದ್ವಾಜ್, ಡಾ.ವಿಮಲ್ ಜೆರಾಲ್ಡ್, ಡಾ.ಪ್ರಿಯಾ ನಾರಾಯಣ ಮತ್ತಿತರರು ಉಪನ್ಯಾಸ ನೀಡಲಿದ್ದು, ವಿವಿಧ ಶೈಕ್ಷಣಿಕ ಸಂಸ್ಥೆಗಳ ಅಧ್ಯಾಪಕರು ಪ್ರಬಂಧ ಮಂಡಿಸಲಿದ್ದಾರೆ.

ಕೆಡಿಪಿ ಸಭೆ ಮುಂದೂಡಿಕೆ

ಮೈಸೂರು, ಜು.11– ಮೈಸೂರು ಜಿಪಂ ಸಭಾಂಗಣದಲ್ಲಿ ಜು.13ರಂದು ಏರ್ಪಡಿಸಿದ್ದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆಡಿಪಿ) ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ಮುಂದೂಡಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅಧ್ಯಕ್ಷತೆಯಲ್ಲಿ ಜಿಪಂನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಜು.13ರ ಮಧ್ಯಾಹ್ನ 3 ಗಂಟೆಗೆ 2022–23ನೇ ಸಾಲಿನ ಕೆಡಿಪಿ ತ್ರೈಮಾಸಿಕ ಸಭೆ ನಿಗದಿಯಾಗಿತ್ತು ಆದರೆ ಕಾರಣಾಂತರಗಳಿಂದ ಸಭೆ ಮುಂದೂಡಲಾಗಿದೆ ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಪೂರ್ಣಿಮಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಳೆಯ ನಡುವೆ ಜಾನಪದ ಜಾತ್ರೆ: ಹಸಿರು ಪರಿಸರದ ನಡುವೆ ಪಸರಿಸಿದ ಸೊಗಡು



ಮೈಸೂರು, ಜು.11(ಎಂಕೆ)– ಮೈಸೂರಿನ ಮಾನಸಗಂಗೋತ್ರಿ ಆವರಣದಲ್ಲಿ ಮುಸ್ಸಂಜೆಯ ಮಳೆ ಹನಿಗಳ ನಡುವೆ ಜಾನಪದ ಸೊಗಡು ಎಲ್ಲೆಡೆ ಪಸರಿಸಿತು...

ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗದ ಪ್ರೊ.ಎಂ. ನಂಜಯ್ಯ ಹೊಂಗನೂರು ಮಾರ್ಗದರ್ಶನದಲ್ಲಿ ಜಾನಪದ ಕಲಾವಿದ ಸಿ.ಸುಂದರೇಶ್ ಮತ್ತು ತಂಡದವರ ನಿರ್ದೇಶನದಲ್ಲಿ ಆಯೋಜಿಸಿದ್ದ 25 ದಿನಗಳ ಜಾನಪದ ಕಲಾ ಪ್ರಕಾರಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಶಿಬಿರಾರ್ಥಿಗಳ ನೃತ್ಯ ಪ್ರದರ್ಶನ ಕಣ್ಮನ ಸೆಳೆಯಿತು. ಅತ್ಯಾಕರ್ಷಕ ಉಡುಗೆ–ತೊಡುಗೆಗಳಿಂದ ಕಂಗೊಳಿಸುತ್ತಿದ್ದ ಶಿಬಿರಾರ್ಥಿಗಳು ಕಂಸಾಳೆ, ಡೊಳ್ಳು ಕುಣಿತ, ಪೂಜಾ ಕುಣಿತ, ಪಟದ ಕುಣಿತ, ಸುಗ್ಗಿ ಕುಣಿತ, ವೀರಗಾಸೆ, ತಮಟೆ ವಾದ್ಯ ಇನ್ನಿತರೆ ಜಾನಪದ ಪ್ರಕಾರಗಳನ್ನು ಪ್ರಸ್ತುತ ಪಡಿಸಿ ಎಲ್ಲರ ಮನಗೆದ್ದರು.

ಬಳಿಕ ನಡೆದ ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿದ ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಮಾತನಾಡಿ, ಜೀವನದ ಪಾಠ ಕಲಿಸುವ ಜಾನಪದ ಕಲೆಗಳು ಕಣ್ಮರೆಯಾಗುತ್ತಿದ್ದು, ಯಾವುದಾದರೂ ಸಿನಿಮಾಗಳಲ್ಲಿ ಜಾನಪದ ಹಾಡುಗಳನ್ನು ಬಳಸಿದ್ದಾಗ ಜಾನಪದ ಕಲೆಯನ್ನು ಕಡೆಗಣಿಸಿರುವ ಕುರಿತು ಸ್ಮರಿಸುತ್ತೇವೆಯೇ ಹೊರತು ಉಳಿಸಿ–ಬೆಳೆಸುವ ಕೆಲಸ ಮಾಡುವಲ್ಲಿ ಹಿಂದೆ ಬಿದ್ದಿದ್ದೇವೆ ಎಂದರು.

ಸನ್ಮಾನ: ಇದೇ ವೇಳೆ ಜಾನಪದ ಕಲೆ ಉಳಿವಿಗೆ ಶ್ರಮಿಸುತ್ತಿರುವ ಖ್ಯಾತ ಜಾನಪದ ಕಲಾವಿದ ಡಾ.ಮಳವಳ್ಳಿ ಮಹದೇವಸ್ವಾಮಿ, ಸಿ.ಎಂ.ನರಸಿಂಹಮೂರ್ತಿ, ಕೆ.ಎಂ.ಕೃಷ್ಣೇಗೌಡ, ಹೊನ್ನಮ್ಮ, ಡಾ.ಬಿ.ಆರ್.ರಮೇಶ್‌ಬಾಬು, ಅನಿಲ್‌ರಾಜ್ ಸಿ.ಮಹದೇವಪುರ, ಮಹಾಲಿಂಗ ಎಂ.ಮೈಸೂರು, ದೇವಾನಂದ ವರಪ್ರಸಾದ್, ವಸಂತಮ್ಮ ಕರಡಕೆರೆ, ಸುಬ್ರಮಣ್ಯ, ಸೋಮಶೇಖರ್ ಪಿ.ಮಲಾರ ಕಾಲೋನಿ, ಆರ್.ನಂದಿನಿ, ಸಿದ್ದೇಗೌಡ ಕೆ.ಶೆಟ್ಟಹಳ್ಳಿ, ಚಿಕ್ಕಬೋರಯ್ಯ ಚಿಕ್ಕ ಅರಸಿನಕೆರೆ, ಕುಮಾರ್, ಚಂದ್ರಮೌಳೇಶ್ವರ, ಹನುಮಯ್ಯ, ಹೆಚ್.ಕೆ.ಮೋಹನ್‌ಕುಮಾರ್, ಡಿ.ಆರ್.ರಾಜೇಶ್ ಮತ್ತಿತರರನ್ನು ಸನ್ಮಾನಿಸಲಾಯಿತು.

ಮೈಸೂರು ವಿವಿ ಕುಲಸಚಿವ ಪ್ರೊ.ಆರ್.ಶಿವಪ್ಪ ಸಿಂಡಿಕೇಟ್ ಸದಸ್ಯೆ ಚೈತ್ರಾ ನಾರಾಯಣ, ವಿದ್ಯಾರ್ಥಿ ಕ್ಷೇಮ ಪಾಲನಾಧಿಕಾರಿ ಗುರುಸಿದ್ದಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಸುದರ್ಶನ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಅಧ್ಯಕ್ಷೆ ವಿಜಯಕುಮಾರಿ ತರೀಕೆರೆ ಮತ್ತಿತರರು ಉಪಸ್ಥಿತರಿದ್ದರು.

ಎನ್‌ಇಪಿ ಅನ್ವಯ ಪಠ್ಯ ಪುಸ್ತಕ ರಚನೆಯಿಂದ ಹೊಸ ಮನ್ವಂತರಕ್ಕೆ ನಾಂದಿ

ಮೈಸೂರು ವಿವಿ ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ.ಕೆ.ಸದಾಶಿವ ಅಭಿಮತ



ಮೈಸೂರು, ಜು.11(ಎಸ್‌ಪಿಎನ್)– ನೂತನ ರಾಷ್ಟ್ರೀಯ ಶಿಕ್ಷಣ ನೀತಿ–2020(ಎನ್‌ಇಪಿ) ಅಳವಡಿಕೆ ಫಲವಾಗಿ 31 ವರ್ಷಗಳ ನಂತರ ಮೈಸೂರು ವಿವಿ ಇತಿಹಾಸ ವಿಭಾಗವೂ ಸೇರಿದಂತೆ ಇತರೆ ಎಲ್ಲಾ ವಿಭಾಗಗಳ ಪಠ್ಯ ಬದಲಾವಣೆ ಮಾಡಲಾಗಿದ್ದು, ಇದು ಶೈಕ್ಷಣಿಕ ವಲಯದಲ್ಲಿ ಹೊಸ ಮನ್ವಂತರಕ್ಕೆ ನಾಂದಿ ಎಂದು ಮೈಸೂರು ವಿವಿ ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ.ಕೆ.ಸದಾಶಿವ ಅಭಿಪ್ರಾಯಪಟ್ಟರು.

ಮೈಸೂರು ಜಯಲಕ್ಷ್ಮೀಪುರಂನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಎವಿಸಿ–3 ಸಭಾಂಗಣದಲ್ಲಿ ಇತಿಹಾಸ ವಿಭಾಗದ ಸಹ ಪ್ರಾಧ್ಯಾಪಕ ಹೆಚ್.ಶ್ರೀಧರ್ ರಚಿತ 'ಪ್ರಾಚೀನ ಭಾರತದ ಇತಿಹಾಸ' ಮತ್ತು 'ಆಧುನಿಕ ಭಾರತ ಇತಿಹಾಸ' ಪುಸ್ತಕಗಳನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ಪ್ರತಿ ವರ್ಷ ನ್ಯಾಕ್ ಕಮಿಟಿ ಬಂದಾಗ ಎಲ್ಲಾ ವಿಷಯದಲ್ಲೂ ನಮಗೆ ಉತ್ತಮ ಅಭಿಪ್ರಾಯ ಬರುತ್ತಿತ್ತು. ಆದರೆ, ಪಠ್ಯ ಬದಲಾವಣೆ ವಿಚಾರದಲ್ಲಿ ನಮಗೆ ಹಿನ್ನಡೆಯಾಗುತ್ತಿತ್ತು. ಇದರಿಂದ ಇತರೆ ಸೌಲಭ್ಯಗಳಿಗೂ ಕತ್ತರಿ ಬೀಳುತ್ತಿತ್ತು. ನ್ಯಾಕ್ ಸಮಿತಿ ಕಲಂನಲ್ಲಿ ಒಂದೂವರೆ ವರ್ಷಕ್ಕೆ ಬದಲಾವಣೆ ಮಾಡಬೇಕೆಂಬ ಯುಜಿಸಿ ಅಂಶ ಸೇರಿಸಿದೆ. ಮೊದಲು ಇದಕ್ಕೆ ಯಾರೂ ಅಷ್ಟೊಂದು ಮಹತ್ವ ನೀಡಿರಲಿಲ್ಲ ಇದೀಗ ಎನ್‌ಇಪಿ ಅಳವಡಿಸಿಕೊಂಡ ನಂತರ ಮಾನವಿಕ ವಿಭಾಗದ ಎಲ್ಲಾ ವಿಷಯಗಳಿಗೂ ಬದಲಾವಣೆ ತಂದಿರುವುದು ಸಂತಸದ ವಿಷಯ ಎಂದು ತಿಳಿಸಿದರು.

ದೆಹಲಿ ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಜಗತ್ತಿನ ಯಾವುದೇ ವಿವಿಗಳಲ್ಲೂ ಅವರಿಗೆ ಹೆಚ್ಚಿನ ಆದ್ಯತೆಯಿದೆ. ಏಕೆಂದರೆ ದೆಹಲಿ ವಿವಿ ಇತಿಹಾಸ ವಿಭಾಗ ಸಾಕಷ್ಟು ಸುಧಾರಣೆಗೊಂಡಿದೆ. ಒಂದು ಕಾಲಕ್ಕೆ ಮಾನವಿಕ ವಿಭಾಗದ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡಿದರೆ ಕೆಲಸ ಸಿಗುವುದಿಲ್ಲ ಎಂಬ ಅಭಿಪ್ರಾಯವಿತ್ತು. ಇದೀಗ ಕ್ರಮೇಣ ಈ ಅಭಿಪ್ರಾಯ ಬದಲಾಗುತ್ತಿರುವುದು ಮೆಚ್ಚುಗೆಯ ಸಂಗತಿ ಎಂದು ತಿಳಿಸಿದರು.

ಸಹ ಪ್ರಾಧ್ಯಾಪಕ ಡಾ.ಹೆಚ್.ಶ್ರೀಧರ ರಚಿತ 'ಪ್ರಾಚೀನ ಭಾರತ ಇತಿಹಾಸ' ಮತ್ತು 'ಆಧುನಿಕ ಭಾರತ ಇತಿಹಾಸ' ಪುಸ್ತಕಗಳನ್ನು ಎನ್‌ಇಪಿ ನೀತಿಗೆ ಅನುಗುಣವಾಗಿ ರಚಿಸಿದ್ದಾರೆ. ಇದು ಪ್ರಸ್ತುತ ಆಂಗ್ಲ ಮಾಧ್ಯಮದಲ್ಲಿ ಇತಿಹಾಸ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಮೈಸೂರು ವಿವಿ ಸೇರಿದಂತೆ ರಾಜ್ಯದ ಎಲ್ಲಾ ವಿವಿಗಳಲ್ಲೂ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಂಡಿದೆ. ಆದರೆ, ಪಠ್ಯ ಬದಲಾವಣೆ ವಿಚಾರದಲ್ಲಿ ತಮ್ಮ ವಿವಿ ತಜ್ಞರ ನೇತೃತ್ವದಲ್ಲೇ ಸಮಿತಿ ರಚಿಸಲಾಗಿತ್ತು. ಇದನ್ನು ಸಮರ್ಥಿಸಿ ಕೇಂದ್ರ ಸಮಿತಿಗೂ ವಿವಿಯಿಂದ ಪತ್ರ ಮುಖೇನ ಸಮರ್ಥಿಸಿಕೊಳ್ಳಲಾಗಿತ್ತು ಎಂದು ತಿಳಿಸಿದರು.

ಪ್ರಸ್ತುತ ದೆಹಲಿ ವಿವಿ ಇತಿಹಾಸ ವಿಭಾಗದಲ್ಲಿ 13 ಮಂದಿ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶಾತಿಗೆ ಅವಕಾಶವಿದೆ. ಇಲ್ಲಿಗೆ ಪ್ರವೇಶಾತಿ ಪಡೆಯಲು ಪ್ರತಿ ವರ್ಷ ಸಿಇಟಿ ಮೂಲಕ ಆಯ್ಕೆಯಾಗಲು ಪದವಿಯಲ್ಲಿ ಶೇ.99 ರಷ್ಟು ಅಂಕ ಗಳಿಸಿದರೂ ಪ್ರವೇಶಾತಿ ಸಿಗುವುದು ಕಷ್ಟದ ಸಂಗತಿ. ಹಾಗಾಗಿ ಈಗಿನ ಪಠ್ಯದಲ್ಲಿ ಸಾಧ್ಯವಾದಷ್ಟು ಎನ್‌ಸಿಇಆರ್‌ಟಿ ಮಾರ್ಗದರ್ಶನದಂತೆ ಪಠ್ಯ ಅಳವಡಿಕೆ ಸೂಕ್ತ ಎಂದರು.

ಈ ಹಿಂದೆ ವಿದ್ಯಾರ್ಥಿಗಳಿಗೆ ಗುರುಗಳು ಹೇಳಿಕೊಟ್ಟ ಪಾಠವೇ ವೇದ ವಾಕ್ಯದಂತಿತ್ತು. ಆದರೆ, ಇದೀಗ ವಿದ್ಯಾರ್ಥಿಗಳಲ್ಲಿ ಮೂಡುವ ಹೊಸ ಹೊಸ ಆಲೋಚನೆಗಳಿಂದ ಕಲಿಯುವುದು ಸಾಕಷ್ಟಿದೆ. ಉದಾಹರಣೆಗೆ ಮಾಜಿ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಅವರ ಪುತ್ರಿ ಉಪಿಂದರ್ ಸಿಂಗ್ ದೆಹಲಿ ವಿವಿ ಇತಿಹಾಸ ವಿಭಾಗದಲ್ಲಿ ಕೆಲಸ ಮಾಡಿದ್ದು, ಅವರು ಬರೆದಿರುವ ಇತಿಹಾಸದ ಪುಸ್ತಕವೊಂದು ಜಗತ್ತಿನ ಎಲ್ಲಾ ಭಾಷೆಗೂ ಅನುವಾದವಾಗಿದೆ. ಇದು ಇತಿಹಾಸ ವಿದ್ಯಾರ್ಥಿಗಳಾದ ನಾವೆಲ್ಲ ಅಭಿಮಾನದಿಂದ ಹೇಳಿಕೊಳ್ಳುವ ಸಂಗತಿ. ಆದ್ದರಿಂದ ಇತಿಹಾಸ ವಿಭಾಗದ ಎಲ್ಲಾ ಅಧ್ಯಾಪಕರು ಇತಿಹಾಸ ವಿಷಯದಲ್ಲಿ ಹೊಸಹೊಸ ಆವಿಷ್ಕಾರವಾಗಿಸಲು ತಮ್ಮತಮ್ಮ ವ್ಯಾಪ್ತಿಯಲ್ಲಿ ಶ್ರಮಿಸುವಂತೆ ಮನವಿ ಮಾಡಿದರು.

ಈ ವೇಳೆ ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ.ಮುರಳಿಧರ್ ಭಾಗವತ್, ಕಾರ್ಯದರ್ಶಿ ಟಿ.ವಿಜಯಲಕ್ಷ್ಮೀ ಮುರಳಿಧರ್, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಬಿ. ಆರ್.ಜಯಕುಮಾರಿ, ಶೈಕ್ಷಣಿಕ ಸಲಹೆಗಾರ ಡಾ.ಎಸ್.ಆರ್.ರಮೇಶ್ ಉಪಸ್ಥಿತರಿದ್ದರು.

ಹೊಸ ಸಂಸತ್ ಭವನದಲ್ಲಿ 9,500 ಕೆಜಿ ಕಂಚಿನ ರಾಷ್ಟ್ರೀಯ ಲಾಂಛನ ಅನಾವರಣ



ನವದೆಹಲಿ: ಹೊಸ ಸಂಸತ್ ಭವನವಾದ ಸೆಂಟ್ರಲ್ ಮೇಲ್ಛಾವಣಿಯಲ್ಲಿ ಕಂಚಿನಿಂದ ನಿರ್ಮಿಸಲಾದ 9,500 ಕೆ.ಜಿ ತೂಕದ ಅಶೋಕ ಲಾಂಛನವನ್ನು ಪ್ರಧಾನಿ ನರೇಂದ್ರ ಮೋದಿ ಅನಾವರಣಗೊಳಿಸಿದರು.


6.5 ಮೀಟರ್ ಎತ್ತರವಿರುವ ಈ ಲಾಂಛನವು 9,500 ಕೆ.ಜಿ. ತೂಕವಿದೆ. ಸಂಪೂರ್ಣ ಕಂಚಿನಿಂದ ತಯಾರಿಸಲ್ಪಟ್ಟಿದ್ದು, ಹೊಸ ಸಂಸತ್ ಕಟ್ಟಡದ ಮೇಲ್ಭಾಗದಲ್ಲಿ ನಿರ್ಮಿಸಲಾಗಿದೆ. ಲಾಂಚನಕ್ಕೆ ಸಹಕಾರಿಯಾಗಿ ನಿಲ್ಲುವಂತೆ 6,500 ಕೆಜಿ ತೂಕದ ಉಕ್ಕಿನ ಪೋಷಕ ರಚನೆಯನ್ನು ನಿರ್ಮಿಸಲಾಗಿದೆ. ಎಂಟು ವಿಭಿನ್ನ ಹಂತಗಳಲ್ಲಿ ತಯಾರಿಕಾ ಕಾರ್ಯ ನಡೆದಿದ್ದು, ರಾಷ್ಟ್ರೀಯ ಲಾಂಛನದ ಸ್ಕೆಚ್ ಮತ್ತು ಎರಕಹೊಯ್ದ ಪ್ರಕ್ರಿಯೆಯು ಕ್ಲೇ ಮಾಡೆಲಿಂಗ್/ಕಂಪ್ಯೂಟರ್ ಗ್ರಾಫಿಕ್‌ನಿಂದ ಕಂಚಿನವರೆಗೆ ಸಾಗಿದೆ.

ಹೊಸ ಸಂಸತ್ ಭವನದ ಕೆಲಸವನ್ನು ಟಾಟಾ ಪ್ರಾಜೆಕ್ಟ್ಸ್ ಲಿಮಿಟೆಡ್‌ಗೆ ವಹಿಸಲಾಗಿದೆ. 60,000 ಚ.ಮೀ. ವಿಸ್ತೀರ್ಣದಲ್ಲಿ ನೂತನ ಸಂಸತ್ ಭವನ ನಿರ್ಮಾಣವಾಗುತ್ತಿದೆ. ಮಾಸ್ಟರ್ ಪ್ಲಾನ್ ಪ್ರಕಾರ, ಈಗಿರುವ ವೃತ್ತಾಕಾರದ ಸಂಸತ್ ಭವನದ ಮುಂಭಾಗದಲ್ಲಿರುವ ಗಾಂಧಿ ಪ್ರತಿಮೆಯ ಹಿಂದೆ ಈ ಹೊಸ ತ್ರಿಕೋನ ಸಂಸತ್ ಭವನವನ್ನು ನಿರ್ಮಿಸಲಾಗುತ್ತಿದೆ. ಸಂಸತ್ತಿನ ಕಲಾಪದಲ್ಲಿ ಇದು 888 ಲೋಕಸಭಾ ಸದಸ್ಯರು, 384 ರಾಜ್ಯಸಭಾ ಸದಸ್ಯರ ಆಸನ ಸಾಮರ್ಥ್ಯವನ್ನು ಹೊಂದಿರಲಿದೆ. ಲೋಕಸಭೆಯ ಸಭಾಂಗಣದಲ್ಲಿ 1,272 ಆಸನಗಳನ್ನು ಸಿದ್ಧಪಡಿಸಲಾಗಿದೆ. ಇದರಿಂದ ಉಭಯ ಸದನಗಳ ಜಂಟಿ ಅಧಿವೇಶನವೂ ಸಾಧ್ಯವಾಗಲಿದೆ.

ಹೊಸ ಸಂಸತ್ ಕಟ್ಟಡದ ಯೋಜನೆಯನ್ನು ಸೆಪ್ಟೆಂಬರ್ ತಿಂಗಳಲ್ಲಿ 2019 ರಲ್ಲಿ ಘೋಷಿಸಲಾಯಿತು. 2020ರ ಡಿಸೆಂಬರ್ 10ರಂದು ಪ್ರಧಾನಿ ನರೇಂದ್ರ ಮೋದಿಯವರು ಯೋಜನೆಯ ಅಡಿಗಲ್ಲು ಹಾಕಿದರು.

ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಗೆ ರಾಜ್ಯ ಹೆದ್ದಾರಿಗಳ ಸಂಪರ್ಕ ಸಂಬಂಧ ಚರ್ಚೆ

ಬೆಂಗಳೂರು, ಜು.11– ಕಾಮಗಾರಿ ಪ್ರಗತಿಯಲ್ಲಿರುವ ಬೆಂಗಳೂರು–ಮೈಸೂರು ದಶಪಥ ಹೆದ್ದಾರಿಗೆ ಮದ್ದೂರು ಪಟ್ಟಣದ ಬಳಿ ಪ್ರಮುಖ ನಾಲ್ಕು ರಾಜ್ಯ ಹೆದ್ದಾರಿಗಳ ಸಂಪರ್ಕ ಕಲ್ಪಿಸುವ ಕುರಿತು ಸಂಸದೆ ಸುಮಲತಾ ಅಂಬರೀಶ್, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಹಾಗೂ ಮದ್ದೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕದಲೂರು ರಾಮಕೃಷ್ಣ ಅವರೊಂದಿಗೆ ಬೆಂಗಳೂರಿನಲ್ಲಿ ಚರ್ಚಿಸಿದರು.



ಮದ್ದೂರು–ಮಳವಳ್ಳಿ, ಮದ್ದೂರು–ನಾಗಮಂಗಲ, ಮದ್ದೂರು–ತುಮಕೂರು ಹಾಗೂ ಮದ್ದೂರು–ಹಲಗೂರು ನಡುವಿನ ನಾಲ್ಕು ರಾಜ್ಯ ಹೆದ್ದಾರಿಗಳು ರಾಷ್ಟ್ರೀಯ ಹೆದ್ದಾರಿಗೆ ಸಂಪರ್ಕ ಕಲ್ಪಿಸುವ ಸಲುವಾಗಿ ಮದ್ದೂರಿನ ನಿಡಘಟ್ಟ ಮತ್ತು ಚನ್ನೇಗೌಡನ ದೊಡ್ಡಿಯ ಬಳಿ ನಿರ್ಗಮನ ಮತ್ತು ಆಗಮನ ಕಲ್ಪಿಸಲು ಚರ್ಚಿಸಲಾಯಿತು.

ಬಳಿಕ ರಾಷ್ಟ್ರೀಯ ಹೆದ್ದಾರಿ ಯೋಜನಾ ನಿರ್ದೇಶಕರಿಗೆ ತಕ್ಷಣ ಕ್ರಮ ವಹಿಸುವಂತೆ ಸೂಚನೆ ನೀಡಲಾಯಿತು. ಅಲ್ಲದೆ ಕೂಡಲೇ ಈ ಭಾಗದ ರೈತರಿಗೆ, ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಸುಲಲಿತ ಸಂಚಾರಕ್ಕೆ ಅವಕಾಶ ಕಲ್ಪಿಸಿಕೊಡುವಂತೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ಸದ್ಯದಲ್ಲಿ ಸ್ಥಳ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವ ಕುರಿತು ತಿರ್ಮಾನಿಸಿದರು.

ಮದ್ದೂರು ಪಟ್ಟಣ ಮೈಸೂರು–ಬೆಂಗಳೂರು ಹೆದ್ದಾರಿಯ ಮಧ್ಯ ಭಾಗದಲ್ಲಿದ್ದು, ಇಲ್ಲಿಂದ ಹಲವು ರಾಜ್ಯ ಹೆದ್ದಾರಿಗಳನ್ನು ಸಂಪರ್ಕಿಸಲು ಪ್ರಮುಖ ಸ್ಥಳವಾಗಲಿದೆ. ಆದ್ದರಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಮದ್ದೂರು ಪಟ್ಟಣದಿಂದ ಸಂಪರ್ಕ ಕಲ್ಪಿಸುವ ಆಗಮನ ನಿರ್ಗಮನ ಸ್ಥಳಗಳ ಬಗ್ಗೆ ತ್ವರಿತವಾಗಿ ಕ್ರಮ ಕೈಗೊಂಡು ಜನರ ಸಮಸ್ಯೆಗಳಿಗೆ ಸ್ಪಂದಿಸಲು ಸೂಚಿಸಲಾಯಿತು.

ಎಐಎಡಿಎಂಕೆ ಮಧ್ಯಂತರ ಪ್ರಧಾನ ಕಾರ್ಯದರ್ಶಿಯಾಗಿ ಎಡಪ್ಪಾಡಿ ಪಳನಿಸ್ವಾಮಿ ಆಯ್ಕೆ: ಪನ್ನೀರ್ ಸೆಲ್ವಂ ಉಚ್ಛಾಟನೆ

ತಮಿಳುನಾಡಿನಲ್ಲೀಗ ಪಳನಿ–ಪನ್ನೀರ್ ಬೆಂಬಲಿಗರ ಮಾರಾಮಾರಿ

ಚೆನ್ನೈ: ತಮಿಳುನಾಡಿನ ಎಐಎಡಿಎಂಕೆ ಪಕ್ಷದ ಬಿಕ್ಕಟ್ಟು ಮುಂದುವರೆದಿದ್ದು, ಪಕ್ಷದ ಮಧ್ಯಂತರ ಪ್ರಧಾನ ಕಾರ್ಯದರ್ಶಿಯಾಗಿ ಮಾಜಿ ಮುಖ್ಯಮಂತ್ರಿ ಎಡಪ್ಪಾಡಿ ಪಳನಿಸ್ವಾಮಿ ಆಯ್ಕೆಯಾಗಿದ್ದು, ಇದರ ಬೆನ್ನಲ್ಲೇ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಮಾಜಿ ಸಿಎಂ ಒ. ಪನ್ನೀರ್ ಸೆಲ್ವಂ ಅವರನ್ನು ಉಚ್ಛಾಟನೆ ಮಾಡಲು ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಗಿದೆ. ಎಐಎಡಿಎಂಕೆಯ ಎಡಪ್ಪಾಡಿ ಕೆ ಪಳನಿಸ್ವಾಮಿ ನೇತೃತ್ವದಲ್ಲಿ ಕರೆಯಲಾದ ಸಭೆಗೆ ತಡೆ ನೀಡಬೇಕೆಂದು ಕೋರಿ ಓ ಪನ್ನೀರ್ ಸೆಲ್ವಂ ಸಲ್ಲಿಸಿದ್ದ ಅರ್ಜಿಯನ್ನು ಮದ್ರಾಸ್ ಹೈಕೋರ್ಟ್ ಇಂದು ಬೆಳಗ್ಗೆ ವಜಾಗೊಳಿಸುವ ಮೂಲಕ ಪಳನಿಸ್ವಾಮಿ ನೇತೃತ್ವದ ಬಣ ಎಐಎಡಿಎಂಕೆ ಸಭೆ ನಡೆಸುವ ಹಾದಿ ಸುಗಮಗೊಳಿಸಿತ್ತು. ಮದ್ರಾಸ್ ಹೈಕೋರ್ಟ್ ತೀರ್ಪಿನ ನಂತರ ತಮಿಳ್ ಮಹಾನ್ ಹುಸೈನ್ ಅಧ್ಯಕ್ಷತೆಯಲ್ಲಿ ನಡೆದ ಎಐಎಡಿಎಂಕೆ ಸಭೆಯಲ್ಲಿ ಕೆ.ಪಳನಿ ಸ್ವಾಮಿಯನ್ನು ಮಧ್ಯಂತರ ಪ್ರಧಾನ ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಲಾಗಿದೆ

ಪನ್ನೀರ್ ಸೆಲ್ವಂ ಉಚ್ಛಾಟನೆಗೆ ನಿರ್ಣಯ: ಎಐಎಡಿಎಂಕೆ ಸಾಮಾನ್ಯ ಸಭೆಯಲ್ಲಿ, ಪಕ್ಷದಲ್ಲಿನ ಉಭಯ ನಾಯಕತ್ವ ರದ್ದುಗೊಳಿಸುವ ಬಗ್ಗೆ ನಿರ್ಣಯ ಕೈಗೊಳ್ಳಲಾಗಿದ್ದು, ಅಲ್ಲದೇ ಎಐಎಡಿಎಂಕೆಗೆ ಉಪಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ರಚಿಸಲಾಗಿದೆ ಎಂದು ವರದಿ ತಿಳಿಸಿದೆ. ಅಲ್ಲದೇ ಪನ್ನೀರ್ ಸೆಲ್ವಂ ಅವರನ್ನು ಪಕ್ಷದಿಂದ ಉಚ್ಛಾಟಿಸಲಾಗಿದೆ.



ಪಕ್ಷದ ಕಚೇರಿಯಲ್ಲಿ ಪಳನಿಸ್ವಾಮಿ ನೇತೃತ್ವದಲ್ಲಿ ನಡೆದ ಸಭೆಗೂ ಮುನ್ನ ಭಾರೀ ಗಲಾಟೆ ನಡೆದಿದ್ದು, ಉಭಯ ಮುಖಂಡರ ಬೆಂಬಲಿಗರು ಪರಸ್ಪರ ಚೇರ್‌ಗಳನ್ನು ಎಸೆದು, ಹೊಡೆದಾಡಿಕೊಂಡಿದ್ದಾರೆ. ಪಕ್ಷದ ಕಚೇರಿಯ ಬಾಗಿಲು ಮುರಿದು ಒಳನುಗ್ಗಿದ ಪನ್ನೀರ್ ಸೆಲ್ವಂ ಬೆಂಬಲಿಗರು ಪ್ರತಿಭಟನೆ ನಡೆಸಿ, ಸಭೆಗೆ ಅಡ್ಡಿಪಡಿಸಿದ್ದಾರೆ. ಗಲಾಟೆ ವೇಳೆಯಲ್ಲಿ ಹಲವು ಮಂದಿ ಗಾಯಗೊಂಡಿರುವುದಾಗಿ ವರದಿಯಾಗಿದೆ. ಪಳನಿಸ್ವಾಮಿ ಮತ್ತು ಪನ್ನೀರ್ ಸೆಲ್ವಂ ಬೆಂಬಲಿಗರ ನಡುವಿನ ಅನಿರೀಕ್ಷಿತ ಘರ್ಷಣೆ, ಮಾರಾಮಾರಿ ನಂತರ ತಮಿಳುನಾಡು ಕಂದಾಯ ಇಲಾಖೆ ಎಐಎಡಿಎಂಕೆ ಪಕ್ಷದ ಕಚೇರಿಗೆ ಬೀಗ ಹಾಕಿದೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಪಳನಿಸ್ವಾಮಿ, ಪಕ್ಷದ ಕಚೇರಿಗೆ ರಕ್ಷಣೆ ನೀಡುವಂತೆ ದೂರು ನೀಡಿದ್ದರೂ, ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ. ಸಿಎಂ ಸ್ಟಾಲಿನ್ ಹಾಗೂ ಪನ್ನೀರ್ ಸೆಲ್ವಂ ಒಟ್ಟಾಗಿ ಯೋಜಿಸಿ ಪಕ್ಷದ ಕಚೇರಿಯನ್ನು ಹಾಳು ಮಾಡಿದ್ದಾರೆ ಎಂದರು.

ಸಾಮಾನ್ಯ ಸಭೆಯಲ್ಲಿ ನನ್ನನ್ನು ವಜಾಗೊಳಿಸಿರುವುದಕ್ಕೆ ಮಾನ್ಯತೆ ಇಲ್ಲ. ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತೇವೆ. ಪಳನಿಸ್ವಾಮಿಗೆ ನನ್ನನ್ನು ಪಕ್ಷದಿಂದ ತೆಗೆಯುವ ಹಕ್ಕಿಲ್ಲ. ಪಕ್ಷದ 1.5 ಕೋಟಿ ಕಾರ್ಯಕರ್ತರಿಂದ ನಾನು ಪಕ್ಷದ ಸಮನ್ವಯಕಾರನಾಗಿ ಚುನಾಯಿತನಾಗಿದ್ದೇನೆ ಎಂದು ಪನ್ನೀರ್ ಸೆಲ್ವಂ ತಿಳಿಸಿದರು.


ಅಮರನಾಥ ಯಾತ್ರೆ ಪುನರಾರಂಭ

ಜಮ್ಮು: ಜಮ್ಮುವಿನ ಭಗವತಿ ನಗರದಲ್ಲಿರುವ ಯಾತ್ರಿ ನಿವಾಸ ಬೇಸ್ ಕ್ಯಾಂಪ್ ನಿಂದ ಅಮರನಾಥ ಯಾತ್ರೆ ಪುನರಾರಂಭಗೊಂಡಿದೆ. ಶುಕ್ರವಾರ ಸಂಜೆ ಅಮರನಾಥ ಗುಹೆ ಬಳಿ ಭಾರೀ ವರ್ಷಧಾರೆಯಿಂದಾಗಿ ತಾತ್ಕಾಲಿಕವಾಗಿ ಯಾತ್ರೆಯನ್ನು ಸ್ಥಗಿತಗೊಳಿಸಲಾಗಿತ್ತು.

ಮಳೆ ಆರ್ಭಟದಿಂದಾಗಿ ಉಂಟಾದ ಪ್ರವಾಹದಿಂದ 16 ಜನರು ಸಾವಿಗೀಡಾಗಿದ್ದರು. ಇದೇ ಸಂದರ್ಭದಲ್ಲಿ 40 ಮಂದಿ ಕಾಣೆಯಾಗಿದ್ದು, ಸುಮಾರು 50 ಮಂದಿ ಗಾಯಗೊಂಡಿದ್ದಾರೆ. ಅಮರನಾಥದಲ್ಲಿ ಈ ಅನಾಹುತ ಸಂಭವಿಸಿದ್ದರೂ ಯಾತ್ರಾರ್ಥಿಗಳ ಉತ್ಸಾಹ ಸ್ವಲ್ಪವೂ ಕಡಿಮೆಯಾಗಿಲ್ಲ. 'ಬಂ ಬಂ ಭೋಲೆ' ಎಂಬ ಘೋಷಣೆಗಳೊಂದಿಗೆ ಭಕ್ತರಿಗಾಗಿ ಸರ್ಕಾರ ಸ್ಥಾಪಿಸಿರುವ ಬೇಸ್ ಕ್ಯಾಂಪ್‌ಗಳತ್ತ ದಾಪುಗಾಲು ಹಾಕುತ್ತಿದ್ದಾರೆ. 4,026 ಯಾತ್ರಾರ್ಥಿಗಳ 12ನೇ ಬ್ಯಾಚ್ 110 ವಾಹನಗಳ ಬೆಂಗಾವಲಿನೊಂದಿಗೆ ಶಿಬಿರದಿಂದ ರವಾನೆಯಾಗಿದ್ದಾರೆ. ಇನ್ನು 767 ಪುರುಷರು, 240 ಮಹಿಳೆಯರು ಮತ್ತು ಒಂಬತ್ತು ಮಕ್ಕಳು ಸೇರಿದಂತೆ ಒಟ್ಟು 1,016 ಪ್ರಯಾಣಿಕರು ಬೇಸ್ ಕ್ಯಾಂಪ್‌ನಿಂದ 25 ಬಸ್ ಗಳು ಮತ್ತು 10 ಲಘು ಮೋಟಾರು ವಾಹನಗಳಲ್ಲಿ ಬಾಲ್ಟಾಲ್ ಮಾರ್ಗಕ್ಕೆ ತೆರಳಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಗೆ ಕೊರೊನಾ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಹೆಚ್.ಡಿ ಕುಮಾರಸ್ವಾಮಿ ಅವರಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಈ ಸಂಬಂಧ ಟ್ವೀಟ್ ಮಾಡಿದ ಅವರು ಸಣ್ಣ ಪ್ರಮಾಣದ ಜ್ವರ, ಮೈಕೈ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ನಾನು ಇಂದು ಕೋವಿಡ್ ಪರೀಕ್ಷೆ ಮಾಡಿಸಿಕೊಂಡಿದ್ದು, ಫಲಿತಾಂಶ ಪಾಸಿಟಿವ್ ಬಂದಿದೆ ಎಂದು ತಿಳಿಸಿದ್ದಾರೆ. ಕೋವಿಡ್ ಲಕ್ಷಣಗಳು ಕಾಣಿಸಿಕೊಂಡಿರುವ ಕಾರಣ, ವೈದ್ಯರು ಹೋಮ್ ಐಸೋಲೇಷನ್‌ನಲ್ಲಿಯೇ ಇದ್ದು ಚಿಕಿತ್ಸೆ ಪಡೆಯುವಂತೆ ಅವರಿಗೆ ಸೂಚಿಸಿದ್ದಾರೆ.



ವೈದ್ಯರ ಸೂಚನೆಯಂತೆ, ನಾನು 10 ದಿನಗಳ ಕಾಲ ಮನೆಯಲ್ಲೇ ಇದ್ದು ಚಿಕಿತ್ಸೆ ಪಡೆಯುತ್ತೇನೆ. ದಯಮಾಡಿ ಯಾರೂ ನನ್ನ ಭೇಟಿಗೆ ಬರಬಾರದೆಂದು ವಿನಂತಿಸುತ್ತೇನೆ ಯಾರೂ ಅನ್ಯಥಾ ಭಾವಿಸಬಾರದು. 3–4 ದಿನಗಳಿಂದ ನನ್ನ ಪ್ರಾಥಮಿಕ ಸಂಪರ್ಕಕ್ಕೆ ಬಂದಿದ್ದವರೆಲ್ಲರೂ ತಪ್ಪದೇ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕೆಂದು ಕೋರುತ್ತೇನೆ ಎಂಬುದಾಗಿ ಕುಮಾರಸ್ವಾಮಿಯವರು ಟ್ವೀಟ್ ಮಾಡಿದ್ದಾರೆ.

ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸೆ ರಾಜೀನಾಮೆ

ಕೊಲಂಬೊ: ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸೆ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ಅಧಿಕೃತವಾಗಿ ಪ್ರಧಾನಿ ರನಿಲ್ ವಿಕ್ರಮಸಿಂಘೆ ತಿಳಿಸಿದರು. ಈ ಹಿಂದೆ ಸ್ಪೀಕರ್ ಮಹಿಂದ ಯಾಪಾ ಅಬೇವರ್ಧನ ಮಾಧ್ಯಮದವರೊಂದಿಗೆ ಮಾತನಾಡಿ, ಶ್ರೀಲಂಕಾ ಅಧ್ಯಕ್ಷ ರಾಜಪಕ್ಸೆ ಅವರು ಜುಲೈ 13 ರಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ ಎಂದು ಘೋಷಿಸಿದ್ದರು. ಆದರೆ ಶನಿವಾರದಂದು ಅಧ್ಯಕ್ಷರ ಭವನಕ್ಕೆ ಸಾವಿರಾರು ಜನರು ನುಗ್ಗಿ ದಾಂಧಲೆ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಇಂದೇ ಅವರು ರಾಜೀನಾಮೆ ನೀಡಿದ್ದಾರೆ.



ಜು. 20ಕ್ಕೆ ನೂತನ ಅಧ್ಯಕ್ಷರ ನೇಮಕ: ಶ್ರೀಲಂಕಾ ಸಂಸತ್ ಜುಲೈ 20 ರಂದು ನೂತನ ಅಧ್ಯಕ್ಷರನ್ನು ನೇಮಕ ಮಾಡಲಿದೆ ಎಂದು ಸ್ಪೀಕರ್ ಮಹಿಂದಾ ಯಪ ಅಬೇವರ್ಧನ ಘೋಷಿಸಿದ್ದಾರೆ. ಸಂಸತ್ ಜು.15 ರಂದು ಸೇರಲಿದ್ದು, ಹೊಸ ಅಧ್ಯಕ್ಷರ ಹುದ್ದೆಗೆ ನೇಮಕದ ಪ್ರಕ್ರಿಯೆಗೆ ಚಾಲನೆ ನೀಡಲಾಗುತ್ತದೆ ಹಾಗೂ ಜು.19 ರಂದು ನಾಮಪತ್ರಗಳನ್ನು ಅಂಗೀಕರಿಸಲು ಮತ್ತೆ ಸಂಸತ್ ಸೇರಲಿದೆ. ಜು.20 ರಂದು ಹೊಸ ಅಧ್ಯಕ್ಷರ ನೇಮಕಕ್ಕೆ ಚುನಾವಣೆ ನಡೆಯಲಿದೆ ಎಂದು ಸ್ಪೀಕರ್ ತಿಳಿಸಿದ್ದಾರೆ. ಲಂಕಾದ ಸಂವಿಧಾನದ ಪ್ರಕಾರ ಲಂಕಾದ ಪ್ರಧಾನಿ ಹಾಗೂ ಅಧ್ಯಕ್ಷರು ಏಕಕಾಲದಲ್ಲಿ ರಾಜೀನಾಮೆ ನೀಡಿದರೆ ಸಂಸತ್‌ನ ಸ್ಪೀಕರ್ ಲಂಕಾದ ಹಂಗಾಮಿ ಅಧ್ಯಕ್ಷರಾಗಿ ಗರಿಷ್ಠ 30 ದಿನಗಳ ಕಾಲ ಕಾರ್ಯನಿರ್ವಹಿಸಲು ಅವಕಾಶವಿದೆ. ಈ 30 ದಿನಗಳಲ್ಲಿ ಸಂಸತ್ ನ ಸದಸ್ಯರ ಪೈಕಿ ಒಬ್ಬರನ್ನು ಹೊಸ ಅಧ್ಯಕ್ಷರನ್ನಾಗಿ ಸಂಸತ್ ನೇಮಕ ಮಾಡಬೇಕಾಗುತ್ತದೆ. ಹೊಸ ಅಧ್ಯಕ್ಷರು ಈಗಿನ ಅಧ್ಯಕ್ಷರ ಉಳಿದ ಅವಧಿಗೆ (2 ವರ್ಷಗಳ ಅವಧಿಗೆ) ನೇಮಕಗೊಳ್ಳಲಿದ್ದಾರೆ.

ಶಿವಳ್ಳಿ ಪೊಲೀಸರ ಕಾರ್ಯಾಚರಣೆ

ಆರು ಮಂದಿ ದರೋಡೆಕೋರರ ಬಂಧನ

ಪಿಸ್ತೂಲ್, ಲಾಂಗು, ಮಚ್ಚು ವಶ

ಮಂಡ್ಯ, ಜು.11– ಆರು ಮಂದಿ ಕುಖ್ಯಾತ ದರೋಡೆಕೋರರನ್ನು ಬಂಧಿಸಿರುವ ಶಿವಳ್ಳಿ ಠಾಣೆ ಪೊಲೀಸರು ಪಿಸ್ತೂಲ್ ಸೇರಿದಂತೆ ಮಾರಕಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ.



ಮಂಡ್ಯ ತಾಲೂಕು ಚಂದಗಾಲು ಗ್ರಾಮದ ಬಸವರಾಜ ಪಾಟೀಲ್ ಅಲಿಯಾಸ್ ಕಾರುಮುಡಿ ಬಸವ ಅಲಿಯಾಸ್ ರಾಜು(36), ಹೃತಿಕ್‌ಗೌಡ ಅಲಿಯಾಸ್ ಚಿಂತು (20), ಚಂದ್ರಶೇಖರ ಅಲಿಯಾಸ್ ಬೋಕ್ಲೆ(21), ಮಲ್ಲನಾಯಕ ಕಟ್ಟೆಯ ಸಂಜಯ್‌ಕುಮಾರ್ ಅಲಿಯಾಸ್ ಸಂಜು(27), ಚಿಕ್ಕೇಗೌಡನದೊಡ್ಡಿಯ ಪ್ರಮೋದ್ ಅಲಿಯಾಸ್ ಕಾಡು (24) ಮತ್ತು ಕುಣಿಗಲ್ ತಾಲೂಕು ಹುರುಳಿಬೊಮ್ಮಸಂದ್ರ ಗ್ರಾಮದ ಅಭಿಷೇಕ್‌ಗೌಡ ಅಲಿಯಾಸ್ ಅಭಿ (20) ಬಂಧಿತ ದರೋಡೆಕೋರರಾಗಿದ್ದು, ಇವರಿಂದ ಒಂದು ಪಿಸ್ತೂಲ್, ಲಾಂಗ್, ಪ್ಲಾಸ್ಟಿಕ್ ಹಗ್ಗ, ಚಾಕು, ಕಾರದಪುಡಿ ಪ್ಯಾಕೆಟ್, ಹೀರೊ ಹೊಂಡಾ ಸ್ಪ್ಲೆಂಡರ್ ಪ್ಲಸ್ (ಕೆಎ42, ಇ 3140) ಬೈಕ್, ನಂಬರ್ ಪ್ಲೇಟ್ ಇಲ್ಲದ ಹೋಂಡಾ ಡಿಯೋ ವಶಪಡಿಸಿಕೊಳ್ಳಲಾಗಿದೆ

ಜಿಲ್ಲೆಯಲ್ಲಿ ರಸ್ತೆ ರಾಬರಿಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲೂ ಅಧಿಕಾರಿಗಳು ನಿಗಾ ವಹಿಸಿದ್ದರು. ಜೂ10ರಂದು ಮುಂಜಾನೆ ಮಂಡ್ಯ–ಮೇಲುಕೋಟೆ ರಸ್ತೆಯ ಬಿ.ಹಟ್ಟದ ಪಟ್ಟಲದಮ್ಮ ದೇವಸ್ಥಾನದ ಬಳಿ ಗುಂಪೊಂದು ರಸ್ತೆ ದರೋಡೆಗೆ ಹೊಂಚು ಹಾಕುತ್ತಿದೆ ಎಂದು ಶಿವಳ್ಳಿ ಠಾಣೆ ಸಬ್‌ಇನ್ಸ್‌ಪೆಕ್ಟರ್ ಎಂ.ಎಸ್. ಜಯಲಕ್ಷ್ಮಮ್ಮ ಅವರಿಗೆ ದೊರೆತ ಮಾಹಿತಿ ಮೇರೆಗೆ ಅವರು ತಮ್ಮ ಸಿಬ್ಬಂದಿಯೊಂದಿಗೆ ಮುಂಜಾನೆ 4 ಗಂಟೆ ಸುಮಾರಿಗೆ ಸದರಿ ಸ್ಥಳಕ್ಕೆ ತೆರಳಿದಾಗ ದ್ವಿಚಕ್ರ ವಾಹನಗಳಲ್ಲಿದ್ದ ಆರು ಮಂದಿ ಪೊಲೀಸರನ್ನು ನೋಡಿ ಪರಾರಿಯಾಗಲು ಯತ್ನಿಸಿದ್ದರು. ಆದರೆ ಹೆಚ್ಚಿನ ಸಿಬ್ಬಂದಿಯೊಂದಿಗೆ ಸಬ್‌ಇನ್ಸ್‌ಪೆಕ್ಟರ್ ಜಯಲಕ್ಷ್ಮಮ್ಮ ತೆರಳಿದ್ದರಿಂದ ಆರು ಮಂದಿಯನ್ನು ಬೆನ್ನತ್ತಿ ಪೊಲೀಸರು ಹಿಡಿದರು. ಅವರನ್ನು ವಿಚಾರಣೆಗೊಳಪಡಿಸಿದಾಗ ಈ ರಸ್ತೆಯಲ್ಲಿ ಬರುವ ವಾಹನಗಳನ್ನು ತಡೆದು ದರೋಡೆ ಮಾಡಲು ಹೊಂಚು ಹಾಕುತ್ತಿದ್ದರು ಎಂದು ತಿಳಿದುಬಂದಿದೆ. ಒಂದು ವೇಳೆ ವಾಹನ ಸವಾರರು ಪ್ರತಿರೋಧ ವ್ಯಕ್ತಪಡಿಸಿದರೆ ಅವರ ಮೇಲೆ ಹಲ್ಲೆ ನಡೆಸಲು ಮಾರಕಾಸ್ತ್ರಗಳು ಹಾಗೂ ಪಿಸ್ತೂಲ್ ಇಟ್ಟುಕೊಂಡಿದ್ದರು ಎಂದು ವಿಚಾರಣೆ ವೇಳೆ ತಿಳಿದುಬಂದಿದೆ.

ಬಂಧಿತ ದರೋಡೆಕೋರರಲ್ಲಿ ಬಸವರಾಜ ಪಾಟೀಲ್ ಎಂಬಾತ ಮಂಡ್ಯ ಪಶ್ಚಿಮ ಠಾಣೆಯಲ್ಲಿ ನಡೆದಿದ್ದ ಕೊಲೆ ಪ್ರಕರಣವೊಂದರಲ್ಲಿ ಶಿಕ್ಷೆಗೊಳಗಾಗಿ 2019ರಲ್ಲಿ ಬಿಡುಗಡೆಯಾಗಿದ್ದ. ಈತ ಮಂಡ್ಯ ಕಾರಾಗೃಹದಲ್ಲಿರುವಾಗಲೇ ಕೆ.ಆರ್.ಪೇಟೆಯ ಮಾರವಾಡಿಯೊಬ್ಬರನ್ನು ಹತ್ಯೆ ಮಾಡಿಸಲು ಯತ್ನಿಸಿದ್ದ. ಅಲ್ಲದೆ, ಬೇರೆಯವರ ಮೂಲಕ ಬೆದರಿಸಿ ಹಣ ವಸೂಲಿ ಮಾಡುತ್ತಿದ್ದ. ಹೃತಿಕ್‌ಗೌಡ ವಿರುದ್ಧ ಶಿವಳ್ಳಿ ಠಾಣೆಯಲ್ಲಿ ಕೊಲೆ ಯತ್ನ ಮತ್ತು ದರೋಡೆ ಪ್ರಕರಣ ಈ ಹಿಂದೆ ದಾಖಲಾಗಿತ್ತು. ಸಂಜಯ್‌ಕುಮಾರ್ ವಿರುದ್ಧ ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಕೊಲೆ ಯತ್ನ ಪ್ರಕರಣ ದಾಖಲಾಗಿತ್ತು. ಪ್ರಮೋದ್ ವಿರುದ್ಧ ಪಾಂಡವಪುರ ಠಾಣೆಯಲ್ಲಿ ದರೋಡೆ ಪ್ರಕರಣ ದಾಖಲಾಗಿತ್ತು. ಇನ್ನು ಚಂದ್ರಶೇಖರ ಮತ್ತು ಅಭಿಷೇಕ್‌ಗೌಡ ಈ ನಾಲ್ವರು ಕುಖ್ಯಾತರ ಸಹಚರರಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಬೈಕ್‌ಗೆ ಗೂಡ್ಸ್ ಆಟೋ ಡಿಕ್ಕಿ: ಮಗ ಸಾವು, ತಂದೆ ಸೇರಿ ಮೂವರಿಗೆ ಗಾಯ

ಕೆ.ಆರ್.ಪೇಟೆ, ಜು.11(ಶ್ರೀನಿವಾಸ್)– ಬೈಕ್‌ಗೆ ಗೂಡ್ಸ್ ಆಟೋ ಡಿಕ್ಕಿ ಹೊಡೆದ ಪರಿಣಾಮ ಮಗ ಸಾವನ್ನಪ್ಪಿದ್ದು, ತಂದೆ ಸೇರಿದಂತೆ ಮೂವರು ಗಾಯಗೊಂಡಿರುವ ಘಟನೆ ತಾಲೂಕಿನ ಚಾಮಿಕೊಪ್ಪಲು– ಮತ್ತಿಘಟ್ಟ ನಡುವೆ ನಳ್ಳಿಗುಳ್ಳೆ ತಿರುವಿನಲ್ಲಿ ಸೋಮವಾರ ನಡೆದಿದೆ.



ತಾಲೂಕಿನ ಕಸಬಾ ಹೋಬಳಿಯ ಮತ್ತಿಘಟ್ಟ ಗ್ರಾಮದ ಪ್ರದೀಪ್ ಅವರ ಪುತ್ರ ವೇದಾಂತ್ ಗೌಡ(5) ಮೃತಪಟ್ಟ ಬಾಲಕ. ಪ್ರದೀಪ್ ಸ್ನೇಹಿತ ಅದೇ ಗ್ರಾಮದ ಪ್ರತಾಪ್, ಇವರ ಅಣ್ಣನ ಮಗಳು ಐದನೇ ತರಗತಿಯ ವಿದ್ಯಾರ್ಥಿನಿ ಯಶಸ್ವಿನಿಗೆ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವಿವರ: ಪ್ರದೀಪ್ ತಮ್ಮ ಮಗ ವೇದಾಂತ್‌ಗೌಡನನ್ನು ಕೆ.ಆರ್.ಪೇಟೆ ಪಟ್ಟಣದ ಇನಫೆಂಟ್ ಜೀಸಸ್ ಕಾಟೇಜ್ ಶಾಲೆಗೆ ಸೇರಿಸಿದ್ದರು. ಎಂದಿನಂತೆ ಇವರು ಸೋಮವಾರ ಶಾಲೆಯಿಂದ ತನ್ನ ಮಗನನ್ನು ಮನೆಗೆ ಕರೆದುಕೊಂಡು ಹೋಗಲು ಬಂದಿದ್ದರು. ಈ ವೇಳೆ ಈತನ ಸ್ನೇಹಿತ ಪ್ರತಾಪ್ ಕೂಡ ತನ್ನ ಅಣ್ಣ ಮಗಳು ಐದನೇ ತರಗತಿಯ ವಿದ್ಯಾರ್ಥಿನಿ ಯಶಸ್ವಿನಿಯನ್ನು ಮನೆಗೆ ಕರೆದುಕೊಂಡು ಹೋಗಲು ಬಂದಿದ್ದರು. ಈ ವೇಳೆ ಪ್ರದೀಪ್ ತನ್ನ ಮಗನೊಂದಿಗೆ ಪ್ರತಾಪ್ ಹಾಗೂ ಯಶಸ್ವಿನಿಯನ್ನು ತನ್ನ ಬೈಕ್‌ನಲ್ಲಿ ಕೂರಿಸಿಕೊಂಡು ಮತ್ತಿಘಟ್ಟ ಗ್ರಾಮಕ್ಕೆ ಬರುತ್ತಿದ್ದಾಗ, ಚಾಮಿಕೊಪ್ಪಲು–ಮತ್ತಿಘಟ್ಟ ನಡುವೆ ನಳ್ಳಿಗುಳ್ಳೆ ತಿರುವಿನಲ್ಲಿ ಕೆ.ಆರ್.ಪೇಟೆ ಕಡೆಯಿಂದ ಬರುತ್ತಿದ್ದ ಗೂಡ್ಸ್ ಆಟೋ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಬೈಕ್ ಮುಂದೆ ಕುಳಿತಿದ್ದ ವೇದಾಂತ್‌ಗೌಡ ತೀವ್ರ ಗಾಯಗೊಂಡು ಸ್ಥಳದಲ್ಲಿಯೇ ಸಾವನ್ನಪ್ಪಿದ್ದರೆ, ಪ್ರದೀಪ್, ಪ್ರತಾಪ್, ಯಶಸ್ವಿನಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತ ವೇದಾಂತ್‌ಗೌಡನ ಶವವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆಗೆ ಇರಿಸಲಾಗಿದ್ದು ಕುಟುಂಬದ ಆಕ್ರಂದನ ಮುಗಿಲು ಮುಟ್ಟಿದೆ. ಈ ಸಂಬಂಧ ಕೆ.ಆರ್.ಪೇಟೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಘಟನಾ ಸ್ಥಳಕ್ಕೆ ಡಿವೈಎಸ್‌ಪಿ ಲಕ್ಷ್ಮೀನಾರಾಯಣ, ಗ್ರಾಮಾಂತರ ಠಾಣೆ ಪೊಲೀಸ್ ನಿರೀಕ್ಷಕ ನಿರಂಜನ್, ಪಿಎಸ್‌ಐಗಳಾದ ಪ್ರಮೋದ್, ಬಸವರಾಜು ಚಿಂಚೋಳಿ ಸೇರಿದಂತೆ ಹಲವರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಬೈಕ್‌ಗೆ ಗೂಡ್ಸ್ ಆಟೋ ಡಿಕ್ಕಿ: ಸವಾರ ಸಾವು

ಪಾಂಡವಪುರ, ಜು.11– ಬೈಕ್‌ಗೆ ಗೂಡ್ಸ್ ಆಟೋ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಮೃತಪಟ್ಟಿರುವ ಘಟನೆ ಪಟ್ಟಣದಲ್ಲಿ ಶನಿವಾರ ರಾತ್ರಿ ನಡೆದಿದೆ.

ಪಟ್ಟಣದ ಠಾಣೆ ಬಳಿಯ ಜೈನ್ ಸಮುದಾಯದ ಬಾಬುಲಾಲ್ ಅವರ ಪುತ್ರ ಲೋಕೇಶ್‌ಜೈನ್(38) ಮೃತಪಟ್ಟ ವ್ಯಕ್ತಿ. ಈತ ಪಾಂಡವಪುರದ ಕಡೆಗೆ ತನ್ನ ಬೈಕ್‌ನಲ್ಲಿ ಬರುತ್ತಿದ್ದಾಗ ಎದುರಿನಿಂದ ಬಂದ ಗೂಡ್ಸ್ ಆಟೋ ಡಿಕ್ಕಿ ಹೊಡೆದಿದೆ. ಪರಿಣಾಮ ಬೈಕ್‌ನಿಂದ ಕೆಳಗೆ ಬಿದ್ದ ಲೋಕೇಶ್‌ಜೈನ್ ಅವರ ತಲೆ ಗಂಭೀರವಾದ ಗಾಯವಾಗಿದೆ. ಕೂಡಲೇ ಅವರನ್ನು ಪಾಂಡವಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಲೋಕೇಶ್ ಮೃತಪಟ್ಟಿದ್ದಾನೆ. ಈ ಸಂಬಂಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಲಂಚ ಸ್ವೀಕಾರ: ಎಸಿಬಿ ಬಲೆಗೆ ಬಿದ್ದ ಜಿಪಂ ಎಇ

ಮದ್ದೂರು, ಜು.11– ಗುತ್ತಿಗೆದಾರರೊಬ್ಬರಿಂದ ಸಹಾಯಕ ಇಂಜಿನಿಯರ್ ಲಂಚ ಸ್ವೀಕರಿಸುವಾಗ ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸರಿಗೆ ಸಿಕ್ಕಿ ಬಿದ್ದಿರುವ ಘಟನೆ ಮದ್ದೂರಿನ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಕಚೇರಿಯಲ್ಲಿ ಸೋಮವಾರ ನಡೆದಿದೆ.

ಸಹಾಯಕ ಇಂಜಿನಿಯರ್ ಎಂ.ಮಹಾಲಿಂಗಯ್ಯ ಎಸಿಬಿ ಬಲೆಗೆ ಬಿದ್ದಿರುವ ಅಧಿಕಾರಿಯಾಗಿದ್ದಾರೆ. ಮದ್ದೂರು ತಾಲೂಕಿನ ಈರೇಗೌಡನದೊಡ್ಡಿಯ ಗುತ್ತಿಗೆದಾರರೊಬ್ಬರು 5 ಲಕ್ಷ ರೂ. ವೆಚ್ಚದ ರಸ್ತೆ ಕಾಮಗಾರಿ ಮುಗಿಸಿ ಬಿಲ್ ಪಾವತಿಗೆ ಮೇಲಾಧಿಕಾರಿಗೆ ಶಿಫಾರಸು ಮಾಡುವಂತೆ ಮನವಿ ಮಾಡಿದ್ದಾರೆ. ಆದರೆ ಸಹಾಯಕ ಇಂಜಿನಿಯರ್ ಮಹಾಲಿಂಗಯ್ಯ ಕಚೇರಿ ಕೆಲಸಕ್ಕೆ 35 ಸಾವಿರ ರೂ. ಲಂಚದ ಬೇಡಿಕೆ ಇಟ್ಟಿದ್ದಾರೆ. ಇದರ ಬಗ್ಗೆ ಗುತ್ತಿಗೆದಾರ ಮೊದಲೇ ಎಸಿಬಿಗೆ ದೂರು ನೀಡಿದ್ದರು.

ಸೋಮವಾರ ಕಚೇರಿಯಲ್ಲಿಯೇ ಸಹಾಯಕ ಇಂಜಿನಿಯರ್ ಮಹಾಲಿಂಗಯ್ಯ 35 ಸಾವಿರ ರೂ. ಲಂಚ ಸ್ವೀಕರಿಸಿ, ಬಳಿಕ ಅದನ್ನು ತನ್ನ ಕಾರು ಚಾಲಕ ನವೀನ್ ಬಳಿ ನೀಡಿದ್ದಾರೆ. ಇದನ್ನೆಲ್ಲ ಮುಂಚಿತವಾಗಿಯೇ ಪ್ಲಾನ್ ಮಾಡಿದ್ದ ಎಸಿಬಿ ಎಸ್ಪಿ ಸಜಿತ್ ಮಾರ್ಗದರ್ಶನದಲ್ಲಿ ಅಧಿಕಾರಿಗಳು ದಾಳಿ ನಡೆಸಿ ಲಂಚದ ಸಮೇತ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಈ ಸಂಬಂಧ ಮಂಡ್ಯದ ಎಸಿಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಂಎಲ್‌ಸಿ ಎ.ಹೆಚ್.ವಿಶ್ವನಾಥ್ ಸಹೋದರಿ ಶಿವಮ್ಮ ನಿಧನ

ಕೆ.ಆರ್.ಪೇಟೆ, ಜು.11– ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಪುರ ಗ್ರಾಮದ ದಿ.ಶಿವಣ್ಣೇಗೌಡ ಅವರ ಪತ್ನಿ ಹಾಗೂ ಮಾಜಿ ಸಚಿವ ಹಾಗೂ ವಿಧಾನಪರಿಷತ್ ಸದಸ್ಯ ಅಡಗೂರು ವಿಶ್ವನಾಥ್ ಅವರ ಸಹೋದರಿ ಶಿವಮ್ಮ(90) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು 6 ಪುತ್ರಿಯರು, ಇಬ್ಬರು ಪುತ್ರ, ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದಲ್ಲಿ ಸಂಜೆ ನೆರವೇರಿತು.



ಬದುಕಿಗಾಗಿ ಸ್ಫುರಿಸುವ ಕಾವ್ಯ ಶ್ರೇಷ್ಠ

ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಅಭಿಮತ

ಮಂಡ್ಯ,ಜು.11(ಮೋಹನ್ ರಾಜ್)– ಕಾವ್ಯಕ್ಕಾಗಿ ಕಾವ್ಯ ಸೃಷ್ಟಿಯಾಗುವುದರ ಬದಲು ಬದುಕಿಗಾಗಿ ಸ್ಫುರಿಸುವ ಕಾವ್ಯ ಶ್ರೇಷ್ಠ ಮಟ್ಟದಲ್ಲಿರುತ್ತದೆ ಎಂದು ಖ್ಯಾತ ಸಾಹಿತಿ ಸಿ.ಪಿ. ಕೃಷ್ಣಕುಮಾರ್ ಹೇಳಿದರು.



ನಗರದ ಕರ್ನಾಟಕ ಸಂಘದ ಆವರಣದಲ್ಲಿ ಭಾನುವಾರ ಶ್ರೀರಂಗಪಟ್ಟಣದ ಕಾವೇರಿ ಪ್ರಕಾಶನ ಹೊರ ತಂದಿರುವ ಗಣಂಗೂರು ನಂಜೇಗೌಡ ರಚಿಸಿರುವ 'ಕಂದನೂರಿನ ಹಾಡು' ಕವನ ಸಂಕಲನ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಕಾವಿನಿಂದ ಕಾರ್ಯ, ಕಾರ್ಯದಿಂದ ಕಾವ್ಯ ಸೃಷ್ಟಿಯಾಗುತ್ತದೆ ಎಂಬುದು ಹಿರಿಯರೊಬ್ಬರ ಅನುಭವದ ನುಡಿ. ಇಂತಹ ಕಾವ್ಯ ನವೋದಯ, ನವ್ಯ ಹಾಗೂ ಬಂಡಾಯದ ಪ್ರಾಕಾರಗಳನ್ನು ಒಳಗೊಂಡಿರುತ್ತವೆ ಎಂದು ವಿಶ್ಲೇಷಿಸಿದರು.

ನಂಜೇಗೌಡರ ಈ ಕೃತಿಯು ದಲಿತ, ಬಂಡಾಯೋತ್ತರ ಕಾವ್ಯವಾಗಿ ಮೂಡಿ ಬಂದಿದೆ ಎಂದು ಅಭಿಪ್ರಾಯಪಟ್ಟ ಅವರು, ಯಾವುದೇ ಕಾವ್ಯಗಳಲ್ಲಿ ರೂಪಕ ಮತ್ತು ಪ್ರತಿಮೆಗಳಿರಬೇಕಾದದ್ದು ಅತ್ಯಗತ್ಯ, ಧ್ವನಿ ಕಾವ್ಯದ ಆತ್ಮ ಆಗಿರುವುದರಿಂದ ಪ್ರತಿಯೊಂದು ಪದಗಳಲ್ಲೂ ಕೃತಿಯ ಕರ್ತೃವಿನ ಅನುಭಾವಜನ್ಯ ಒಳತುಡಿತ ಪ್ರಕಾಶಿಸುತ್ತದೆ. ಹೀಗೆ ಕಾವ್ಯ ಪರಂಪರೆಯ ಕುರಿತು ತಮ್ಮ ಅನಿಸಿಕೆಗಳನ್ನು ಮುಕ್ತವಾಗಿ ಹಂಚಿಕೊಂಡ ಸಿಪಿಕೆ ಅವರು, ಗೋಪಾಲಕೃಷ್ಣ ಅಡಿಗರ ಕಾವ್ಯದಲ್ಲಿ ಮಣ್ಣಿನ ವಾಸನೆ ಇರಬೇಕು ಎಂಬುದನ್ನು ಕುವೆಂಪು ಅವರು ತಮ್ಮದೇ ದಾಟಿಯಲ್ಲಿ ವಿಶ್ಲೇಷಿಸಿದ್ದರು. ಮೇಲ್ವರ್ಗದವರ ಕಾವ್ಯದಲ್ಲಿ ಮಣ್ಣಿನ ವಾಸನೆಯಲ್ಲಿ ಬರಲು ಎಲ್ಲಿ ಸಾಧ್ಯ? ತಳವರ್ಗದ ಶೂದ್ರ ಕವಿಗಳಲ್ಲಿ ಮಾತ್ರ ಮಣ್ಣಿನ ವಾಸನೆಯೂ ಇರುತ್ತದೆ. ಗೊಬ್ಬರದ ಕಂಪೂ ಇರುತ್ತದೆ ಎಂದಿದ್ದರು. ಹಾಗೆ ಕಂದನೂರಿನ ಹಾಡಿನಲ್ಲಿನ ಪ್ರತಿಯೊಂದು ಕಾವ್ಯದಲ್ಲೂ ಮಣ್ಣಿನ ಕಂಪು ಇದೆ ಎಂದು ಶ್ಲಾಘಿಸಿದರು.

ಸಂಸ್ಕೃತಿ ಚಿಂತಕ ತೈಲೂರು ವೆಂಕಟಕೃಷ್ಣ ಕಾರ್ಯಕ್ರಮ ಉದ್ಘಾಟಿಸಿದರು. ಈ ವೇಳೆ ಎನ್.ಶಂಕರಗೌಡ ಚಾರಿಟಬಲ್ ಟ್ರಸ್ಟ್‌ನ ಪೋಷಕ ಇಂಡುವಾಳು ಸಚ್ಚಿದಾನಂದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸಿದರು. ಬಳಿಕ ಹಲವು ಕವಿಗಳಿಂದ ಕವಿಗೋಷ್ಠಿ ನಡೆಯಿತು. ಕಾರ್ಯಕ್ರಮದಲ್ಲಿ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶಗೌಡ, ಹಿರಿಯ ಪತ್ರಕರ್ತ ಎಂ.ಎನ್.ಯೋಗೀಶ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಸಿ. ಮಂಜುನಾಥ್, ಯುವ ಬರಹಗಾರರ ಬಳಗದ ಅಧ್ಯಕ್ಷ ಸತೀಶ್ ಜವರೇಗೌಡ, ವಕೀಲ ಚಿಕ್ಕಹಾರೋಹಳ್ಳಿ ಪುಟ್ಟಸ್ವಾಮಿ ಇದ್ದರು.

ಜು.19 ಶ್ರೀಕೃಷ್ಣರಾಜಮುಡಿ ಉತ್ಸವ

ಮೇಲುಕೋಟೆ, ಜು.11– ಚೆಲುವನಾರಾಯಣಸ್ವಾಮಿ ಅವರ ಶ್ರೀಕೃಷ್ಣರಾಜಮುಡಿ ಉತ್ಸವ ಜು.19ರ ಮಂಗಳವಾರ ರಾತ್ರಿ ನಡೆಯಲಿದ್ದು, ಈ ಸಂಬಂಧ ಧಾರ್ಮಿಕ ಕೈಂಕರ್ಯಗಳು ಜುಲೈ 14ರ ಅಂಕುರಾರ್ಪಣೆಯೊಂದಿಗೆ ಆರಂಭವಾಗಿ ಜುಲೈ 25ರ ಸೋಮವಾರದಂದು ನಡೆಯುವ ಪುಷ್ಪಯಾಗದೊಂದಿಗೆ ಮುಕ್ತಾಯವಾಗಲಿದೆ.



ಜು.19ರಂದು ರಾತ್ರಿ 7 ಗಂಟೆಗೆ ಶ್ರೀದೇವಿ ಭೂದೇವಿ ಸಮೇತನಾಗಿ ಗರುಡ ರೂಢನಾದ ಚೆಲುವನಾರಾಯಣಸ್ವಾಮಿಗೆ 'ಕೃಷ್ಣರಾಜಮುಡಿ' ಧರಿಸಿ ದಿವ್ಯ ಪ್ರಬಂಧಪಾರಾಯಣ ಮತ್ತು ಮಂಗಳವಾದ್ಯದೊಂದಿಗೆ ಉತ್ಸವ ನೆರವೇರಿಸಲಾಗುತ್ತದೆ.

ವೈರಮುಡಿ ಜಾತ್ರಾಮಹೋತ್ಸವ ಕಲ್ಯಾಣೋತ್ಸವದಿಂದ ಆರಂಭವಾಗಿ ಮಹಾಭಿಷೇಕದೊಂದಿಗೆ ಮುಕ್ತಾಯವಾದರೆ ಆಷಾಢ ಮಾಸದ ಕೃಷ್ಣರಾಜಮುಡಿ ಜಾತ್ರಾಮಹೋತ್ಸವ ಮಹಾಭಿಷೇಕದೊಂದಿಗೆ ಆರಂಭವಾಗಿ ಪುಷ್ಪಯಾಗದೊಂದಿಗೆ ಸಂಪನ್ನವಾಗಲಿದೆ. ಕೃಷ್ಣರಾಜಮುಡಿ ಬ್ರಹ್ಮೋತ್ಸವ ಮಹಾರಾಜರ ಹೆಸರಲ್ಲಿ ಹತ್ತು ದಿನಗಳ ಕಾಲ ನಡೆಯುವ ರಾಜ್ಯದ ಏಕೈಕ ಜಾತ್ರಾ ಮಹೋತ್ಸವವಾಗಿದೆ.

ಪ್ರವೇಶಕ್ಕೆ ಅರ್ಜಿ ಆಹ್ವಾನ

ಪಾಂಡವಪುರ, ಜು.11– ತಾಲೂಕಿನ ಎಲೆಕೆರೆಯಲ್ಲಿರುವ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ 7, 8 ಮತ್ತು 9ನೇ ತರಗತಿಗಳ ಖಾಲಿ ಇರುವ ಸೀಟು ಭರ್ತಿಗೆ ಪ್ರವೇಶ ಪರೀಕ್ಷೆ ನಡೆಸಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಜು. 27ರಂದು ಪರೀಕ್ಷೆ ನಡೆಯಲಿದ್ದು, ಜು. 21ರೊಳಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗಾಗಿ ಮೊ: 9036289071, 9480325802 ಹಾಗೂ 7353434386ಗೆ ಸಂಪರ್ಕಿಸಬೇಕು ಎಂದು ಬಿಇಓ ಲೋಕೇಶ್, ಮುಖ್ಯಶಿಕ್ಷಕ ಅಲ್‌ಹುಸ್ಕ್ ತಿಳಿಸಿದ್ದಾರೆ.

ಪ್ರಾಕೃತಿಕ ವಿಕೋಪ ಎದುರಿಸಲು ಅಗ್ನಿಶಾಮಕ ಇಲಾಖೆಯ 'ವಿಪತ್ತು ಮಿತ್ರ' ಸಜ್ಜು

ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಪಿ.ಚಂದನ್





ಮಡಿಕೇರಿ. ಜು.11– ಕೊಡಗು ಜಿಲ್ಲೆಯಲ್ಲಿ ಮಡಿಕೇರಿ, ಕುಶಾಲನಗರ, ಸೋಮವಾರ ಪೇಟೆ ಮತ್ತು ಗೋಣಿಕೊಪ್ಪದಲ್ಲಿ ಅಗ್ನಿಶಾಮಕ ಠಾಣೆಗಳಿದ್ದು, 4 ಠಾಣೆಗಳಲ್ಲಿ ಬೋಟ್ ಲಭ್ಯ ಇರುತ್ತದೆ ಹಾಗೂ ರಕ್ಷಣಾ ಸಲಕರಣೆಗಳು ಲಭ್ಯ ಇರುತ್ತವೆ. ಯಾವುದೇ ಪ್ರಾಕೃತಿಕ ವಿಕೋಪ ಸಂದರ್ಭದಲ್ಲಿ ರಕ್ಷಣಾ ಕಾರ್ಯಾಚರಣೆಗೆ ಸಿಬ್ಬಂದಿ ಸನ್ನದ್ಧರಾಗಿರುತ್ತಾರೆ ಎಂದು ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಪಿ.ಚಂದನ್ ಅವರು ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಪ್ರಾಯೋಜಿತ 'ವಿಪತ್ತು ಮಿತ್ರ' ತರಬೇತಿ ಕಾರ್ಯಕ್ರಮವು ಜೂನ್ 20ರಿಂದ ಜುಲೈ 16 ರವರೆಗೆ 200 ಸ್ವಯಂ ಸೇವಕರಿಗೆ ಕೊಡಗು ಜಿಲ್ಲಾಡಳಿತ ವ್ಯವಸ್ಥೆ ಮಾಡಿರುವ ಡಯಟ್ ಕೂಡಿಗೆ, ಕುಶಾಲನಗರದಲ್ಲಿ ಪ್ರಕೃತಿ ವಿಕೋಪ ಸಂದರ್ಭ ಕೈಗೊಳ್ಳಬೇಕಾದ ಪ್ರಾಥಮಿಕ ಕ್ರಮಗಳ ಬಗ್ಗೆ ತರಬೇತಿಯನ್ನು ಹೋಂ ಗಾರ್ಡ್ಸ್, ಎನ್‌ಎಸ್‌ಎಸ್, ಸ್ತ್ರೀಶಕ್ತಿ, ಕಾಲೇಜು ವಿದ್ಯಾರ್ಥಿಗಳು ಹಾಗೂ ಸಂಘ ಸಂಸ್ಥೆಗಳ ಸ್ವಯಂ ಸೇವಕರಿಗೆ ತರಬೇತಿ ನೀಡಲಾಗುತ್ತಿದೆ.

ಯಾವುದೇ ಅನಾಹುತ ಘಟಿಸಿದಾಗ ತುರ್ತು ಸ್ಪಂದನ ತಂಡಗಳು ಆಗಮಿಸುವುದರೊಳಗೆ ಕೈಗೊಳ್ಳಬೇಕಾದ ರಕ್ಷಣಾ ಕ್ರಮಗಳ ಬಗ್ಗೆ ತರಬೇತಿ ನೀಡಲಾಗುತ್ತಿದೆ. ಈಗಾಗಲೇ ಮೊದಲ ತಂಡದ ತರಬೇತಿ ಮುಗಿದಿದ್ದು, ಅಂತಿಮ ತಂಡದ ತರಬೇತಿ ಪ್ರಗತಿಯಲ್ಲಿದೆ. ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಪಿ.ಚಂದನ್ ನೋಡಲ್ ಅಧಿಕಾರಿ ಆಗಿದ್ದು, ಜಿಲ್ಲಾಧಿಕಾರಿ ಮತ್ತು ಹೆಚ್ಚುವರಿ ಜಿಲ್ಲಾಧಿಕಾರಿ ಅವರ ಮಾರ್ಗದರ್ಶನ ಹಾಗೂ ಉಸ್ತುವಾರಿಯಲ್ಲಿ ಈ ಕಾರ್ಯಕ್ರಮ ನಡೆಯುತ್ತಿದೆ. ತರಬೇತಿಗಾಗಿ ಮಂಡ್ಯ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಹಾಗೂ ಚಿತ್ರದುರ್ಗ, ದಾವಣಗೆರೆ ಮತ್ತು ಮೈಸೂರಿನಿಂದ ಅಗ್ನಿಶಾಮಕ ಅಧಿಕಾರಿಗಳು ಕೊಡಗು ಜಿಲ್ಲೆಯ ಜಿಲ್ಲಾ ವಿಪತ್ತು ಪರಿಣತರಾದ ಅನನ್ಯ ವಾಸುದೇವ್ ಮತ್ತು ಎನ್‌ಡಿಆರ್‌ಎಫ್ ಅಧಿಕಾರಿಗಳು ತರಬೇತಿ ನೀಡುತ್ತಿದ್ದಾರೆ.

ಮೊದಲ ತಂಡದಲ್ಲಿ ತರಬೇತಿ ಪಡೆದವರು ಹಲವಾರು ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಂಡು, ರಸ್ತೆಗೆ ಬಿದ್ದ ಮರ ತೆರವುಗೊಳಿಸುವುದು, ಅಪಾಯದಲ್ಲಿರುವ ಸ್ಥಳಗಳಿಂದ ಜನರ ಸ್ಥಳಾಂತರ ಮಾಡುವಲ್ಲಿ ತೊಡಗಿಸಿಕೊಂಡಿದ್ದಾರೆ. ಗೃಹರಕ್ಷಕ ವಿಪತ್ತು ಮಿತ್ರರು ಭಾಗಮಂಡಲದ ಸಂಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇತರೆ ವಿಪತ್ತು ಮಿತ್ರರು ಮಳೆ ಸಂದರ್ಭ ಹಲವು ಸೇವೆ ನೀಡುತ್ತಿದ್ದು, ಸಾಂಕ್ರಾಮಿಕ ರೋಗ ಹರಡುವಿಕೆಯು ತಡೆಗಟ್ಟುವ ಬಗ್ಗೆ ಸಮುದಾಯಗಳ ನಡುವೆ ಜಾಗೃತಿ ಮೂಡಿಸುತ್ತಿದ್ದಾರೆ. ಹಾಗೆಯೇ ರಕ್ಷಣಾ ಕಾರ್ಯಗಳಿಗೆ ಸನ್ನದ್ಧರಾಗಿದ್ದಾರೆ ಎಂದು ಪಿ.ಚಂದನ್ ಅವರು ಹೇಳಿದ್ದಾರೆ.

ಜಿಲ್ಲಾಡಳಿತದ ಜೊತೆ ಈಗಾಗಲೇ ಪ್ರವಾಹ ಪರಿಸ್ಥಿತಿಯಲ್ಲಿ ರಕ್ಷಣಾ ಕಾರ್ಯಾಚರಣೆ ಬಗ್ಗೆ ಪೂರ್ವ ತಯಾರಿಯನ್ನು ಮೇ ಕೊನೆ ವಾರದಲ್ಲಿ ಹಾರಂಗಿ ಜಲಾಶಯ ಹಿನ್ನೀರಿನಲ್ಲಿ ಪ್ರಾತ್ಯಕ್ಷಿಕೆ ನಡೆಸಿರುವುದು ಗಮನಾರ್ಹವಾಗಿದೆ.

ಜಿಲ್ಲಾಧಿಕಾರಿ ಡಾ.ಬಿ.ಸತೀಶ ಹಾಗೂ ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ ಅವರ ಮಾರ್ಗದರ್ಶನದಲ್ಲಿ ಪ್ರಾಕೃತಿಕ ವಿಕೋಪ ಎದುರಿಸುವಲ್ಲಿ ಹಲವು ಮುನ್ನೆಚ್ಚರಿಕ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಪಿ.ಚಂದನ್ ಅವರು ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಕುಲಮಾತೆ ಕಾವೇರಿ, ಕೊಡವರ ಬಗ್ಗೆ ಅವಹೇಳನ

ಕೊಡವ ಸಂಘಟನೆಗಳಿಂದ ದೂರು ದಾಖಲು



ಕೊಡವ ಸಂಘಟನೆ ಸದಸ್ಯರಿಂದ ಪೊಲೀಸರಿಗೆ ದೂರು ನೀಡುತ್ತಿರುವುದು.

ಶ್ರೀಮಂಗಲ, ಜು.11– ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಮಹಮ್ಮದ್ ಅಸ್ಪಾಕ್ ಎಂಬ ವ್ಯಕ್ತಿ ಕೊಡವರ ಕುಲಮಾತೆ ಕಾವೇರಿ ತಾಯಿ ಹಾಗೂ ಕೊಡವತಿಯರ ಬಗ್ಗೆ ಮತ್ತು ಕೊಡವ ಜನಾಂಗದ ಬಗ್ಗೆ ಅವಹೇಳನಕಾರಿಯಾಗಿ ಸಾಮಾಜಿಕ ಜಾಲತಾಣದಲ್ಲಿ ಪ್ರಚಾರ ಮಾಡಿರುವುದನ್ನು ಟಿ.ಶೆಟ್ಟಿಗೇರಿಯಲ್ಲಿರುವ ತಾವಳಗೇರಿ ಮೂಂದ್‌ನಾಡ್ ಕೊಡವ ಸಮಾಜ, ಸಂಭ್ರಮ ಪೊಮ್ಮಕ್ಕಡ ಕ್ರೀಡೆ, ಸಾಂಸ್ಕೃತಿಕ ಸಂಸ್ಥೆ ಹಾಗೂ ಟಿ.ಶೆಟ್ಟಿಗೇರಿ ಸಾರ್ವಜನಿಕ ಗೌರಿ ಗಣೇಶ ಸೇವಾ ಸಮಿತಿಯ ಸದಸ್ಯರು ತೀವ್ರವಾಗಿ ಖಂಡಿಸಿದ್ದಾರೆ.

ತಾವಳಗೇರಿ ಮೂಂದ್‌ನಾಡ್ ಕೊಡವ ಸಮಾಜದ ಅಧ್ಯಕ್ಷ ಚೊಟ್ಟೆಯಾಂಡಮಾಡ ಬೋಸು ವಿಶ್ವನಾಥ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸ್ವಚ್ಛ ಸುಸಂಸ್ಕೃತ ಕೊಡವ ಜನಾಂಗದ ಬಗ್ಗೆ ಹಾಗೂ ಕೊಡವರ ಕುಲಮಾತೆಯ ಬಗ್ಗೆ ಹಲವು ಬಾರಿ ಅವಹೇಳನ ಮಾಡುವ ಪ್ರಕ್ರಿಯೆಯಲ್ಲಿ ಕೆಲವು ಕಿಡಿಗೇಡಿಗಳು ತೊಡಗಿಕೊಂಡಿದ್ದು, ಇದನ್ನು ಕೊಡವರು ಸಹಿಸುವುದಿಲ್ಲ ಈ ರೀತಿಯ ನೀಚ ಪ್ರವೃತ್ತಿಯನ್ನು ತಾವು ತೀವ್ರವಾಗಿ ಖಂಡಿಸುವುದಲ್ಲದೇ ತಕ್ಷಣವೇ ಈ ವ್ಯಕ್ತಿಯನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದು 3 ಸಂಸ್ಥೆಗಳ ಸದಸ್ಯರು ಒಕ್ಕೊರಲಿನಿಂದ ಪೊಲೀಸ್ ಇಲಾಖೆಯನ್ನು ಒತ್ತಾಯಿಸಿದೆ.

ಈ ಸುಬಂಧ ಶ್ರೀಮಂಗಲ ಪೊಲೀಸ್ ಠಾಣೆಯಲ್ಲಿ ಪುಕಾರು ದಾಖಲಿಸಿ ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಬ್ರಹತ್ ಪ್ರತಿಭಟನೆ ನಡೆಸಲಾಗುವುದು. ಇದಕ್ಕೆ ಆಸ್ಪದ ನೀಡದೆ ತಕ್ಷಣ ಆ ವ್ಯಕ್ತಿಯನ್ನು ಬಂಧಿಸುವಂತೆ ಒತ್ತಾಯಿಸಿದರು.

ಈ ಸಂದರ್ಭ ತಾವಳಗೇರಿ ಮೂಂದ್‌ನಾಡ್ ಕೊಡವ ಸಮಾಜದ ಅಧ್ಯಕ್ಷ ಚೊಟ್ಟೆ ಯಾಂಡ ಮಾಡ ಬೋಸು ವಿಶ್ವನಾಥ್, ಉಪಾಧ್ಯಕ್ಷ ಮಾಣೀರ ವಿಜಯ್ ನಂಜಪ್ಪ ಕಾರ್ಯದರ್ಶಿ ಮನ್ನೇರ ರಮೇಶ್, ಕ್ರೀಡೆ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಕಟ್ಟೇರ ಈಶ್ವರ, ಸಂಚಾಲಕ ಚೆಟ್ಟಂಗಡ ರವಿ ಸುಬ್ಬಯ್ಯ, ನಿರ್ದೇಶಕರಾದ ತಡಿಯಂಗಡ ಕರುಂಬಯ್ಯ, ಮನ್ನೇರ ಕಾವೇರಮ್ಮ, ಕೋಟ್ರಮಡ ಸುಮಂತ್, ತಾವಳಗೇರಿ ಮೂಂದ್ ನಾಡ್‌ನ ನಾಡ್ ತಕ್ಕ ಕೈಬಿಲೀರ ಹರೀಶ್ ಅಪ್ಪಯ್ಯ, ಸದಸ್ಯರಾದ ಉಳುವಂಗಡ ಉದಯ, ಸಂಭ್ರಮ ಪೊಮ್ಮಕ್ಕಡ ಸಂಸ್ಥೆಯ ಅಧ್ಯಕ್ಷೆ ತಡಿಯಂಗಡ ಸೌಮ್ಯ ಕರುಂಬಯ್ಯ, ಕಾರ್ಯದರ್ಶಿ ಉಳುವಂಗಡ ಕಾವೇರಿ ಉದಯ, ನಿರ್ದೇಶಕರಾದ ಅಜ್ಜಮಾಡ ಪ್ರಮೀಳ ಕರುಂಬಯ್ಯ, ಬೊಳ್ಳಜೀರ ಸುಶೀಲ ಅಶೋಕ್, ಸದಸ್ಯೆಯರಾದ ಮನ್ನೇರ ಸರಸ್ವತಿ ರಮೇಶ್, ಮುಕ್ಕಾಟಿರ ಉಷಾ, ಪೆಮ್ಮಂಡ ಸವಿತಾ ಕುಶಾಲಪ್ಪ ಕರ್ತಮಾಡ ಪ್ರತಿಮ, ಚಿಮ್ಮಚ್ಚಿರ ಹರಿಣಿ, ಮುಕ್ಕಾಟಿರ ದಿವ್ಯ ಹಾಗೂ ಸಾರ್ವಜನಿಕ ಗೌರಿ ಗಣೇಶ ಸಮಿತಿಯ ಸದಸ್ಯರು ಹಾಜರಿದ್ದರು.

ಮಳೆ ಹಾನಿ ಸಂತ್ರಸ್ತರಿಗೆ ಸ್ಪಂದಿಸುವಲ್ಲಿ ಸರ್ಕಾರ ವಿಫಲ

ಮಾಜಿ ಎಂಎಲ್‌ಸಿ ಶಾಂತೆಯಂಡ ವೀಣಾ ಅಚ್ಚಯ್ಯ ಆರೋಪ



ಮಡಿಕೇರಿ,ಜು.11– ಕೊಡಗಿನ ಮಳೆ ಹಾನಿ ಸಂತ್ರಸ್ತರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದು ವಿಧಾನಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ ಆರೋಪಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಸುರಿಯುತ್ತಿರುವ ಅತಿವಳೆಯಿಂದ 2018ರ ಮಾದರಿಯ ಆತಂಕದ ಛಾಯೆ ಮೂಡಿದೆ. ಅಂದು ಆಡಳಿತದಲ್ಲಿದ್ದ ಸಮ್ಮಿಶ್ರ ಸರಕಾರ ಜಂಬೂರು, ಗಾಳಿಬೀಡು, ಕರ್ಣಂಗೇರಿ, ಗೋಳಿಕಟ್ಟೆ ವ್ಯಾಪ್ತಿಯಲ್ಲಿ ತಲಾ 9 ಲಕ್ಷ ರೂ. ವೆಚ್ಚದಲ್ಲಿ 800ಕ್ಕೂ ಅಧಿಕ ಮನೆಗಳನ್ನು ನಿರ್ಮಿಸಿ ಸಂತ್ರಸ್ತರಿಗೆ ಆಶ್ರಯ ಕಲ್ಪಿಸಿತ್ತು. ಆದರೆ ನಂತರದ ವರ್ಷಗಳಲ್ಲಿ ಸಂಭವಿಸಿದ ಮಳೆಹಾನಿಯಿಂದ ನಷ್ಟ ಅನುಭವಿಸಿದವರಿಗೆ ಬಿಜೆಪಿ ನೇತೃತ್ವದ ಸರಕಾರ ಏನನ್ನೂ ನೀಡಿಲ್ಲವೆಂದು ಟೀಕಿಸಿದರು.

ಅಪಾಯದಂಚಿನಲ್ಲಿರುವ ನೆಲ್ಲಿಹುದಿಕೇರಿ, ಕರಡಿಗೋಡು ನದಿ ಪಾತ್ರದ ಸಂತ್ರಸ್ತರಿಗೆ ಹಾಗೂ ವಿರಾಜಪೇಟೆ ಬೆಟ್ಟದ ಪ್ರದೇಶದ ನಿವಾಸಿಗಳಿಗೆ ನಿವೇಶಗಳನ್ನು ಗುರುತಿಸಿ, ವಸತಿ ಸೌಲಭ್ಯ ಕಲ್ಪಿಸುವ ಭರವಸೆಯನ್ನು ಸರಕಾರ ನೀಡಿತ್ತು. ಸರಕಾರಿ ಜಾಗ ದೊರೆಯದಿದ್ದರೆ ಖಾಸಗಿ ಜಮೀನು ಖರೀದಿಸಿ ಸಂತ್ರಸ್ತರಿಗೆ ಹಂಚಿಕೆ ಮಾಡುವುದಾಗಿ ತಿಳಿಸಿತ್ತು. ಆದರೆ ಸರಕಾರದ ದ್ವಂದ್ವ ನಿಲುವುಗಳಿಂದಾಗಿ ಇಲ್ಲಿಯವರೆಗೆ ಸಂತ್ರಸ್ತರಿಗೆ ಪರ್ಯಾಯ ನಿವೇಶನ ಅಥವಾ ವಸತಿ ಸೌಲಭ್ಯ ದೊರೆತ್ತಿಲ್ಲ ಸಚಿವರುಗಳು ಹಣದ ಕೊರತೆಯಿಲ್ಲ, ಖಜಾನೆ ತುಂಬಿ ತುಳುಕುತ್ತಿದೆ ಎಂದು ಹೇಳಿ ಕೊಳ್ಳುತ್ತಿದ್ದಾರೆ. ಈ ಹಣದಿಂದ ಸಂತ್ರಸ್ತರಿಗೆ ವಸತಿ ಸೌಲಭ್ಯ ಕಲ್ಪಿಸಬಹುದಿತ್ತಲ್ಲವೇ ಎಂದು ವೀಣಾ ಅಚ್ಚಯ್ಯ ಪ್ರಶ್ನಿಸಿದರು.

ಬಂಧಿಸಲು ಆಗ್ರಹ: ಕುಲದೇವಿ ಕಾವೇರಿ ಹಾಗೂ ಕೊಡವ ಮಹಿಳೆಯರ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕು. ಪೊಲೀಸರು ನಿರ್ಲಕ್ಷ್ಯ ತೋರಿದರೆ ವಿವಿಧ ಸಂಘ, ಸಂಸ್ಥೆಗಳು ಕರೆ ನೀಡಿರುವ ಕೊಡಗು ಬಂದ್‌ಗೆ ನಾವು ಬೆಂಬಲ ಸೂಚಿಸಬೇಕಾಗುತ್ತದೆ ಎಂದರು.

ಈ ಪ್ರಕರಣದ ಹಿಂದೆ ವ್ಯವಸ್ಥಿತ ಷಡ್ಯಂತ್ರ ಅಡಗಿದೆ. ಜೀವನದಿ ಕಾವೇರಿಯ ನೀರನ್ನು ಪ್ರತಿಯೊಬ್ಬರು ಬಳಸುತ್ತಾರೆ. ಆದರೆ ಅವಹೇಳನದ ಬಗ್ಗೆ ಯಾರೂ ಖಂಡನೆ ವ್ಯಕ್ತಪಡಿಸುತ್ತಿಲ್ಲವೆಂದು ಬೇಸರ ವ್ಯಕ್ತಪಡಿಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜಾ ಉತ್ತಪ್ಪ, ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಕೊಲ್ಯದ ಗಿರೀಶ್, ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ ಬಿ.ಎಸ್.ಪ್ರತ್ಯು ಹಾಗೂ ಪದಾಧಿಕಾರಿ ಸಂದೀಪ್ ಉಪಸ್ಥಿತರಿದ್ದರು.

ಅಪರಿಚಿತ ವ್ಯಕ್ತಿ ಸಾವು



ಸೋಮವಾರಪೇಟೆ, ಜು.11– ತಾಲೂಕಿನ ಮಾದಾಪುರ ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷಗಳಿಂದ ಓಡಾಡಿಕೊಂಡಿದ್ದ ವ್ಯಕ್ತಿಯೋರ್ವರು ನಿನ್ನೆ ದಿನ ಆಕಸ್ಮಿಕವಾಗಿ ಮೃತಪಟ್ಟಿದ್ದು, ಇವರ ಗುರುತು ಪತ್ತೆಗೆ ಸಾರ್ವಜನಿಕರು ಸಹಕರಿಸುವಂತೆ ಸೋಮವಾರಪೇಟೆ ಪೊಲೀಸ್ ಠಾಣಾ ಪ್ರಕಟಣೆಯಲ್ಲಿ ಮನವಿ ಮಾಡಿದೆ.

ಮಾದಾಪುರ ಸುತ್ತಮುತ್ತಲ ಕಾಫಿ ತೋಟ, ಅಂಗಡಿ ಮುಂಗಟ್ಟುಗಳಲ್ಲಿ ಕೆಲಸ ಮಾಡಿಕೊಂಡು, ಮಾರ್ಕೆಟ್ ಏರಿಯಾದಲ್ಲೇ ದಿನ ಕಳೆಯುತ್ತಿದ್ದ ಸುಮಾರು 35 ರಿಂದ 40 ವರ್ಷ ಪ್ರಾಯದ ಶಶಿ ಎಂಬವರು ಭಾನುವಾರ ರಾತ್ರಿ ಮಾರುಕಟ್ಟೆಯಲ್ಲಿ ಮಲಗಿದ್ದು, ಸೋಮವಾರ ಬೆಳಗ್ಗಿನ ಜಾಗ ಮೃತಪಟ್ಟ ಸ್ಥಿತಿಯಲ್ಲಿ ಕಂಡುಬಂದಿದ್ದಾರೆ.

ಈ ಬಗ್ಗೆ ಗ್ರಾಪಂ ಅಧ್ಯಕ್ಷೆ ನಿರೂಪ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಒಂದು ವರ್ಷದಿಂದ ಮಾರುಕಟ್ಟೆಯಲ್ಲಿ ಜೀವನ ನಡೆಸುತ್ತಿದ್ದ ಈ ವ್ಯಕ್ತಿಯ ಹೆಸರು ಶಶಿ ಎಂಬುವುದನ್ನು ಹೊರತುಪಡಿಸಿ ಇವರ ಸಂಬಂಧಿಕರ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಈ ಹಿನ್ನೆಲೆ ಮೃತ ಶಶಿ ಅವರ ಸಂಬಂಧಿಕರು ಇದ್ದಲ್ಲಿ ಸೋಮವಾರಪೇಟೆ ಪೊಲೀಸ್ ಠಾಣೆ ದೂ.ಸಂ.08276 282040 ಸಂಖ್ಯೆಗೆ ಮಾಹಿತಿ ನೀಡುವಂತೆ ಇನ್ಸ್‌ಪೆಕ್ಟರ್ ಬಿ.ಜಿ. ಮಹೇಶ್ ಮನವಿ ಮಾಡಿದ್ದಾರೆ.

ತುಳು ಸಂಸ್ಕೃತಿ, ಪರಂಪರೆ ಉಳಿಸಲು ಎಲ್ಲರೂ ಒಗ್ಗೂಡಬೇಕು



ವಿರಾಜಪೇಟೆ, ಜು.11– ತುಳು ಭಾಷಿಕರು ತಮ್ಮ ಸಂಸ್ಕೃತಿ ಪದ್ಧತಿ ಪರಂಪರೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕೈಜೋಡಿಸುವಂತಾಗಬೇಕು ಎಂದು ತುಳುವೆರ ಜನಪದ ಕೂಟದ ಕೊಡಗು ಜಿಲ್ಲಾ ಅಧ್ಯಕ್ಷ ಬಿ.ಬಿ.ಐತಪ್ಪ ರೈ ಹೇಳಿದರು.

ಕೊಡಗು ಜಿಲ್ಲಾ ತುಳುವೆರ ಜನಪದ ಕೂಟದ ವತಿಯಿಂದ ವಿರಾಜಪೇಟೆ ಪುರಭವನದಲ್ಲಿ ಹಮ್ಮಿಕೊಂಡಿದ್ದ ತುಳು ಭಾಷಿಕರ ಸಭೆಯನ್ನು ಉದ್ಘಾಟಿಸಿದ ಬಳಿಕ ಮಾತನಾಡಿ, ತುಳು ಭಾಷೆ ಮಾತನಾಡುವ 13 ಜನಾಂಗದ 'ವರನ್ನು ಸೇರಿಸಿ ಭಾಷೆಯ ಅಭಿವೃದ್ಧಿ ಮತ್ತು ತುಳು ಭಾಂದವರ ಏಳಿಗೆಗಾಗಿ ಜನಪದ ಕೂಟವನ್ನು ರಚಿಸಲಾಗಿದ್ದು ಇದರ ಪದಾಧಿಕಾರಿಗಳು ಜನಾಂಗದ ಏಳಿಗೆಗಾಗಿ ಕಾರ್ಯಕ್ರಮವನ್ನು ರೂಪಿಸುವುದಾಗಿ ಐತಪ್ಪ ರೈ ತಿಳಿಸಿದರು.

ತುಳುವೆರ ಜನಪದ ಕೂಟದ ಜಿಲ್ಲಾ ಉಪಾಧ್ಯಕ್ಷ ಬಿ.ವೈ.ಆನಂದ ಮಾತನಾಡಿ, ತುಳು ಜನಪದ ಕೂಟದ ಸಂಘಟನೆಯು ಜಿಲ್ಲೆಯಾದ್ಯಂತ ಹೋಬಳಿ ಮತ್ತು ಗ್ರಾಮ ಸಮಿತಿಯನ್ನು ರಚನೆ ಮಾಡುವುದರೊಂದಿಗೆ ಸಂಘಟನೆಯನ್ನು ಬಲಗೊಳಿಸುವ ಮೂಲಕ ಕೊಡಗು ಜಿಲ್ಲೆಯಲ್ಲಿ ಒಂದೂವರೆ ಲಕ್ಷಕ್ಕೂ ಹೆಚ್ಚು ತುಳು ಭಾಷಿಕರಿದ್ದು ತುಳು ಸಮುದಾಯದ ಜನಾಂಗದವರು ಎಲ್ಲಾ ಕ್ಷೇತ್ರದಲ್ಲಿ ಭಾಗವಹಿಸುವಂತಾಗಬೇಕು ಎಂದರು.

ಜನಪದ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶೇಖರ್ ಭಂಡಾರಿ ಮಾತನಾಡಿ, ತುಳುವೆರ ಶ್ರೇಯಾಭಿವೃದ್ಧಿಗಾಗಿ ನಮ್ಮದೆ ಆದಂತ ಸಹಕಾರ ಸಂಘ ಕಾರ್ಯನಿರ್ವಹಿಸುತ್ತಿದ್ದು ಜನಾಂಗ ಬಾಂಧವರು ಸದಸ್ಯತ್ವ ಪಡೆದುಕೊಳ್ಳುವ ಮೂಲಕ ಬ್ಯಾಂಕ್‌ನಿಂದ ಸೌಲಭ್ಯಗಳನ್ನು ಪಡೆದುಕೊಳ್ಳಲು ಮುಂದಾಗಬೇಕು ಎಂದರು. ತುಳುವೆರ ಜನಪದ ಕೂಟದ ಜಿಲ್ಲಾ ಪ್ರದಾನ ಕರ್ಯದರ್ಶಿ ಪಿ.ಎಂ.ರವಿ, ಹಿರಿಯ ಸಲಹೆಗಾರ ಕೆ‌ಆರ್.ಬಾಲಕೃಷ್ಣ ರೈ, ಬಿ.ಇ.ಹೊನ್ನಪ್ಪ ಅವರು ಸಭೆಯನ್ನುದ್ದೇಶಿಸಿ ಮಾತನಾಡಿದರು

ವೇದಿಕೆಯಲ್ಲಿ ಜಿಲ್ಲಾ ಸಂಘಟನಾ ಕಾರ್ಯದರ್ಶಿ ರಾಜೀವ್ ಲೋಚನ, ಖಜಾಂಚಿ ಪ್ರಭು ರೈ, ಮಡಿಕೇರಿ ತಾಲೂಕು ಅಧ್ಯಕ್ಷ ಸುರೇಶ್ ಕುಲ್ಲಾಲ್, ಹಾಗೂ ಸಂಘಟನೆಯ ಜಿಲ್ಲಾ ನಿರ್ದೇಶಕರಾದ ಕಲಾವತಿ ಪೂವಪ್ಪ, ಸುಜಾತ ಚಂದ್ರಶೇಖರ್, ಗಿರೀಶ್ ರೈ, ವಿರಾಜಪೇಟೆ ತಾಲೂಕು ನಿಕಟಪೂರ್ವ ಅಧ್ಯಕ್ಷ ದಾಮೋಧರ ಅಚಾರ್ಯ, ಕೆ.ಆರ್. ವಿಜಯ್ ಉಪಸ್ಥಿತರಿದ್ದರು.

ಜನಸಾಮಾನ್ಯರ ಕೆಲಸಗಳನ್ನು ತ್ವರಿತವಾಗಿ ನಿರ್ವಹಿಸಿ

ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ತಾಕೀತು



ಚಾಮರಾಜನಗರ, ಜು.11–ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಪಾರದರ್ಶಕ ಆಡಳಿತಕ್ಕೆ ಒತ್ತು ನೀಡುವ ಮೂಲಕ ಬಡವರು, ಜನಸಾಮಾನ್ಯರ ಕೆಲಸಗಳನ್ನು ತ್ವರಿತವಾಗಿ ನಿರ್ವಹಿಸಬೇಕು. ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ತಲುಪಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ತಾಕೀತು ಮಾಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ತಹಸೀಲ್ದಾರರು, ತಾಪಂ ಹಾಗೂ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗ್ರಾಮೀಣ ಭಾಗದ ಜನರ ಸಮಸ್ಯೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕು. ಪಂಚಾಯಿತಿಗಳಲ್ಲಿ ಬಡವರಿಗೆ ಅನಾವಶ್ಯಕವಾಗಿ ತೊಂದರೆ ಕೊಡಬೇಡಿ. ಯಾರನ್ನೂ ಅಲೆದಾಡಿಸಬೇಡಿ. ನಿಮ್ಮ ಕರ್ತವ್ಯವನ್ನು ಸರಿಯಾಗಿ ನಿಭಾಯಿಸಿ ಎಂದ ಸಚಿವರು, ವಸತಿ ಯೋಜನೆಯಡಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ. ಸೂರು ಕಲ್ಪಿಸುವ ಕಾರ್ಯವನ್ನು ವಿಳಂಬ ಮಾಡಬೇಡಿ. ಕೂಡಲೇ ಪಟ್ಟಿ ಕಳುಹಿಸಿ ಅನುಮೋದನೆ ಪಡೆದು ಮನೆಗಳ ನಿರ್ಮಾಣ ಪೂರ್ಣಗೊಳಿಸಿ ಎಂದರು.

ಗ್ರಾಮಗಳಲ್ಲಿ ಸ್ವಚ್ಛತಾ ಕೆಲಸಗಳಿಗೆ ವಿಶೇಷ ಗಮನ ನೀಡಬೇಕು. ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಎಲ್ಲಾ ಕಡೆ ಉತ್ತಮ ಕಾಮಗಾರಿಗಳನ್ನು ನಿರ್ವಹಣೆ ಮಾಡಬೇಕು. ಇ–ಸ್ವತ್ತು ಸೌಲಭ್ಯ ಸೇರಿದಂತೆ ಎಲ್ಲಾ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಬೇಕು. ಜಿಲ್ಲೆಯ ಹಲವು ಭಾಗದಲ್ಲಿ ಇ–ಸ್ವತ್ತಿನ ಸಂಬಂಧ ಇರುವ ತೊಡಕುಗಳನ್ನು ಜಿಲ್ಲಾಧಿಕಾರಿಗಳು, ಜಿಪಂ ಸಿಇಓ, ತಹಸೀಲ್ದಾರರು ಪರಿಹರಿಸಬೇಕು ಎಂದು ಸಚಿವರು ತಿಳಿಸಿದರು.

ತಾಪಂ ಇಓಗಳು ಹಾಗೂ, ಪಿಡಿಓಗಳು ಕೇಂದ್ರ ಸ್ಥಾನದಲ್ಲಿರಬೇಕು. ಇನ್ನೂ 15 ದಿನಗಳೊಳಗೆ ಈ ನಿಟ್ಟಿನಲ್ಲಿ ಎಲ್ಲರೂ ಅಗತ್ಯ ಕ್ರಮ ವಹಿಸಬೇಕು ಎಂದು ಸೂಚಿಸಿದ ಸಚಿವರು, ಹನೂರು ತಾಪಂ ಇಓ ಕೇಂದ್ರಸ್ಥಾನದಲ್ಲಿ ವಾಸಿಸದೆ ಹಾಗೂ ಸಭೆಯಲ್ಲಿ ಸರಿಯಾದ ಮಾಹಿತಿ ನೀಡದೆ ಇರುವುದರಿಂದ ನೋಟಿಸ್ ಜಾರಿ ಮಾಡುವಂತೆ ಜಿಪಂ ಸಿಇಓಗೆ ಸೂಚಿಸಿದರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಕೆಲವು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಫೋನ್ ಕರೆಗಳನ್ನು ಸ್ವೀಕರಿಸುತ್ತಿಲ್ಲ. ದೂರವಾಣಿ ಕರೆ ಸ್ವೀಕರಿಸಿದರೆ ಕೆಲಸವಾಗುತ್ತದೆ. ಈ ನಿರ್ಲಕ್ಷ್ಯ ಸರಿಯಲ್ಲ ಎಂದು ತರಾಟೆ ತಗೆದುಕೊಂಡರು.

ಶಾಸಕರಾದ ಎನ್.ಮಹೇಶ್, ಸಿ.ಎಸ್. ನಿರಂಜನ್ ಕುಮಾರ್ ಮಾತನಾಡಿದರು.

ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಜಿಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಕೆ.ಎಂ.ಗಾಯಿತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರ್‌ರಾಜ್, ಉಪವಿಭಾಗಾಧಿಕಾರಿ ಗೀತಾ ಹುಡೇದ, ಇತರೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಚಾಮರಾಜನಗರ, ಜು.11– ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿ ತಾಲೂಕಿನ ಸಂತೇಮರಹಳ್ಳಿ ಬಳಿಯ ಮೂಗೂರು ಕ್ರಾಸ್‌ನಿಂದ ಸಂತೇಮರಹಳ್ಳಿ, ಕುದೇರಿನಿಂದ ಮರಿಯಾಲ ರಸ್ತೆ ಅಭಿವೃದ್ಧಿ ಪಡಿಸುವ 18 ಕೋಟಿ ರೂ.ಗೂ ಅಧಿಕ ವೆಚ್ಚದ ಕಾಮಗಾರಿಗೆ ಸಚಿವ ವಿ.ಸೋಮಣ್ಣ ಇಂದು ಮೂಗೂರು ಕ್ರಾಸ್ ಬಳಿ ಗುದ್ದಲಿ ಪೂಜೆ ನೆರವೇರಿಸಿದರು.

ಇದೇ ವೇಳೆ ಮಾತನಾಡಿದ ಸಚಿವರು, ಮೂಗೂರು ಕ್ರಾಸ್‌ನಿಂದ ಸಂತೇಮರಹಳ್ಳಿ ಸೇರುವ ರಸ್ತೆ ಅಭಿವೃದ್ಧಿ ಯೋಜನೆಯಡಿ ಕೈಗೊಳ್ಳಲಾಗುತ್ತಿದೆ. ಕುದೇರು, ತೊರವಳ್ಳಿ, ಕಸ್ತೂರು, ಮರಿಯಾಲ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ನಡೆಸಲಾಗುತ್ತದೆ. ಕೆಲವು ಬಿಟ್ಟು ಹೋಗಿರುವ ಭಾಗಗಳನ್ನು ಸೇರ್ಪಡೆ ಮಾಡಿ ರಸ್ತೆ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಜಿಲ್ಲೆಯಲ್ಲಿ ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಮುಖ್ಯಮಂತ್ರಿಗಳು ಈ ನಿಟ್ಟಿನಲ್ಲಿ ಹೆಚ್ಚು ಒತ್ತು ನೀಡುತ್ತಿದ್ದಾರೆ. ಮುಂದಿನ ಜನವರಿಯೊಳಗೆ ಬಹುತೇಕ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಜಿಲ್ಲೆಯನ್ನು ಪ್ರಾಮಾಣಿಕವಾಗಿ ಅಭಿವೃದ್ಧಿಯತ್ತ ಕೊಂಡೊಯ್ಯುತ್ತಿದ್ದೇವೆ ಎಂದರು. ಶಾಸಕರಾದ ಎನ್.ಮಹೇಶ್ ಮಾತನಾಡಿದರು. ಜಿಪಂ ಸಿಇಓ ಕೆ.ಎಂ. ಗಾಯಿತ್ರಿ, ಲೋಕೋಪಯೋಗಿ ಇಲಾಖೆ ಇಇ ವಿನಯ್‌ಕುಮಾರ್ ಇನ್ನಿತರರು ಈ ಸಂದರ್ಭದಲ್ಲಿದ್ದರು.

ಆನೆ ಮಡುವಿನ ಕೆರೆಗೆ ನೀರು ತುಂಬಿಸುವಂತೆ ರೈತರ ಆಗ್ರಹ



ಚಾಮರಾಜನಗರ, ಜು.11(ಎಸ್‌ಎಸ್)–ತಾಲೂಕಿನ ಉಡಿಗಾಲ ಗ್ರಾಮ ಬಳಿ ಇರುವ ಆನೆ ಮಡುವಿನ ಕೆರೆಗೆ ಚಿಕ್ಕಮೋರಿ ಕಾಲುವೆ ಮುಖಾಂತರ ನೀರು ತುಂಬಿಸುವಂತೆ ಒತ್ತಾಯಿಸಿ ಉಡಿಗಾಲ ಗ್ರಾಮದಿಂದ ನಗರದ ಜಿಲ್ಲಾಡಳಿತ ಭವನಕ್ಕೆ ಮುತ್ತಿಗೆ ಹಾಕಲು ತೆರಳುತ್ತಿದ್ದ ಸಹಸ್ರಾರು ಜನರನ್ನು ಪೊಲೀಸರು ದಾರಿಮಧ್ಯೆ ತಡೆದರು.

ಆನೆ ಮಡುವಿನ ಕೆರೆಗೆ ಚಿಕ್ಕಮೋರಿ ಕಾಲುವೆ ಮೂಲಕ ನೀರು ಹಾಯಿಸಬೇಕು ಎಂದು ಒತ್ತಾಯಿಸಿ ಉಡಿಗಾಲ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಉಡಿಗಾಲ ಗ್ರಾಮದಲ್ಲಿ ಕಳೆದ 38 ದಿನಗಳಿಂದ ಅಹೋರಾತ್ರಿ ಧರಣಿ ನಡೆಸುತ್ತಿದ್ದರು. ಇದಕ್ಕೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸ್ಪಂದಿಸದ ಕಾರಣ ತಮ್ಮ ಪ್ರತಿಭಟನೆ ತೀವ್ರಗೊಳಿಸಿದ್ದು, ಸೋಮವಾರ ಜಿಲ್ಲಾಡಳಿತ ಭವನಕ್ಕೆ ಮುತ್ತಿಗೆ ಹಾಕಲು ನಿರ್ಧರಿಸಿದ್ದರು. ಅದರಂತೆ ಉಡಿಗಾಲ ಗ್ರಾಮದಲ್ಲಿ ಜಮಾಯಿಸಿದ ಸಹಸ್ರಾರು ಜನರು, ಟ್ರಾಕ್ಟರ್‌ಗಳು, ಎತ್ತಿನಗಾಡಿ ಹಾಗೂ ಆಟೋಗಳ ಮೂಲಕ ನಗರದತ್ತ ಹೊರಟರು. ಈ ವೇಳೆ ದಾರಿಮಧ್ಯೆ ಬಣ್ಣಾರಿ ದೇವಸ್ಥಾನದ ಸಮೀಪ ಬ್ಯಾರಿಕೇಟ್‌ಗಳನ್ನು ಹಾಕಿ ಜನರನ್ನು ಪೊಲೀಸರು ತಡೆದರು. ಈ ವೇಳೆ ಪ್ರತಿಭಟನಾಕಾರರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಇದರಿಂದ ರಸ್ತೆ ಸಂಚಾರ ಬಂದ್ ಆಗಿ ಪ್ರಯಾಣಿಕರು ಪರದಾಡಿದರು. ನಂತರ ಪೊಲೀಸರು ಪ್ರತಿಭಟನೆಯ ನೇತೃತ್ವ ವಹಿಸಿದ್ದ ಮುಖಂಡರೊಡನೆ ಜಿಲ್ಲಾ ಉಸ್ತುವಾರಿ ಸಚಿವರು ಮಾತುಕತೆ ನಡೆಸಲು ಅವಕಾಶ ಕಲ್ಪಿಸಿ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಪ್ರಯತ್ನಿಸಲಾಗುವುದು. ಶಾಂತಿ ಸುವ್ಯವಸ್ಥೆ ಕಾಪಾಡಲು ತಮ್ಮೊಂದಿಗೆ ಸಹಕರಿಸುವಂತೆ ಪೊಲೀಸರು ಮನವಿ ಮಾಡಿದರು. ಇದಕ್ಕೆ ರೈತರು ಸಮ್ಮತಿ ಸೂಚಿಸಿದರು.

ಈ ವೇಳೆ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಮುಖಂಡರಾದ ಪ್ರಭುಸ್ವಾಮಿ, ಸಿದ್ದೇಶ್, ನಾಗೇಂದ್ರಪ್ಪ, ಉತ್ತನಹಳ್ಳಿ ದೇವೇಂದ್ರ, ಸೋಮಶೇಖರ್, ಶಂಕರ್, ರವಿ, ನಾಗರಾಜು, ಬಸವರಾಜ್, ಮಂಜು ಸೇರಿದಂತೆ ಮಹಿಳೆಯರು ಅಸಂಖ್ಯಾತ ಸಂಖ್ಯೆಯಲ್ಲಿದ್ದರು.

ಕಾವೇರಿ ನದಿ ಪಾತ್ರದ ಗ್ರಾಮಗಳಿಗೆ ಡಿಸಿ ಭೇಟಿ



ಕೊಳ್ಳೇಗಾಲ, ಜು.11–ಕೃಷ್ಣರಾಜಸಾಗರ ಮತ್ತು ಕಬಿನಿ ಜಲಾನಯನ ಪ್ರದೇಶದಲ್ಲಿ ಭಾರೀ ಮಳೆಯಾಗುತ್ತಿದ್ದು, ಜಲಾಶಯಗಳಿಂದ ಹೆಚ್ಚು ನೀರನ್ನು ಕಾವೇರಿ ನದಿಗೆ ಬಿಡುತ್ತಿರುವ ಹಿನ್ನೆಲೆಯಲ್ಲಿ ಕೊಳ್ಳೇಗಾಲ ತಾಲೂಕು ವ್ಯಾಪ್ತಿಯ ಕಾವೇರಿ ನದಿ ಪಾತ್ರದ ಗ್ರಾಮಗಳಿಗೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಇಂದು ಭೇಟಿ ನೀಡಿ, ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಿದರು.

ನದಿ ಪಾತ್ರದಲ್ಲಿ ಬರುವ ಮುಳ್ಳೂರು, ಹಳೆಹಂಪಾಪುರ, ದಾಸನಪುರ, ಹಳೆಅಣಗಳ್ಳಿ, ಹರಳೆ, ಸರಗೂರು, ಧನಗೆರೆ, ಯಡಕುರಿಯ, ಸತ್ತೇಗಾಲ ಗ್ರಾಮಗಳಲ್ಲಿ ವಾಸಿಸುತ್ತಿರುವ ಜನರು ಮುಂಜಾಗ್ರತಾ ಕ್ರಮವಹಿಸಿ ಸಹಕರಿಸಬೇಕೆಂದು ಜಿಲ್ಲಾಧಿಕಾರಿ ಮನವಿ ಮಾಡಿದರು. ಗ್ರಾಮಗಳ ಜನರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿಯವರು ಜಿಲ್ಲಾಡಳಿತವು ವಿಪತ್ತು ಸಂದರ್ಭವನ್ನು ಎದುರಿಸಲು ಸನ್ನದ್ಧವಾಗಿದೆ ಎಂದರು. ಜನರಿಗೆ ಯಾವುದೇ ತೊಂದರೆಯಾಗದಿರಲು ಕಾವೇರಿ ನದಿ ಪಾತ್ರದಲ್ಲಿ ಬರುವ ದಾಸನಪುರ, ಮುಳ್ಳೂರು ಗ್ರಾಮಗಳಲ್ಲಿ ನದಿಯ ದಂಡೆಗೆ ಹೋಗುವ ಎಲ್ಲಾ ದಾರಿಗಳನ್ನು ತಾತ್ಕಾಲಿಕವಾಗಿ ಬಂದ್ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ಎಲ್ಲಾ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಪ್ರವಾಹ ಪೀಡಿತ ಗ್ರಾಮಗಳಲ್ಲಿ 24*7 ಕಾರ್ಯ ನಿರ್ವಹಿಸಲು ಜಿಲ್ಲಾಧಿಕಾರಿಗಳು ತಾಕೀತು ಮಾಡಿದರು. ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಡಿಸಿ ಎಸ್.ಕಾತ್ಯಾಯಿನಿದೇವಿ ಈ ಸಂದರ್ಭದಲ್ಲಿದ್ದರು.

ಜಮೀನಿನಲ್ಲಿ ಗಾಂಜಾ ಬೆಳೆದಿದ್ದ ವ್ಯಕ್ತಿ ಬಂಧನ

ಬೇಗೂರು, ಜು.11(ಕಿರಣ್)–ಜಮೀನಿನಲ್ಲಿ ಗಾಂಜಾ ಗಿಡ ಬೆಳೆದಿದ್ದ ವ್ಯಕ್ತಿಯನ್ನು ಪೊಲೀಸರು ಬಂಧಿಸಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಕಬ್ಬಹಳ್ಳಿ ಗ್ರಾಮದಲ್ಲಿ ಭಾನುವಾರ ನಡೆದಿದೆ. ಗ್ರಾಮದ ನಿವಾಸಿ ಮಣಿಕಂಠ(36) ಬಂಧಿತ ಆರೋಪಿ. ಈತ ತನ್ನ ಜಮೀನಿನಲ್ಲಿ ಅಕ್ರಮವಾಗಿ ಗಾಂಜಾ ಬೆಳೆದಿದ್ದ. ಖಚಿತ ಮಾಹಿತಿ ಮೇರೆಗೆ ಬೇಗೂರು ಪಿಎಸ್‌ಐ ಜಗದೀಶ್ ಧೂಳಶೆಟ್ಟಿ ನೇತೃತ್ವದಲ್ಲಿ ಪ್ರದೀಪ್, ಗಣೇಶ್, ನಾಗೇಂದ್ರ, ಶಿವಕುಮಾರ್ ದಾಳಿ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. ಬಂಧಿತನಿಂದ 2 ಕೆ.ಜಿ. 4 ಗಾಂಜಾ ಗಿಡ ವಶಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಈ ಸಂಬಂಧ ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನ್ಯಾ. ನಾಗಮೋಹನದಾಸ್ ವರದಿ ಜಾರಿಗೆ ಆಗ್ರಹಿಸಿ

ನಾಯಕ ಸಮುದಾಯದಿಂದ ಭಾರೀ ಪ್ರತಿಭಟನೆ



ಚಾಮರಾಜನಗರ, ಜು. 11(ಎಸ್‌ಎಸ್)– ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟ ಜಾತಿ ಮೀಸಲಾತಿ ಹೆಚ್ಚಳ ಮಾಡುವಂತೆ ನ್ಯಾ.ನಾಗಮೋಹನದಾಸ್ ಆಯೋಗ ಶಿಫಾರಸು ಮಾಡಿರುವ ವರದಿ ಜಾರಿಗೆ ಒತ್ತಾಯಿಸಿ ನಾಯಕ ಸಮಾಜದಿಂದ ಸೋಮವಾರ ನಗರದಲ್ಲಿ ಭಾರೀ ಪ್ರತಿಭಟನೆ ನಡೆಸಲಾಯಿತು.

ನಗರದ ಪ್ರವಾಸಿಮಂದಿರದ ಆವರಣದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು, ಅಲ್ಲಿಂದ ಮೆರವಣಿಗೆ ಹೊರಟು ದೊಡ್ಡಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ಡೀವಿಯೇಷನ್ ರಸ್ತೆ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ತಾಲೂಕು ನಾಯಕರ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಪು.ಶ್ರೀನಿವಾಸನಾಯಕ ಮಾತನಾಡಿ, ದಾವಣಗೆರೆ ಜಿಲ್ಲೆಯ ರಾಜನಹಳ್ಳಿ ವಾಲ್ಮೀಕಿ ಮಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ 152 ಧರಣಿ ನಡೆಸುತ್ತಿದ್ದಾರೆ. ಸರ್ಕಾರ ಮಾತ್ರ ಯಾವುದೇ ಕ್ರಮಕೈಗೊಂಡಿಲ್ಲ. ಅಲ್ಲದೆ ನ್ಯಾ.ನಾಗಮೋಹನ್‌ದಾಸ್ ವರದಿ ಜಾರಿಗೊಳಿಸುವಂತೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ 2 ವರ್ಷವಾಗಿದೆ. ಕೂಡಲೇ ಎಸ್ಸಿ, ಎಸ್ಟಿ ಜನಸಂಖ್ಯೆಗೆ ಅನುಗುಣವಾಗಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಹೆಚ್ಚಿಸಲು ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗ ವರದಿಯನ್ನು ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು. ಬಿಎಸ್‌ಪಿ ರಾಜ್ಯಾಧ್ಯಕ್ಷ ಎಂ.ಕೃಷ್ಣಮೂರ್ತಿ, ಮುಖಂಡ ಕೆಲ್ಲಂಬಳ್ಳಿ ಸೋಮನಾಯಕ ಮಾತನಾಡಿದರು.

ಸಹಸ್ರಾರು ಮಂದಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರಿಂದ ಜಿಲ್ಲಾಡಳಿತ ಭವನದ ಆವರಣ ಪ್ರತಿಭಟನಾಕಾರರಿಂದ ತುಂಬಿ ಸುಮಾರು 3 ಗಂಟೆಗಳ ಕಾಲ ಜನಜಂಗುಳಿ ಏರ್ಪಟ್ಟಿತ್ತು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಚಿವ ವಿ.ಸೋಮಣ್ಣ ಅವರು, 15 ದಿನಗೊಳಗೆ ಪ್ರತಿಭಟನಾ ಕಾರರ ಬೇಡಿಕೆ ಈಡೇರಿಸಲು ಸಭೆ ನಡೆಸಿ ತೀರ್ಮಾನಿಸುವುದಾಗಿ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ಕರ್ನಾಟಕ ಸ್ವಾಭಿಮಾನಿ ಎಸ್ಸಿ, ಎಸ್ಟಿ ಸಂಘಟನೆಗಳ ಒಕ್ಕೂಟ ಮತ್ತು ಮೀಸಲಾತಿ ಹೆಚ್ಚಳ ಕ್ರಿಯಾ ಸಮಿತಿ ವೀಕ್ಷಕ ಅಕರಲವಾಡಿ ನಾಗೇಂದ್ರ, ಜಿಪಂ ಮಾಜಿ ಅಧ್ಯಕ್ಷೆ ಶಿವಮ್ಮ ಕೃಷ್ಣ, ನಗರಸಭಾ ಮಾಜಿ ಅಧ್ಯಕ್ಷ ಸುರೇಶನಾಯಕ, ಜಿಪಂ ಮಾಜಿ ಸದಸ್ಯರಾದ ಎಸ್.ಸೋಮನಾಯಕ, ಕೊಪ್ಪಾಳಿ ಮಹದೇವನಾಯಕ, ತಾಪಂ ಮಾಜಿ ಅಧ್ಯಕ್ಷ ಹೆಚ್.ವಿ.ಚಂದ್ರು, ಮುಖಂಡರಾದ ಕಪನಿನಾಯಕ, ಕಂಡಕ್ಟರ್ ಚಾ.ಸಿ. ಸೋಮನಾಯಕ, ಮದ್ದೂರು ಸೋಮನಾಯಕ, ಮಹದೇವನಾಯಕ, ಕೃಷ್ಣನಾಯಕ, ಸಾವಿರಾರು ಮಂದಿ ಪ್ರತಿಭಟನೆಯಲ್ಲಿದ್ದರು.

ಮೈಸೂರು ಮಿತ್ರ ಮಂಗಳವಾರ 12 ಜುಲೈ 2022

ಒಂದನೇ ಪುಟದಿಂದ

ನಮಗೊಂದು ನಮ್ಮವರಿಗೊಂದು...!!

ಗೆಲ್ಲುವುದು ಸಹಜ. ಆದರೆ ಸವದತ್ತಿ ಕ್ಷೇತ್ರದಲ್ಲಿ ಪಕ್ಷ ಗೆಲ್ಲಬೇಕು ಎಂದರೆ ನಾನೇ ಹೋಗಿ ಸ್ಪರ್ಧಿಸಬೇಕು. ಸವದತ್ತಿ ಕ್ಷೇತ್ರದಲ್ಲಿ ಸ್ಪರ್ಧಿಸಲು ಟಿಕೆಟ್ ಕೊಡಿ.ಯಮಕನಮರಡಿ ವಿಧಾನಸಭಾ ಕ್ಷೇತ್ರದಲ್ಲಿ ನನ್ನ ಮಗಳಿಗೆ ಟಿಕೆಟ್ ಕೊಡಿ ಎಂದು ಜಾರಕಿಹೊಳಿ ವರಿಷ್ಠರಿಗೆ ಪಟ್ಟು ಹಿಡಿದಿದ್ದಾರೆ. ಮಾಜಿ ಸಚಿವ ಆರ್.ವಿ.ದೇಶಪಾಂಡೆ ಅವರು ತಮಗೆ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ, ನನ್ನ ಪುತ್ರ ಪ್ರಶಾಂತ್ ದೇಶಪಾಂಡೆಗೆ ಯಲ್ಲಾಪುರದ ಟಿಕೆಟ್ ನೀಡುವಂತೆ ನಾಯಕರಲ್ಲಿ ಮನವಿ ಮಾಡಿದ್ದಾರೆ.

ಮಾಜಿ ಸಚಿವ ಟಿ.ಬಿ.ಜಯಚಂದ್ರ ಅವರು ತಮಗೆ ತುಮಕೂರು ಜಿಲ್ಲೆಯ ಶಿರಾ ಕ್ಷೇತ್ರದಲ್ಲಿ ಟಿಕೆಟ್ ನೀಡುವುದರ ಜತೆಗೆ, ಚಿಕ್ಕನಾಯಕನಹಳ್ಳಿ ಕ್ಷೇತ್ರದಿಂದ ತಮ್ಮ ಪುತ್ರ ಸಂತೋಷ್ ಅವರಿಗೆ ಟಿಕೆಟ್ ನೀಡುವಂತೆ ಪಟ್ಟು ಹಿಡಿದಿದ್ದಾರೆ.

ಶಾಮನೂರು ಶಿವಶಂಕರಪ್ಪ ಅವರು ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರೂ ವಯಸ್ಸಿನ ಕಾರಣದಿಂದ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಪಕ್ಷ ಅವರಿಗೆ ಸಲಹೆ ನೀಡಿದೆ. ಆದರೆ ತಾವು ಬಿಟ್ಟು ಕೊಡುವ ಕ್ಷೇತ್ರದಲ್ಲಿ ತಮ್ಮ ಪುತ್ರ ಎಸ್.ಎಸ್.ಮಲ್ಲಿಕಾರ್ಜುನ ಅವರಿಗೆ ಟಿಕೆಟ್ ನೀಡಬೇಕು ಎಂದು ಪಟ್ಟು ಹಿಡಿದಿದ್ದಾರೆ. ಅಷ್ಟೇ ಅಲ್ಲ,ಇದರೊಂದಿಗೆ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ತಮ್ಮ ಸೊಸೆಗೆ ಟಿಕೆಟ್ ನೀಡುವಂತೆ ಹಟ ಹಿಡಿದಿದ್ದಾರೆ. ಈ ಮಧ್ಯೆ ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಅಥಣಿ ಕ್ಷೇತ್ರದಿಂದ ತಮ್ಮ ಪುತ್ರನಿಗೆ ಟಿಕೆಟ್ ನೀಡುವಂತೆ ಲಾಬಿ ಮಾಡುತ್ತಿದ್ದಾರೆ.

ಮೂಡಿಗೆರೆ ಕ್ಷೇತ್ರದಲ್ಲಿ ತಮ್ಮ ಬದಲಿಗೆ ಪುತ್ರಿ ನಯನಾ ಅವರಿಗೆ ಟಿಕೆಟ್ ನೀಡುವಂತೆ ವರಿಷ್ಠರನ್ನು ಹಿರಿಯ ನಾಯಕಿ ಶ್ರೀಮತಿ ಮೋಟಮ್ಮ ಕೋರಿದ್ದಾರೆ.

ಹೀಗೆ ಕಾಂಗ್ರೆಸ್‌ನಲ್ಲಿ ದೊಡ್ಡ ಪಟ್ಟಿಯೇ ಬೆಳೆದಿದೆ. ಹಲವು ನಾಯಕರು ತಮ್ಮ ಜತೆಗೆ ತಮ್ಮ ಮಗ ಇಲ್ಲವೇ ಮಗಳಿಗೆ ಅಥವಾ ಸೊಸೆಗೆ ಟಿಕೆಟ್ ನೀಡಬೇಕು ಎಂದೋ, ತಮ್ಮ ಬದಲಿಗೆ ತಮ್ಮ ಮಕ್ಕಳಿಗೆ ಟಿಕೆಟ್ ನೀಡುವಂತೆ ಪಟ್ಟು ಹಿಡಿದಿದ್ದು, ಆ ಮೂಲಕ ಟಿಕೆಟ್ ರಾಜಕೀಯ ದಿನ ದಿನಕ್ಕೂ ಬಿರುಸು ಪಡೆಯುತ್ತಿದೆ.

ಇಂದು ಮುಖ್ಯಮಂತ್ರಿ ಭೇಟಿ

ಹಾನಿಯಾಗಿ, ಚೆಸ್ಕಾಂ ಇಲಾಖೆಗೆ 9.80 ಲಕ್ಷ ರೂ. ನಷ್ಟವಾಗಿದೆ. ಜೂ.1ರಿಂದ ಜು.11ರ ವರೆಗೆ 84 ಮಂದಿಯನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರ ಮಾಡಲಾಗಿದ್ದು, 2 ಕಾಳಜಿ ಕೇಂದ್ರ ತೆರೆಯಲಾಗಿದೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರ ಮಾಹಿತಿ ನೀಡಿದೆ.

ಯಾವುದೇ ಪರಿಸ್ಥಿತಿಯನ್ನು ಎದುರಿಸುವ ನಿಟ್ಟಿನಲ್ಲಿ ಎನ್‌ಡಿಆರ್‌ಎಫ್ ತಂಡ ಕೊಡಗಿನಲ್ಲೇ ಬೀಡುಬಿಟ್ಟಿದೆ. ಅಲ್ಲದೆ ಭೂ ಕಂಪನ ಸಂಭವಿಸಿರುವ ಪ್ರದೇಶಗಳು ಹಾಗೂ ಈ ಹಿಂದೆ ದೊಡ್ಡ ಪ್ರಮಾಣದಲ್ಲಿ ನಡೆದಿದ್ದ ಭೂ ಕಂಪನ ಪ್ರದೇಶಗಳಿಗೆ ಎನ್‌ಡಿಆರ್‌ಎಫ್ ತಂಡ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದೆ. ಇಂದು ಕೂಡ ಎನ್‌ಡಿಆರ್‌ಎಫ್‌ನ 10ನೇ ಬೆಟಾಲಿಯನ್ ರಕ್ಷಣಾ ಸಿಬ್ಬಂದಿ, ಭಾರೀ ಮಳೆಯಾಗಿರುವ ಗಾಳಿಬೀಡು, ಮುಕ್ಕೋಡ್ಲು, ಸೂರ್ಲಬಿ ಹಾಗೂ ರಸ್ತೆ ಕುಸಿದಿರುವ ಮುಕ್ಕೋಡ್ಲು-ಅವಂಡಿ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಮಡಿಕೇರಿ ತಾಲೂಕು ವ್ಯಾಪ್ತಿಯ ಗಾಳಿಬೀಡುವಿನಲ್ಲಿ ಸೋಮವಾರ ಬೆಳಗೆ 7.45 ಗಂಟೆಗೆ ಕೊನೆಗೊಂಡಂತೆ 146.5 ಮಿ.ಮೀ. ಮಳೆಯಾಗಿದೆ. ಮುಕ್ಕೋಡ್ಲು-ಹೊದಕಾನ ಸಂಪರ್ಕ ಸೇತುವೆ ಹಾಗೂ ಭಗವತಿ ದೇವಾಲಯಕ್ಕೆ ತೆರಳುವ ತೂಗು ಸೇತುವೆ ಮುಳುಗಡೆಯಾಗುವ ಸ್ಥಿತಿಯಲ್ಲಿದೆ. ಹೊದಕಾನ ಸೇತುವೆಗೆ ಭಾರೀ ಪ್ರಮಾಣದ ಮರದ ದಿಮ್ಮಿಗಳು ಪ್ರವಾಹದಲ್ಲಿ ತೇಲಿ ಬಂದು ಬಡಿದಿರುವ ಪರಿಣಾಮ ಸೇತುವೆಗೆ ಭಾರೀ ಹಾನಿಯಾಗಿದೆ. ತಲಕಾವೇರಿ, ಭಾಗಮಂಡಲ ವ್ಯಾಪ್ತಿಯಲ್ಲಿ ಮಳೆಯ ತೀವ್ರತೆ ಕಡಿಮೆಯಾಗಿದ್ದು, ತ್ರಿವೇಣಿ ಸಂಗಮದಲ್ಲಿ ನೀರಿನ ಮಟ್ಟ ಇಳಿಕೆ ಯಾಗಿದ್ದು, ಪ್ರಸ್ತುತ ಸಂಗಮ ಪ್ರದೇಶ ಮುಳುಗಡೆಯಾಗಿದೆ. ಭಾಗಮಂಡಲ-ಅಯ್ಯಂಗೇರಿ ರಸ್ತೆಯಲ್ಲೂ ಪ್ರವಾಹದ ನೀರು ಇಳಿಕೆಯಾಗಿದೆ. ಸಂಪಾಜೆ ಅರೆಕಲ್ಲು, ತ್ಯಾಗತ್ತೂರು ಎಂಬಲ್ಲಿ ಭಾರೀ ಮರ ಬಿದ್ದು ವಿದ್ಯುತ್ ಸಂಪರ್ಕ ಕಡಿತವಾಗಿದ್ದು, ದುರಸ್ತಿ ಕಾರ್ಯ ಭರದಿಂದ ಸಾಗಿದೆ.

ಸುಂಟಿಕೊಪ್ಪ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಾರ್ಗಾಣೆ ಗ್ರಾಮದ 4 ಮನೆಗಳಿಗೆ ಮಳೆ ನೀರು ನುಗ್ಗಿದ್ದು, ಗೃಹೋಪಯೋಗಿ ವಸ್ತುಗಳಿಗೆ ಹಾನಿಯಾಗಿದೆ. ಗದ್ದೆಹಳ್ಳದ ಚೆಟ್ಟಳ್ಳಿ ರಸ್ತೆ ಮೇಲೆ ಮಳೆಯ ನೀರು ಹರಿಯುತ್ತಿದ್ದು ಪ್ರವಾಹದ ಭೀತಿ ಆವರಿಸಿದೆ. ನಾರ್ಗಾಣೆ ಗ್ರಾಮದ ನಬೀಸಾ, ಶಹೀದಾ, ಅಬೂಬಕರ್ ಮತ್ತಿತರರ ಮನೆಗಳಿಗೆ ನುಗ್ಗಿದ್ದು ಕೃಷಿ ಗದ್ದೆಗಳು ಜಲಾವೃತ್ತಗೊಂಡಿದೆ. ಏಕಾಏಕಿ ನೀರು ನುಗ್ಗಿರುವುದರಿಂದ ಮನೆಯಲ್ಲಿದ್ದ ಆಹಾರ ಧಾನ್ಯಗಳು, ಗೃಹಯೋಪಯೋಗಿ ವಸ್ತುಗಳಿಗೆ ಹಾನಿಯಾಗಿದೆ. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಿವಮ್ಮ, ಸದಸ್ಯರುಗಳಾದ ಪಿ.ಆರ್.ಸುನಿಲ್ ಕುಮಾರ್, ರಫೀಕ್‌ಖಾನ್, ಪಿ.ಎಫ್.ಸಬಾಸ್ಟೀನ್, ಮಂಜುಳ ಹಾಗೂ ಗೀತಾ ಇವರುಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ತೀವ್ರ ನಿಗಾ ವಹಿಸಲು ಸೂಚಿಸಿದ್ದಾರೆ. ಪಂಚಾಯಿತಿಯಿಂದ ಅಗತ್ಯ ನೆರವು ನೀಡುವುದಾಗಿ ತಿಳಿಸಿದ್ದಾರೆ.

ವಿರಾಜಪೇಟೆ ದಕ್ಕನಿ ಮೊಹಲ್ಲ ಎಂಬಲ್ಲಿ ಮನೆಯ ಹಿಂಭಾಗದಲ್ಲಿ ಅಲ್ಪ ಪ್ರಮಾಣದ ಭೂ ಕುಸಿತವಾಗಿದೆ. ಬಿರುನಾಣಿ ಬಕ್ಕೆರೆ ಎಂಬಲ್ಲಿ ನದಿ ಪ್ರವಾಹ ಮಟ್ಟದಲ್ಲಿ ಹರಿಯುತ್ತಿದೆ. ಸೇತುವೆ ಈ ಸ್ಥಳದಲ್ಲಿ ನೂತನ ಸೇತುವೆ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು, ಪ್ರವಾಹ ಎದುರಾಗುವ ಸಾಧ್ಯತೆ ಇದೆ. ಹೀಗಾಗಿ ಅಲ್ಲಿರುವ 3 ಕುಟುಂಬಗಳಿಗೆ ಪಂಚಾಯಿತಿ ವತಿಯಿಂದ 15 ದಿನಗಳಿಗೆ ಸಾಕಾಗುವಷ್ಟು ಆಹಾರ, ಔಷಧಿ ಮತ್ತಿತ್ತರ ವಸ್ತುಗಳನ್ನು ನೀಡಲಾಗಿದೆ. ತೋಮರದ ಶಾಲೆಯಲ್ಲಿ ತೆರೆಯಲಾಗಿರುವ ಕಾಳಜಿ ಕೇಂದ್ರಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಅಲ್ಲಿನ ವ್ಯವಸ್ಥೆಗಳನ್ನು ಪರಿಶೀಲಿಸಿದ್ದಾರೆ. ಈ ಕೇಂದ್ರದಲ್ಲಿ 13 ಕುಟುಂಬಗಳ 43 ಮಂದಿ ಆಶ್ರಯ ಪಡೆದಿದ್ದು, ವಿರಾಜಪೇಟೆ ಪಟ್ಟಣ ಪಂಚಾಯಿತಿಯಿಂದ ಆಹಾರ, ಔಷಧಿ ಸೇರಿದಂತೆ ದಿನಬಳಕೆ ವಸ್ತುಗಳನ್ನು ನೀಡಲು ದಾಸ್ತಾನು ಮಾಡಿಕೊಳ್ಳಲಾಗಿದೆ. ಕೊಯನಾಡು ಪ್ರವಾಹ ಸಂತ್ರಸ್ತರಿಗಾಗಿ ಕೊಯನಾಡುವಿನ ಗಣಪತಿ ದೇವಾಲಯದಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿದ್ದು, ಗಡಿ ಗ್ರಾಮವಾಗಿರುವ ಹಿನ್ನೆಲೆಯಲ್ಲಿ ಜಿಲ್ಲಾ ಆರೋಗ್ಯ ಇಲಾಖೆ ಅಧಿಕಾರಿ ಡಾ. ವೆಂಕಟೇಶ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸ್ಥಳದಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿಗಳನ್ನು ನೇಮಿಸಲಾಗಿದೆ. ಇದೀಗ ಜಿಲ್ಲೆಯಲ್ಲಿ ಮತ್ತೆ ಬಿರುಸಿನ ಮಳೆ ಮುಂದುವರೆಯುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಮಂಗಳವಾರ ಬೆಳಗ್ಗೆ 8.30ರವರೆಗೆ "ಆರೆಂಜ್ ಅಲರ್ಟ್" ಘೋಷಣೆ ಮಾಡಲಾಗಿದೆ. ಕೊಡಗಿನ ಗಡಿಯಲ್ಲಿರುವ ಕರಿಕೆ, ಚೆಂಬು, ಪೆರಾಜೆ ಗ್ರಾಮಗಳಲ್ಲಿ ಸೋಮವಾರ ಸಂಜೆ 4 ಗಂಟೆ ಸುಮಾರಿನಲ್ಲಿ ಮತ್ತೆ ಭಾರೀ ಶಬ್ದದೊಂದಿಗೆ ಭೂಮಿ ಕಂಪಿಸಿದೆ ಎಂದು ಅಲ್ಲಿನ ಗ್ರಾಮಸ್ಥರು ಮಾಹಿತಿ ನೀಡಿದ್ದಾರೆ. ಆದರೆ ಇಂದು ಭೂಕಂಪನವಾಗಿರುವುದನ್ನು ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರದ ಅಧಿಕಾರಿಗಳು ಅಲ್ಲಗಳೆದಿದ್ದಾರೆ.

ಸರಣಿ ಕಂಪನಗಳಿಂದ ಗ್ರಾಮೀಣ ಭಾಗದ ಜನರು ಕಂಗಾಲಾಗಿದ್ದಾರೆ. ಚೆಂಬು ಗ್ರಾಮ ವ್ಯಾಪ್ತಿಯಲ್ಲಿ ಸೋಮವಾರ ಬೆಳಗಿನ 8.30 ಗಂಟೆಗೆ ಕೊನೆಗೊಂಡಂತೆ 125.5 ಮಿ.ಮೀ ಮಳೆ ಸುರಿದಿದ್ದು, ಜೊತೆಯಲ್ಲೇ ಭೂ ಕಂಪಿಸಿರುವುದು ಗ್ರಾಮೀಣ ಜನರ ನಿದ್ದೆಗೆಡಿಸಿದೆ. ಭಾನುವಾರ ಬೆಳಗ್ಗೆ 6 ಗಂಟೆ 22 ನಿಮಿಷ 20 ಸೆಕೆಂಡ್‌ನಲ್ಲಿ ಚೆಂಬು, ಅರಂತೋಡು ಮತ್ತು ಸುತ್ತಲ ಪ್ರದೇಶಗಳಲ್ಲಿ ಕೆಲ ಕ್ಷಣ ಭೂಮಿ ಕಂಪಿಸಿತ್ತು. ರಿಕ್ಟರ್ ಮಾಪಕದಲ್ಲಿ ಕಂಪನದ ಪ್ರಮಾಣ 1.8ರಷ್ಟಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಕಳೆದ 21 ದಿನದಲ್ಲಿ ಕೊಡಗು ಮತ್ತು ಗಡಿ ಭಾಗದಲ್ಲಿ 9 ಬಾರಿ ಭೂಮಿ ಕಂಪಿಸಿದ್ದು, ಜನತೆಗೆ ತೀವ್ರ ಆತಂಕವನ್ನುಂಟುಮಾಡಿದೆ. ಈಗ ಸಂಭವಿಸಿರುವ ಭೂ ಕಂಪನಗಳಿಂದ ಆತಂಕ ಪಡಬೇಕಾಗಿಲ್ಲ ಎಂದು ಭೂ ವಿಜ್ಞಾನಿಗಳು ಅಭಯ ನೀಡುತ್ತಿದ್ದಾರೆ ಯಾದರೂ ಹಿಂದಿನ ದುರ್ಘಟನೆಗಳಿಂದಾಗಿ ಜನತೆ ಭಯ ಭೀತರಾಗಿದ್ದಾರೆ.

72 ಸಾವಿರ ಕ್ಯೂಸೆಕ್ ನೀರು ಬಿಡುಗಡೆ

ನದಿಗೆ ಬಿಡಲಾಗುತ್ತಿದ್ದು, ಪರಿಣಾಮ ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಹಳೇ ಸೇತುವೆ ಬಳಿಗೆ ಪ್ರವೇಶಿಸದಂತೆ ಪೊಲೀಸರು ಬ್ಯಾರಿಕೇಡ್ ಅಳವಡಿಸಿ ಬಂದೋಬಸ್ತ್ ಮಾಡಿದ್ದಾರೆ.

ಮೈದುಂಬಿ ಹರಿಯುತ್ತಿರುವ ಕಾವೇರಿಯ ಸೌಂದರ್ಯ ಕಣ್ತುಂಬಿಕೊಳ್ಳಲು ಮಳೆ ನಡುವೆಯೂ ಶ್ರೀರಂಗಪಟ್ಟಣ, ಪಶ್ಚಿಮ ವಾಹಿನಿ, ಗಂಜಾಂ ಬಳಿಯ ನಿಮಿಷಾಂಭ ದೇವಸ್ಥಾನ, ರಂಗನತಿಟ್ಟು ಪಕ್ಷಿಧಾಮದ ಬಳಿ ಜನರು ಹಾಗೂ ಪ್ರವಾಸಿಗರು ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದರು. ರಾತ್ರಿಯಾಗುತ್ತಿದ್ದಂತೆಯೇ ಕೆಆರ್‌ಎಸ್ ಅಣೆಕಟ್ಟೆಯ ನೀರು ಹೊರಬಿಡುತ್ತಿರುವ ಸ್ಥಳಕ್ಕೆ ವಿಶೇಷ ವಿದ್ಯುದ್ದೀಪಾಲಂಕಾರ ಮಾಡಿರುವುದರಿಂದ ವರ್ಣರಂಜಿತ ದೃಶ್ಯವನ್ನು ಸಾವಿರಾರು ಮಂದಿ ವೀಕ್ಷಿಸುತ್ತಿದ್ದಾರೆ. ಪ್ರತೀದಿನ ಸಂಜೆ 6.55ರಿಂದ ರಾತ್ರಿ 8 ಗಂಟೆವರೆಗೆ, ಶನಿವಾರ, ಭಾನುವಾರ ಹಾಗೂ ರಜಾ ದಿನಗಳಂದು ಸಂಜೆ 6.55ರಿಂದ ರಾತ್ರಿ 9 ಗಂಟೆವರೆಗೆ ವಿದ್ಯುದ್ದೀಪಾಲಂಕಾರ ಮಾಡಲಾಗಿದೆ. ಪ್ರವಾಸಿಗರ ಸಂಖ್ಯೆ ತೀರಾ ಕಡಿಮೆ ಇದ್ದ ದಿನಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ದಿನಗಳಲ್ಲೂ ವಿದ್ಯುದ್ದೀಪಾಲಂಕಾರ ಮಾಡಲಾಗಿದೆ ಎಂದು ಕಾವೇರಿ ನೀರಾವರಿ ನಿಗಮ ನಿಯಮಿತದ ಅಧಿಕಾರಿಗಳು ತಿಳಿಸಿದ್ದಾರೆ.

ಮಾವ, ಅಳಿಯ ಸಾವು

ಕುಳಿತಿದ್ದ ಮೋಹನ್ ಹಾಗೂ ಚಾಲನೆ ಮಾಡುತ್ತಿದ್ದ ವಿನೋದ್‌ಕುಮಾರ್ ತೀವ್ರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟರು. ಘಟನೆಯಿಂದ ಗಾಯಗಳಾಗಿ ನರಳುತ್ತಿದ್ದ ಮೂವರನ್ನು ಸಾರ್ವಜನಿಕರೇ ಮೈಸೂರಿನ ಕೆಆರ್ ಆಸ್ಪತ್ರೆಗೆ ಕರೆತಂದು ದಾಖಲಿಸಿದರು.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಬಿಳಿಕೆರೆ ಠಾಣೆ ಇನ್ಸ್‌ಪೆಕ್ಟರ್ ಚಿಕ್ಕಸ್ವಾಮಿ ಹಾಗೂ ಸಿಬ್ಬಂದಿ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡು, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಇಂದು ಸಂಜೆ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ದೇಹವನ್ನು ವಾರಸುದಾರರಿಗೆ ಒಪ್ಪಿಸಿದರು. ಇನ್ನೋವಾ ಕಾರಿನಲ್ಲಿದ್ದ ಐವರು ಸಣ್ಣಪುಟ್ಟ ಗಾಯಗಳಿದಂದ ಪಾರಾಗಿದ್ದಾರೆ. ಎರಡೂ ಕಾರುಗಳನ್ನು ವಶಕ್ಕೆ ಪಡೆದಿರುವ ಪೊಲೀಸರು, ತನಿಖೆ ನಡೆಸುತ್ತಿದ್ದಾರೆ.

ಮೈಸೂರು ತಾಲೂಕಿನ ಬಗರ್‌ಹುಕುಂ

ಸಾಗುವಳಿದಾರರಿಗೆ ಹಕ್ಕುಪತ್ರಕ್ಕೆ ಆಗ್ರಹಿಸಿ ಪ್ರತಿಭಟನೆ

ಮೈಸೂರು,ಜು.11(ಪಿಎಂ)- ಮೈಸೂರು ತಾಲೂಕಿನ ಬಗರ್‌ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ವಿತರಿಸಬೇಕು ಹಾಗೂ ಹಂಗಾಮಿ ಸಾಗುವಳಿ ಚೀಟಿ ಹೊಂದಿರುವ ರೈತರ ಭೂಮಿಯನ್ನು ಸರ್ವೆ ಮಾಡಿ ಪೋಡ್ ಮತ್ತು ದುರಸ್ತಿಗೆ ಕ್ರಮ ವಹಿಸಬೇಕೆಂದು ಆಗ್ರಹಿಸಿ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ (ಎಐಕೆಕೆಎಂಎಸ್) ವತಿಯಿಂದ ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.



ಮೈಸೂರಿನಲ್ಲಿ ಸೋಮವಾರ ಎಐಕೆಕೆಎಂಎಸ್ ವತಿಯಿಂದ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯದಲ್ಲಿ ಸುಮಾರು 70-80 ವರ್ಷಗಳಿಂದ ಭೂಹೀನ ಮತ್ತು ಕೃಷಿ ಕಾರ್ಮಿಕರು ಕಂದಾಯ ಹಾಗೂ ಅರಣ್ಯದ ಕುರುಚಲು ಗಿಡ, ಕಲ್ಲು ಭೂಮಿ ಇರುವ ಪ್ರದೇಶದಲ್ಲಿ ತಮ್ಮ ಜೀವನೋಪಾಯಕ್ಕಾಗಿ ಸಾಗುವಳಿ ಮಾಡುತ್ತಿದ್ದಾರೆ. ಬಹುಪಾಲು ರೈತರಿಗೆ ಇದರಿಂದ ಬರುವ ಅಲ್ಪಸ್ವಲ್ಪ ವರಮಾನವೇ ಜೀವನಾಧಾರವಾಗಿದೆ. ಮೈಸೂರು ತಾಲೂಕು ವ್ಯಾಪ್ತಿಗೆ ಸಂಬಂಧಿಸಿದಂತೆ ಜಯಪುರ ಮತ್ತು ಇಲವಾಲ ಹೋಬಳಿಯ ರೈತರ ಪರಿಸ್ಥಿತಿಯು ಸಾಗುವಳಿ ಹಕ್ಕುಪತ್ರ ಇಲ್ಲದೆ ತುಂಬಾ ಶೋಚನೀಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಲ್‌ಜಿಸಿ (ಭೂ ಮಂಜೂರಾತಿ ಸಮಿತಿ) ಸಮಿತಿ ಅಧ್ಯಕ್ಷರು (ಕ್ಷೇತ್ರದ ಶಾಸಕರು) ತುರ್ತಾಗಿ ಸಮಿತಿ ಸಭೆ ಕರೆದು ಸಾಗುವಳಿಗೆ ಅರ್ಜಿ ಹಾಕಿರುವ ರೈತರಿಗೆ ತಕ್ಷಣ ಹಕ್ಕುಪತ್ರವನ್ನು ನೀಡಬೇಕು. ಭೂ ಮಂಜೂರಾತಿ ಸಮಿತಿಯಿಂದ ಹಲವು ರೈತರಿಗೆ ಈಗಾಗಲೇ ಮಂಜೂರಾತಿ ಪತ್ರ ನೀಡಿದ್ದು, ಅಂತಹ ರೈತರ ಭೂಮಿಯನ್ನು ಸರ್ವೆ ಮಾಡಿ, ದುರಸ್ತಿ ಮತ್ತು ಪೋಡ್ ಮಾಡಲು ಶೀಘ್ರ ಕ್ರಮ ಕೈಗೊಂಡು ಅವರಿಗೆ ಖಾಯಂ ಹಕ್ಕುಪತ್ರ ನೀಡಬೇಕು ಎಂದು ಒತ್ತಾಯಿಸಿದರು.

ಅರಣ್ಯದಂಚಿನಲ್ಲಿ ಸಾಗುವಳಿ ಮಾಡುತ್ತಿರುವ ರೈತರ ಭೂಮಿಯು ಅರಣ್ಯ ಇಲಾಖೆಗೆ ಸೇರಿದ್ದೆಂದು ಅರಣ್ಯಾಧಿಕಾರಿಗಳು ಕಿರುಕುಳ ನೀಡುತ್ತಿದ್ದಾರೆ. ಇದನ್ನು ತಪ್ಪಿಸಿ, ಈ ರೈತರಿಗೆ ಖಾಯಂ ಸಾಗುವಳಿ ಪತ್ರವನ್ನು ನೀಡಬೇಕು. ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ರೈತರಿಗೆ ಸರ್ಕಾರಿ ಸೌಲಭ್ಯಗಳು, ಬ್ಯಾಂಕ್ ಸಾಲ ಸೇರಿದಂತೆ ಇತರೇ ಸೌಲಭ್ಯ ನೀಡಬೇಕೆಂದು ಸರ್ಕಾರ ಆದೇಶಿಸಬೇಕು ಎಂದು ಒತ್ತಾಯಿಸಿದರು.

ರಾಮಸ್ವಾಮಿ ವೃತ್ತದಿಂದ ಜೆಎಲ್‌ಬಿ ರಸ್ತೆ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ವೃತ್ತ (ಮೆಟ್ರೋಪೋಲ್ ವೃತ್ತ), ವಿನೋಬಾ ರಸ್ತೆಯಲ್ಲಿ ಸಾಗಿದ ಪ್ರತಿಭಟನಾ ಮೆರವಣಿಗೆಯು, ಜಲದರ್ಶಿನಿ ಅತಿಥಿಗೃಹ ಆವರಣದಲ್ಲಿರುವ ಶಾಸಕ ಜಿ.ಟಿ.ದೇವೇಗೌಡ ಅವರ ಕಚೇರಿ ಎದುರು ಜಮಾವಣೆಗೊಂಡಿತು. ಬಳಿಕ ಕೆಲಕಾಲ ಇಲ್ಲಿ ಪ್ರತಿಭಟನೆ ನಡೆಸಿ, ಶಾಸಕರಿಗೆ ಮನವಿ ಸಲ್ಲಿಸಿ, ಪ್ರತಿಭಟನೆ ಅಂತ್ಯಗೊಳಿಸಲಾಯಿತು.

ಎಐಕೆಕೆಎಂಎಸ್ ರಾಜ್ಯ ಉಪಾಧ್ಯಕ್ಷ ಶಿವಪ್ರಕಾಶ್, ಜಿಲ್ಲಾ ಸಂಘಟಕ ಹೆಚ್.ಎಂ.ಬಸವರಾಜು, ರೈತರಾದ ಪಾಪೇಗೌಡ, ಬಸವೇಗೌಡ, ಪ್ರವೀಣ್, ಹುಚ್ಚೇಗೌಡ, ಮಹದೇವಸ್ವಾಮಿ, ಸೋಮೇಗೌಡ, ಚಂದ್ರು, ಶ್ರೀಧರ್ ರಾಜೇಅರಸ್, ಮಲ್ಲಪ್ಪ, ರಾಮಣ್ಣ, ಚಂದ್ರೇಗೌಡ, ಕರೀಗೌಡ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

6 ಆಗಸ್ಟ್ ತಿಂಗಳಲ್ಲಿ ಸಾಗುವಳಿ ಪತ್ರ ನೀಡಲಾಗುವುದು ಹಾಗೂ ಹಂಗಾಮಿ ಸಾಗುವಳಿ ಚೀಟಿ ನೀಡಿರುವ ರೈತರ ಜಮೀನನ್ನು ಇನ್ನೊಂದು ತಿಂಗಳಲ್ಲಿ ದುರಸ್ತಿ ಮತ್ತು ಪೋಡ್ ಮಾಡಿಸಲು ಕ್ರಮ ವಹಿಸಲಾಗುವುದು ಎಂದು ಮನವಿ ಸ್ವೀಕರಿಸಿದ ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದ್ದಾರೆ. ಅಲ್ಲದೆ ಉಳಿದ ಇತರೆ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಶಾಸಕರು ಭರವಸೆ ನೀಡಿದ್ದಾರೆ.

-ಹೆಚ್.ಎಂ.ಬಸವರಾಜು
ಎಐಕೆಕೆಎಂಎಸ್ ಜಿಲ್ಲಾ ಸಂಘಟಕ

ಜು.15ರಿಂದ ಕನ್ನಡ ವಿಜ್ಞಾನ ನಾಟಕೋತ್ಸವ



ಮೈಸೂರು, ಜು.11(ಆರ್‌ಕೆಬಿ)- ವಿಜ್ಞಾನ ಸತ್ಯಗಳನ್ನು ಜನರ ಹತ್ತಿರ ಕೊಂಡೊಯ್ಯುವ ನಿಟ್ಟಿನಲ್ಲಿ ವಿವಿಧ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಜು.15 ರಿಂದ 17 ರವರೆಗೆ ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂಟಪದಲ್ಲಿ ಕನ್ನಡ ವಿಜ್ಞಾನ ನಾಟಕೋತ್ಸವ ಆಯೋಜಿಸಲಾಗಿದೆ ಎಂದು ಮೈಸೂರು ವಿಜ್ಞಾನ ಟ್ರಸ್ಟ್ ಅಧ್ಯಕ್ಷ ಶಶಿಧರ ಡೋಂಗ್ರೆ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಾಟಕೋತ್ಸವದ ಅಂಗವಾಗಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಹಯೋಗದೊಡನೆ ವಿಜ್ಞಾನ ನಾಟಕ ರಚಿಸುವುದಕ್ಕೆ ಸಂಬಂಧಿಸಿದಂತೆ ಲೇಖಕರಿಗೆ ಎರಡು ದಿನಗಳ ವಿಶೇಷ ತರಬೇತಿ ಶಿಬಿರವನ್ನೂ ಆಯೋಜಿಸಲಾಗಿದೆ ಎಂದರು.

ಜು.15 ರಂದು ಕಲಾಸುರುಚಿ ತಂಡದಿಂದ ಎರಡನೇ ಭಾಸ್ಕರಾಚಾರ್ಯ ಅವರು ರಚಿಸಿರುವ ಭಾರತೀಯ ಗಣಿತ ತಜ್ಞಾದ ಲೀಲಾವತಿ, 16 ರಂದು ಬೊಂಬೆಮನೆ ತಂಡದಿಂದ ಐನ್‌ಸ್ಟೈನ್ ಜೀವನ ಆಧರಿಸಿದ ನಾಟಕ, 17 ರಂದು ಅರಿವು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ತಂಡದಿಂದ ನೊಬೆಲ್ ಪ್ರಶಸ್ತಿ ವಿಜೇತ ವಿಜ್ಞಾನ ಅಬ್ದುಸ್ ಸಲಾಮ್ ಅವರ ಬದುಕು ಮತ್ತು ಸಾಧನೆ ಆಧರಿಸಿದ ನಾಟಕ ಪ್ರದರ್ಶನಗೊಳ್ಳಲಿವೆ. ವಿಜ್ಞಾನ ಲೇಖಕ ನಾಗೇಶ್ ಹೆಗಡೆ ನಾಟಕೋತ್ಸವಕ್ಕೆ ಚಾಲನೆ ನೀಡುವರು. ವಿಜ್ಞಾನ ಪ್ರಸಾರ್ ಸಂಸ್ಥೆಯ ಮುಖ್ಯ ವಿಜ್ಞಾನಿ ಡಾ.ಟಿ.ವಿ. ವೆಂಕಟೇಶ್ವರನ್ ವಿಶೇಷ ಅತಿಥಿಗಳಾಗಿ ಭಾಗವಹಿಸುವರು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕೊಳ್ಳೇಗಾಲ ಶರ್ಮ, ಡಾ.ಎಂ.ಸಿ.ಮನೋಹರ್, ಮಾಧವ ಖರೆ ಉಪಸ್ಥಿತರಿದ್ದರು.

ಪೋರ್ಚುಗಲ್‌ಗೆ ನೀಡಿದ ವಾಗ್ದಾನದಂತೆ ಅಬು ಸಲೇಂನನ್ನು ಬಿಡುಗಡೆ ಮಾಡಿ


ಕೇಂದ್ರಕ್ಕೆ ಸುಪ್ರೀಂಕೋರ್ಟ್ ಸೂಚನೆ

ನವದೆಹಲಿ: 1993ರ ಮುಂಬೈ ಬಾಂಬ್ ಸ್ಫೋಟ ಪ್ರಕರಣದ ದೋಷಿ ಅಬು ಸಲೇಂ 25 ವರ್ಷ ಜೈಲು ಶಿಕ್ಷೆ ಪೂರ್ಣಗೊಂಡ ಬಳಿಕ ಬಿಡುಗಡೆ ಮಾಡಬೇಕು ಎಂದು ಸುಪ್ರೀಂಕೋರ್ಟ್ ಕೇಂದ್ರ ಸರ್ಕಾರಕ್ಕೆ ಹೇಳಿದೆ. 2002 ರಲ್ಲಿ ಪೋರ್ಚುಗಲ್ ಸರ್ಕಾರಕ್ಕೆ ನೀಡಿದ ವಾಗ್ದಾನಕ್ಕೆ ಗೌರವ ನೀಡಬೇಕು. ವಾಗ್ದಾನ ನೀಡಿದಂತೆ 25 ವರ್ಷಗಳ ಜೈಲು ಶಿಕ್ಷೆಯ ಅವಧಿ ಪೂರ್ಣಗೊಂಡ ಬಳಿಕ ಬಿಡುಗಡೆ ಮಾಡಬೇಕು ಎಂದು ನ್ಯಾ. ಎಸ್.ಕೆ.ಕೌಲ್ ಮತ್ತು ಎಂಎಂ ಸುಂದರೇಶ್ ಅವರಿದ್ದ ಪೀಠ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ. ಶಿಕ್ಷೆ ಮುಗಿದ 1 ತಿಂಗಳ ಒಳಗಡೆ ಸಂಬಂಧಿಸಿದ ದಾಖಲೆಗಳನ್ನು ಕಳುಹಿಸಬೇಕು ಎಂದು ಕೋರ್ಟ್ ಹೇಳಿದೆ. ತನ್ನ ಕಕ್ಷಿದಾರರ ಶಿಕ್ಷೆ ಅವಧಿಯನ್ನು ಯಾವುದೇ ಕಾರಣಕ್ಕೂ ವಿಸ್ತರಿಸಬಾರದು ಎಂದು ಸಲೇಂ ಪರ ವಕೀಲರು ಕೋರ್ಟ್‌ನಲ್ಲಿ ವಾದಿಸಿದ್ದರು. ಈ ವಾದವನ್ನು ಕೋರ್ಟ್ ಪುರಸ್ಕರಿಸಿದೆ. ಆದರೆ ತನ್ನನ್ನು ಪೋರ್ಚುಗಲ್‌ಗೆ ಹಸ್ತಾಂತರವನ್ನು ರದ್ದುಗೊಳಿಸುವಂತೆ ಕೋರಿ ಸಲೇಂ ಮಾಡಿದ ಮನವಿಯನ್ನು ಕೋರ್ಟ್ ವಜಾಗೊಳಿಸಿದೆ. ಮುಂಬೈ ಮೂಲದ ಬಿಲ್ಡರ್ ಪ್ರದೀಪ್ ಜೈನ್ ಮತ್ತು ಚಾಲಕನ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ಟಾಡಾ ನ್ಯಾಯಾಲಯ 2015ರ ಫೆ. 25 ರಂದು ಸಲೇಂಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಭಾರತಕ್ಕೆ ಹಸ್ತಾಂತರಿಸುವಾಗ ತನ್ನ ಶಿಕ್ಷೆಯ ಅವಧಿಯು 25 ವರ್ಷ ಮೀರುವುದಿಲ್ಲ ಎಂದು ಕೇಂದ್ರ ಸರ್ಕಾರ ಪೋರ್ಚುಗಲ್‌ಗೆ ತಿಳಿಸಿತ್ತು.



ಭೂಮಿ ಕಳೆದುಕೊಂಡ ಅರಣ್ಯದಂಚಿನ ರೈತರಿಗೆ ಪರಿಹಾರಕ್ಕೆ ಒತ್ತಾಯ

ಮೈಸೂರು, ಜು.11- ಅರಣ್ಯದಂಚಿನಲ್ಲಿರುವ ರೈತರ ಜಮೀನುಗಳು ಪಟ್ಟ, ಇನಾಮು, ಡಿಸಿ, ದರ್ಖಾಸ್‌ಗಳಿಂದ ಮಂಜೂರಾಗಿದ್ದರೂ ಸಹ ಅರಣ್ಯ ಇಲಾಖೆಯವರು ವಶಪಡಿಸಿಕೊಂಡಿರುವುದು ಸರಿಯಾದ ಕ್ರಮವಲ್ಲ. ಕೂಡಲೇ ಸರ್ಕಾರ ಮಧ್ಯಪ್ರವೇಶಿಸಿ, ರೈತರಿಗೆ ಬೇರೆ ಭೂಮಿ ಅಥವಾ ಪರಿಹಾರವನ್ನು ನೀಡಬೇಕೆಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಸರ್ಕಾರವನ್ನು ಒತ್ತಾಯಿಸಿದರು.



ಚಾಮರಾಜನಗರ ಜಿಲ್ಲೆ ಶ್ರೀ ವೀರಭದ್ರೇಶ್ವರ ರೈತ ಹೋರಾಟ ಸಮಿತಿಯ ಗಂಗವಾಡಿ, ದಾಸನದೊಡ್ಡಿ, ಯರಗಂಬಳ್ಳಿ, ಮಸಣ ಪುರ, ಕೋಮಾರನಪುರ, ಗಣಿಗನೂರು, ಚಂಗಾಚಳ್ಳಿ ಹಾಗೂ ಯಳಂದೂರು ಪಟ್ಟಣದ ರೈತರಿಗೆ ಸೇರಿದ ಸುಮಾರು 350 ಎಕರೆ ಜಮೀನನ್ನು ಅರಣ್ಯ ಇಲಾಖೆಯವರು ಹುಲಿ ಸಂರಕ್ಷಿತ ಯೋಜನೆಗೆ ಒಳಪಟ್ಟಿದೆ ಎಂದು ವಶಪಡಿಸಿಕೊಂಡಿದ್ದಾರೆ. ಇತ್ತ ಭೂಮಿಯೂ ಇಲ್ಲದೇ, ಪರಿಹಾರವೂ ಇಲ್ಲದೇ ಜೀವನ ನಡೆಸುವುದೇ ಕಷ್ಟಕರವಾಗಿದೆ. ನಮಗೆ ಪರಿಹಾರ ಕೊಡಿಸಿಕೊಡಿ ಎಂದು ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಮಾತನಾಡಿದ ಮಂಜೇಗೌಡರು, ಸರ್ಕಾರ ರೈತರಿಗೆ ಬೇರೆ ಭೂಮಿಯನ್ನು ಕೊಡಬೇಕು ಇಲ್ಲ ಪರಿಹಾರವನ್ನಾದರೂ ಕೊಡಬೇಕು. ನಾನು ಅರಣ್ಯ ಸಚಿವರು ಹಾಗೂ ಸರ್ಕಾರದೊಂದಿಗೆ ಮಾತನಾಡಿ ಸೂಕ್ತ ಪರಿಹಾರ ದೊರಕಿಸಿಕೊಡುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡ ಅಪ್ಪೆಸ್ ಶ್ರೀನಿವಾಸ್ ಹಾಜರಿದ್ದರು.

ವಿಶ್ವ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್


94 ವರ್ಷದ ಅಥ್ಲೀಟ್ ಭಗವಾನ್ ದೇವಿಗೆ ಚಿನ್ನದ ಪದಕ!

ನವದೆಹಲಿ: ಇವರಿಗೆ ವಯಸ್ಸಿನ ಹಂಗಿಲ್ಲ, ಸಾಧನೆಗೆ ಇಳಿವಯಸ್ಸಿನ ಅಡ್ಡಿ ಎದುರಾಗಲಿಲ್ಲ. ಎಲ್ಲರೂ ಬಾಯಿಯ ಮೇಲೆ ಕೈಯಿಟ್ಟು ನೋಡುವಂತಹ ಇಡೀ ದೇಶ ಮೆಚ್ಚುವ ಸಾಧನೆ ಮಾಡಿತೋರಿಸಿದ್ದಾರೆ. ಅವರೇ 94 ವರ್ಷದ ಭಗವಾನ್ ದೇವಿಯವರು. ದಕ್ಷಿಣ ಫಿನ್‌ಲ್ಯಾಂಡ್‌ನ ಟಂಪರೆಯಲ್ಲಿ ನಡೆದ ವಿಶ್ವ ಮಾಸ್ಟರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ 100 ಮೀಟರ್ ಓಟ ಸ್ಪರ್ಧೆಯಲ್ಲಿ 24.74 ಸೆಕೆಂಡುಗಳಲ್ಲಿ ಓಡಿ ದಾಖಲೆ ನಿರ್ಮಿಸಿ ಚಿನ್ನದ ಪದಕ ಗಳಿಸಿದ್ದಾರೆ. ಇನ್ನು ಶಾಟ್ ಪುಟ್ ಪಂದ್ಯದಲ್ಲಿ ಸಹ ಕಂಚಿನ ಪದಕ ಗಳಿಸಿದ್ದಾರೆ.



ರಾಷ್ಟ್ರೀಯ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗಳು ಚೆನ್ನೈನಲ್ಲಿ ನಡೆದಿದ್ದವು. ಭಗವಾನ್ ದೇವಿ ಅವರು 2022ರ ವಿಶ್ವ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಪರವಾಗಿ ಸ್ಪರ್ಧಿಸುವ ಅರ್ಹತೆಗಳಲ್ಲಿ ತೇರ್ಗಡೆ ಹೊಂದಿ ದೇಶಕ್ಕಾಗಿ ಪ್ರಶಸ್ತಿಗಳನ್ನು ಗೆದ್ದು ತಂದಿದ್ದಾರೆ.

ಪಶು ವೈದ್ಯಕೀಯ ಪ್ರಾಧ್ಯಾಪಕ ಮನೆಯಲ್ಲಿ ಕಳವು



ಮೈಸೂರು, ಜು.11- ವೆಟರ್ನರಿ ಕಾಲೇಜಿನ ಅಸೋಸಿಯೇಟ್ ಪ್ರೊಫೆಸರ್ ಮನೆಯ ಬಾಗಿಲು ಮೀಟಿ, ಚಿನ್ನಾಭರಣ, ಲ್ಯಾಪ್‌ಟಾಪ್ ಕಳವು ಮಾಡಿರುವ ಘಟನೆ ಮೈಸೂರಿನ ವಿಜಯನಗರ 4ನೇ ಹಂತದಲ್ಲಿ ನಡೆದಿದೆ. ಹಾಸನದ ವೆಟರ್ನರಿ ಕಾಲೇಜಿನ ಅಸೋಸಿಯೇಟ್ ಪ್ರೊಫೆಸರ್ ಆಗಿರುವ ರವಿಕುಮಾರ್ (43) ಅವರು ವಿಜಯನಗರ 4ನೇ ಹಂತದಲ್ಲಿ ವಾಸವಿದ್ದು, ಜು.4ರಂದು ಅನಾರೋಗ್ಯದಿಂದಿದ್ದ ತಾಯಿಯನ್ನು ಸಹೋದರಿ ಮನೆಯಲ್ಲಿ ಬಿಟ್ಟು ವಿಜಯನಗರ 2ನೇ ಹಂತದಲ್ಲಿರುವ ಮಾವನ ಮನೆಯಲ್ಲೇ ಇವರು ವಾಸ್ತವ್ಯವಿದ್ದು, ಅಲ್ಲಿಂದ ಹಾಸನಕ್ಕೆ ಹೋಗಿಬರುತ್ತಿದ್ದರು. ಜು.8ರಂದು ರಾತ್ರಿ ತಮ್ಮ ಮನೆಗೆ ಅವರು ಬಂದಾಗ ಮನೆಯ ಹಿಂಬಾಗಿಲು ಮೀಟಿರುವುದು ಕಂಡುಬಂದಿದೆ. ಖದೀಮರು ಅವರ ರೂಂನ ಬೀರುವನ್ನು ಮೀಟಿ ಚಿನ್ನದ ಉಂಗುರ, ಬೆಳ್ಳಿ ಪದಾರ್ಥ, ಮನೆಗೆ ಸಂಬಂಧಿಸಿದ ದಾಖಲಾತಿಗಳು, 2 ಲ್ಯಾಪ್‌ಟಾಪ್ ಹಾಗೂ 2 ಕ್ಯಾಮರಾಗಳನ್ನು ಕಳವು ಮಾಡಿದ್ದಾರೆ. ಈ ಸಂಬಂಧ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಲ್ಲಿ ಹೈಟೆಕ್ ವೇಶ್ಯಾವಾಟಿಕೆ

ಮೂವರ ವಿರುದ್ಧ ಪ್ರಕರಣ ದಾಖಲು | ನಾಲ್ವರು ಯುವತಿಯರ ರಕ್ಷಣೆ | ಸಿನಿಮೀಯ ರೀತಿ ಕಾರ್ಯಾಚರಣೆ



ದಾಳಿಗೊಳಗಾದ ವೇಶ್ಯಾವಾಟಿಕೆ ಮನೆ



ರಕ್ಷಿಸಲ್ಪಟ್ಟ ಯುವತಿಯರು

ಮೈಸೂರು, ಜು.11- ಮೈಸೂರು ನಗರ ಮತ್ತು ಜಿಲ್ಲಾ ಪೊಲೀಸರು ಒಡನಾಡಿ ಸೇವಾ ಸಂಸ್ಥೆ ಸಹಕಾರದೊಂದಿಗೆ ಮೈಸೂರು ಹೊರವಲಯದ ಹೈಟೆಕ್ ವೇಶ್ಯಾವಾಟಿಕೆ ಅಡ್ಡೆ ಮೇಲೆ ದಾಳಿ ನಡೆಸಿ, ಐವರನ್ನು ವಶಕ್ಕೆ ಪಡೆದು, ನಾಲ್ವರು ಯುವತಿಯರನ್ನು ರಕ್ಷಿಸಿದ್ದಾರೆ. ಈ ಸಂಬಂಧ ಆಲನಹಳ್ಳಿ ಠಾಣೆಯಲ್ಲಿ ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ.

ವಿವರ: ಮೈಸೂರು ನಗರದ ಹೊರವಲಯದಲ್ಲಿರುವ ಶಾಂತವೇರಿ ಗೋಪಾಲಗೌಡ ಬಡಾವಣೆಯಲ್ಲಿ ಮನೆಯೊಂದನ್ನು ಬಾಡಿಗೆಗೆ ಪಡೆದಿದ್ದ ಅಂತರರಾಜ್ಯ ದಂಧೆಕೋರರು ಹೈಟೆಕ್ ವೇಶ್ಯಾವಾಟಿಕೆ ನಡೆಸುತ್ತಿದ್ದಾರೆ ಎಂಬ ಮಾಹಿತಿ ಕಳೆದ 15 ದಿನದ ಹಿಂದೆ ಒಡನಾಡಿ ಸೇವಾ ಸಂಸ್ಥೆಗೆ ಲಭಿಸಿತ್ತು.

ವೇಶ್ಯಾವಾಟಿಕೆ ನಡೆಯುತ್ತಿದ್ದ ಮನೆಯ ಸುತ್ತ ಬೇರೆ ಯಾವುದೇ ಮನೆಗಳಿರಲಿಲ್ಲ. ಅಲ್ಲದೆ ಆ ಮನೆಗೆ ಸರಿಯಾದ ಸಂಪರ್ಕ ರಸ್ತೆಯೂ ಇರಲಿಲ್ಲ. ಒಂದು ವೇಳೆ ಮಾಹಿತಿ

ಪೊಲೀಸರು, ಒಡನಾಡಿಯಿಂದ ಬಯಲು

ಪಡೆದು ದಾಳಿ ನಡೆಸಲು ಪೊಲೀಸರು ಬಂದರೆ ದೂರದಿಂದಲೇ ಅವರನ್ನು ಕಾಣಬಹುದಾಗಿದ್ದು, ದಂಧೆಕೋರರು ಪರಾರಿಯಾಗಲು ಈ ಮನೆ ಅನುಕೂಲಕರವಾಗಿತ್ತು.

ಈ ಹಿನ್ನೆಲೆಯಲ್ಲಿ ಒಡನಾಡಿ ಸೇವಾ ಸಂಸ್ಥೆ ಕಾರ್ಯಕರ್ತರು ಕಟ್ಟಡ ಕಾರ್ಮಿಕರಂತೆ ಸಮೀಪದಲ್ಲೇ ನಡೆಯುತ್ತಿದ್ದ ಮನೆಯೊಂದರ ನಿರ್ಮಾಣ ಕಾಮಗಾರಿ ನಡೆಸುತ್ತಿದ್ದ ಕಾರ್ಮಿಕರ ಜೊತೆ ಸೇರಿ ದಂಧೆ ನಡೆಯುತ್ತಿರುವ ವಿಧಾನವನ್ನು ಗಮನಿಸುತ್ತಿದ್ದರು. ಈ ಮನೆಗೆ ಹೆಚ್ಚಾಗಿ ಹೊರ ರಾಜ್ಯದವರೇ ಬರುತ್ತಿದ್ದರು ಎಂದು ಹೇಳಲಾಗಿದ್ದು, ಗ್ರಾಹಕರನ್ನು ದಂಧೆಕೋರರೇ ತಮ್ಮ ದ್ವಿಚಕ್ರ ವಾಹನ ಅಥವಾ ಆಟೋದಲ್ಲಿ ಕರೆತಂದು ಮತ್ತೆ ವಾಪಸ್ಸು ಕರೆದೊಯ್ಯುತ್ತಿದ್ದರು.

ಆನ್‌ಲೈನ್ ಮೂಲಕವೇ ಗ್ರಾಹಕರ ಸಂಪರ್ಕ ಸಾಧಿಸುತ್ತಿದ್ದ ದಂಧೆಕೋರರು ಅವರನ್ನು ಬಂಡಿಪಾಳ್ಯ ಅಥವಾ ದೇವೇಗೌಡ ಸರ್ಕಲ್ ಬಳಿಗೆ ಕರೆಸಿ, ಅಲ್ಲಿಂದ ತಮ್ಮ ವಾಹನದಲ್ಲಿ ಮನೆಗೆ ಕರೆತರುತ್ತಿದ್ದರು. ಗ್ರಾಹಕರು ಬರುವ ಮುನ್ನವೇ ಆನ್‌ಲೈನ್ ಮೂಲಕ ಹಣವನ್ನು ದಂಧೆಕೋರರಿಗೆ ಪಾವತಿಸುತ್ತಿದ್ದರು ಎಂಬ ವಿಷಯಗಳನ್ನು ಸಂಗ್ರಹಿಸಲಾಗಿತ್ತು.

ಸಂಪೂರ್ಣ ಮಾಹಿತಿ ಸಂಗ್ರಹಿಸಿದ ಒಡನಾಡಿ ಸೇವಾಸಂಸ್ಥೆಯ ಸ್ಟ್ಯಾನ್ಲಿ ಮತ್ತು ಪರಶು ಅವರು ಜಿಲ್ಲಾ ಎಸ್ಪಿ ಚೇತನ್ ಅವರನ್ನು ಸಂಪರ್ಕಿಸಿ ಈ ಮನೆಯ ಮೇಲೆ ದಾಳಿಗೆ ದಿನಾಂಕ ನಿಗದಿಪಡಿಸಿದ್ದರು. ಅದರಂತೆ ಜು.8ರಂದು ಜಿಲ್ಲಾ ಮಾನವ ಸಾಗಾಣಿಕೆ ನಿಗ್ರಹ ದಳದ ಇನ್ಸ್‌ಪೆಕ್ಟರ್ ಶ್ರೀಮತಿ ಮಮತಾ ನೇತೃತ್ವದ ತಂಡ ವೇಶ್ಯಾವಾಟಿಕೆ ನಡೆಯುತ್ತಿದ್ದ ಮನೆಯ ಮೇಲೆ ಕ್ಷಿಪ್ರ ಕಾರ್ಯಾಚರಣೆ ನಡೆಸಿದರು. ಈ ವೇಳೆ ಪ್ರಮುಖ ದಂಧೆಕೋರ ಕಾಂಪೌಂಡ್ ಹಾರಿ ಪರಾರಿಯಾಗಲು ಯತ್ನಿಸಿದಾಗ ಆತನನ್ನು ಒಡನಾಡಿಯ ಸ್ಟ್ಯಾನ್ಲಿ ಮತ್ತು ಶಶಾಂಕ್ ಬೆನ್ನತ್ತಿ ಹಿಡಿದಿದ್ದರು.

ಈ ಮನೆಯು ಈ ಹಿಂದೆ ಜಿಲ್ಲಾ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿದ್ದು, ಈಗ ಆಲನಹಳ್ಳಿ ಠಾಣೆ ವ್ಯಾಪ್ತಿಗೆ ಒಳಪಟ್ಟಿರುವ ಕಾರಣ ಆಲನಹಳ್ಳಿ ಪೊಲೀಸರನ್ನು ಕೂಡ ಕಾರ್ಯಾಚರಣೆಗೆ ಬಳಸಿಕೊಳ್ಳಲಾಗಿತ್ತು. ದಂಧೆ ನಡೆಸುತ್ತಿದ್ದ ಚೇತನ್, ದಸ್ತಗಿರ್, ಅಶೋಕ್ ಹಾಗೂ ಇಬ್ಬರು ಗ್ರಾಹಕರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡು ಮೂವರು ದಂಧೆಕೋರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಪಂಜಾಬ್, ಅಸ್ಸಾಂ ಮತ್ತು ಕರ್ನಾಟಕದ ನಾಲ್ವರು ಯುವತಿಯರನ್ನು ರಕ್ಷಿಸಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಮೈಸೂರು ಜಿಲ್ಲೆ ಮತ್ತು ನಗರ ಪೊಲೀಸರೊಂದಿಗೆ ಒಡನಾಡಿಯ ಸ್ಟ್ಯಾನ್ಲಿ, ಪರಶು, ಪ್ರದೀಪ್, ಶಶಾಂಕ್, ಸುಜನಾ, ಸುಮಾ, ಮಹಾಲಕ್ಷ್ಮೀ, ಮಹೇಂದ್ರ ಮತ್ತು ಯತಿನ್ ಭಾಗವಹಿಸಿದ್ದರು ಎಂದು ಒಡನಾಡಿಯ ಸ್ಟ್ಯಾನ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ
ಮಂಗಳವಾರ 12 ಜುಲೈ 2022

ಹುಣಸೂರು ತಾಲೂಕಿನಾದ್ಯಂತ ವ್ಯಾಪಕ ಮಳೆ ಹಿನ್ನೆಲೆ: ಮನೆ ಹಾನಿ

ಸಂತ್ರಸ್ತ ಕುಟುಂಬಗಳಿಗೆ ತಾತ್ಕಾಲಿಕ ಪರಿಹಾರ ನೀಡಿ

ಅಧಿಕಾರಿಗಳಿಗೆ ಶಾಸಕ ಹೆಚ್.ಪಿ.ಮಂಜುನಾಥ್ ಸೂಚನೆ



ಹುಣಸೂರು, ಜು.11(ಕೆಕೆ)– ಕೊಡಗು, ಮಲೆನಾಡಿನಂತೆ ತಾಲೂಕಿನಲ್ಲಿ ಕಳೆದ ಒಂದು ವಾರದಿಂದ ವ್ಯಾಪಕ ಮಳೆ ಹಿನ್ನೆಲೆಯಲ್ಲಿ ನಗರ ಸೇರಿದಂತೆ ಗ್ರಾಮೀಣ ಭಾಗದಲ್ಲಿ ಹಾನಿಗೊಳಗಾಗಿರುವ ಮನೆಗಳ ಕುಟುಂಬಗಳಿಗೆ ತಾತ್ಕಾಲಿಕ ಪರಿಹಾರ ನೀಡುವಂತೆ ಅಧಿಕಾರಿಗಳಿಗೆ ಶಾಸಕ ಹೆಚ್.ಪಿ. ಮಂಜುನಾಥ್ ಸೂಚಿಸಿದರು.

ತಾಲೂಕಿನಲ್ಲಿ ಮಳೆ ಹಾನಿಗೊಳಗಾಗಿರುವ ಪ್ರದೇಶಗಳಿಗೆ ಸೋಮವಾರ ಅಧಿಕಾರಿಗಳೊಂದಿಗೆ ಭೇಟಿ ನೀಡಿದ ಶಾಸಕರು, ಸಂಜೆ ತಾಲೂಕು ಕಚೇರಿಯಲ್ಲಿ ತುರ್ತು ಸಭೆ ನಡೆಸಿ ಪರಿಹಾರೋಪಾದಿ ಕಾರ್ಯಗಳ ಬಗ್ಗೆ ಚರ್ಚಿಸಿದರು. ಸಭೆಯಲ್ಲಿ ಮಾತನಾಡಿದ ಅವರು, ಇದೇ ರೀತಿ ಇನ್ನೂ 4 ದಿನಗಳು ಮಳೆ ಸತತವಾಗಿ ಸುರಿದರೆ ಅಳಿದುಳಿದ ಮನೆಗಳು ಕುಸಿಯುವ ಸಾಧ್ಯತೆ ಇದ್ದು, ಸಾವುನೋವು ಸಂಭವಿಸಬಹುದು. ಅದಕ್ಕೆ ಅವಕಾಶ ಕೊಡದೆ ಆರ್‌ಐ, ವಿಎಗಳು ಹಾಗೂ ಪಿಡಿಓಗಳು ಪರಿಶೀಲಿಸಿ ಹಾನಿಗೆ ಒಳಗಾಗುವ ಮನೆಗಳನ್ನು ಗುರುತಿಸಿ ಮನೆಯ ಸದಸ್ಯರನ್ನು ಸ್ಥಳಾಂತರಿಸುವಂತೆ ತಾಕೀತು ಮಾಡಿದರು.

ಪ್ರಕೃತಿ ವಿಕೋಪದ ಯಾವುದೇ ಸಮಸ್ಯೆಗಳಿಗೆ ಈಗಿನ ಸರ್ಕಾರ ಸೂಕ್ತ ಪರಿಹಾರ ನೀಡದೆ ಮೀನಾಮೇಷ ಎಣಿಸುತ್ತಿದೆ. ಜನರ ಸಂಕಷ್ಟ ಕಂಡು ಅಧಿಕಾರಿಗಳು ಮೂಕರಾಗದೇ ನನ್ನ ಗಮನಕ್ಕೆ ತನ್ನಿ. ಸೂರು ಕಳೆದುಕೊಂಡವರಿಗೆ ವೈಕತ್ತಿಕವಾಗಿ ಯಾದರೂ ಸೂರು ಕಲ್ಪಿಸಿಕೊಡುವ ಮೂಲಕ ಸರ್ಕಾರದ ಕಣ್ಣು ತೆರೆಸೋಣ ಎಂದರು.

ಕೆರೆ, ಕಟ್ಟೆಗಳು ಈ ಬಾರಿ ಸಂಪೂರ್ಣವಾಗಿ ತುಂಬಿರುವುದರಿಂದ ಕೆರೆ ನೀರು ಏರಿ ಮೇಲೆ ಹರಿದರೆ ಬೆಳೆ ಹಾನಿ ಸಂಭವಿಸಲಿದೆ. ಅಧಿಕಾರಿಗಳು ಈ ಬಗ್ಗೆ ಹೆಚ್ಚು ಗಮನ ಹರಿಸಿ ಮುಂಜಾಗ್ರತೆ ಕೈಗೊಳ್ಳಬೇಕು. ಅದರ ನಿರ್ವಹಣೆ ಜವಾಬ್ದಾರಿ ಗ್ರಾಪಂ ನಿರ್ವಹಿಸಬೇಕಿದೆ. ಅಲ್ಲದೆ ನಾಲೆಯಲ್ಲಿ ಬೆಳೆದಿರುವ ಜಂಗಲ್ ಕಟಾವಿಗೆ ಕ್ರಮ ಕೈಗೊಳ್ಳಿ ಎಂದು ಸಲಹೆ ನೀಡಿದರು.

ಅಧಿಕ ಮಳೆಯಿಂದ ನಷ್ಟ: ತಾಲೂಕಿನಲ್ಲಿ ಜನವರಿಯಿಂದ ಜುಲೈವರೆಗೆ 328 ಮಿ.ಮಿ ವಾಡಿಕೆ ಮಳೆಯಾಗಬೇಕಿದ್ದು, ಆದರೆ ಇಲ್ಲಿವರೆಗೆ 583 ಮಿ.ಮಿ. ಮಳೆಯಾಗಿದ್ದು, ವಾಡಿಕೆಗಿಂತ 2 ಪಟ್ಟು ಮಳೆಯಾಗಿರುವುದರಿಂದ ಭೂಮಿ ತೇವಾಂಶ ಹೆಚ್ಚಾಗಿ ಮಳೆಯಿಂದಾಗಿ ತೇವಾಂಶ ಹೆಚ್ಚಾಗಿ ಬೆಳೆಗಳು ಶೀತಕ್ಕೆ ಒಳಗಾಗಿವೆ. ಹೀಗೆ ಮಳೆ ಮುಂದುವರೆದರೆ ರೈತರು ನಷ್ಟ ಅನುಭವಿಸಲಿದ್ದಾರೆ ಎಂದ ಅವರು, ದ್ವಿದಳ ಧಾನ್ಯ ಫಸಲಿಗೆ ನೀರು ತುಂಬಿಕೊಂಡರೇ ರೈತರು ಕೂಡಲೇ ಕೃಷಿ ಕೇಂದ್ರಗಳನ್ನು ಸಂಪರ್ಕಿಸಿ. ನಿಮ್ಮ ಸಮಸ್ಯೆಗೆ ಸೂಕ್ತ ಪರಿಹಾರ ನೀಡ ಲಾಗುವುದು ಎಂದರು.

508 ಮನೆಗಳ ಗೋಡೆ ಕುಸಿದು, ಈ ಪೈಕಿ 82 ಮನೆಗಳು ಸಂಪೂರ್ಣ ಕುಸಿದಿದ್ದು, ಸಾಕಷ್ಟು ನಷ್ಟ ಸಂಭವಿಸಿದೆ ಎಂದು ಶಾಸಕರು ಮಾಹಿತಿ ನೀಡಿದರು.

ಅಧಿಕಾರಿಗಳಿಗೆ ಸರ್ಕಾರದ ಆರ್‌ಡಿಪಿಆರ್ ಸ್ಪಂದಿಸುತ್ತಿಲ್ಲ. ಅಧಿಕಾರಿಗಳೊಂದಿಗೆ ನಾವು ಗ್ರಾಮಗಳಿಗೆ ಹೋದರೆ ಜನರು ನಮ್ಮನ್ನು ಸುಮ್ಮನೆ ಬಿಡುವುದಿಲ್ಲ. ಗ್ರಾಮೀಣ ಪರಿಸ್ಥಿತಿ ನಿಭಾಯಿಸುವುದು ಕಷ್ಟವಾಗಿದೆ. ಇದು ನಮ್ಮ ಸರ್ಕಾರದ ಆಡಳಿತ ವ್ಯವಸ್ಥೆ ಎಂದು ಅಸಮಾಧಾನ ಹೊರ ಹಾಕಿದರು.

ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ನೋಟಿಸ್: ಕಳೆದ ಒಂದು ವರ್ಷದಿಂದ ನಿವೃತ್ತಿ ನೆಪ ಹೇಳಿ ಯಾವುದೇ ಸಭೆ, ಕಾರ್ಯಕ್ರಮಗಳಿಗೆ ಹಾಜರಾಗದ ಜಿಪಂ ಗ್ರಾಮೀಣಾಭಿವೃದ್ಧಿ ಸಹಾಯಕ ಕಾರ್ಯಪಾಲ ಅಭಿಯಂತರ ಪ್ರಭಾಕರ್ ಅವರಿಗೆ ನೋಟಿಸ್ ನೀಡಲಾಗಿದೆ ಎಂದು ಶಾಸಕರು ಸಭೆಗೆ ತಿಳಿಸಿದರು.

ಕೃಷಿ ಇಲಾಖೆ ಸಹಾಯಕ ನಿರ್ದೇಶಕ ವೆಂಕಟೇಶ್ ಮಾತನಾಡಿ, ಮಳೆಯಿಂದ ತಾಲೂಕಿನಲ್ಲಿ ಬೆಳೆ ಹಾನಿ ಸಂಭವಿಸಿರುವ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ. ತಾಲೂಕಿನಲ್ಲಿ 12600 ಹೆಕ್ಟೇರ್ ಪ್ರದೇಶದಲ್ಲಿ ರೈತರು ತಂಬಾಕು ಬೆಳೆದಿದ್ದು, 56 ಎಕರೆ ಪ್ರದೇಶದಲ್ಲಿ ಬಾಳೆ ಬೆಳೆದಿದ್ದು, ನಿರಂತರ

ಸಭೆಯಲ್ಲಿ ತಹಸೀಲ್ದಾರ್ ಡಾ. ಅಶೋಕ್, ನಗರಸಭೆ ಪೌರಾಯುಕ್ತ ಕೆ.ಪಿ.ರವಿಕುಮಾರ್, ಕೃಷಿ ಸಹಾಯಕ ನಿರ್ದೇಶಕ ವೆಂಕಟೇಶ್, ಆರ್‌ಐ ನಂದೀಶ್ ಹಾಗೂ ಇನ್ನಿತರ ಅಧಿಕಾರಿಗಳಿದ್ದರು.

ಮಳೆ ಹಾನಿ ಪ್ರದೇಶಗಳಿಗೆ ಶಾಸಕರ ಭೇಟಿ, ಪರಿಶೀಲನೆ




ಹನಗೋಡು, ಜು.11(ಮಹೇಶ್)– ಮಳೆಯಿಂದ ಹಾನಿಗೊಳಗಾದ ಇಲ್ಲಿನ ಕಿರಂಗೂರು, ಭರತವಾಡಿ ಹಾಗೂ ದೊಡ್ಡಹೆಜ್ಜೂರು ಗ್ರಾಮಗಳಿಗೆ ಶಾಸಕ ಹೆಚ್.ಪಿ.ಮಂಜುನಾಥ್ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೆಲ ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ಕಿರಂಗೂರು, ಭರತವಾಡಿ ಹಾಗೂ ದೊಡ್ಡಹೆಜ್ಜೂರು ಗ್ರಾಮದ ಬಡಾವಣೆಗಳಲ್ಲಿ ಕೆಲವು ಮನೆಗಳ ಗೋಡೆ ಕುಸಿತಕ್ಕೊಳಗಾಗಿದ್ದ ಹಿನ್ನಲೆಯಲ್ಲಿ ಶಾಸಕರು ಭೇಟಿ ನೀಡಿದ್ದರು. ಈ ವೇಳೆ ಮಳೆಯಿಂದಾಗಿ ಮನೆಗಳ ಗೋಡೆಗಳು ಬಿರುಕು ಬಿಟ್ಟಿವೆ. ಅವು ಕುಸಿದರೆ ನಾವು ವಾಸಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ, ಬಿರುಕು ಬಿಡುತ್ತಿರುವ ಮನೆಗಳನ್ನು ದುರಸ್ತಿ ಪಡಿಸಬೇಕು. ಹೊಸದಾಗಿ ಮನೆ ಮಂಜೂರು ಮಾಡಿ ಕೊಡಬೇಕು' ಎಂದು ನಿವಾಸಿಗಳು ಶಾಸಕರಿಗೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಹೆಚ್.ಪಿ.ಮಂಜುನಾಥ್, ಕೆಲ ದಿನಗಳಿಂದ ಸುರಿಯುತ್ತಿರುವ ಮಳೆ ಕಾರಣ ಮನೆಗಳ ಗೋಡೆ ಕುಸಿದು ಜನರು ಸಂಕಷ್ಟದಲ್ಲಿದ್ದಾರೆ. ಮನೆ ಇಲ್ಲದವರ ಪಟ್ಟಿ ತಯಾರಿಸಿ ಶೀಘ್ರ ಮನೆ ನಿರ್ಮಿಸಿ ಕೊಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಕುಸಿದಿರುವ ಮನೆಗಳಿಗೆ ಪರಿಹಾರ ದೊರಕಿಸಿ ಕೊಡಲಾಗುವುದು ಎಂದು ನಿವಾಸಿಗಳಿಗೆ ಭರವಸೆ ನೀಡಿದ ಅವರು, ಅಧಿಕಾರಿಗಳು ವಿಳಂಬ ಮಾಡದೇ, ಆದಷ್ಟು ಬೇಗ ಪರಿಹಾರ ನೀಡಲು ಕ್ರಮ ವಹಿಸಬೇಕು ಎಂದು ಸ್ಥಳದಲ್ಲಿದ್ದ ತಹಸೀಲ್ದಾರ್ ಅಶೋಕ್, ತಾಪಂ ಇಓ ಮನು ಕುಮಾರ್‌ಗೆ ಸೂಚಿಸಿದರು. ತೀವ್ರ ಹಾನಿಗೊಳಗಾದ ಮನೆಗಳ ನಿವಾಸಿಗಳಿಗೆ ಶಾಸಕರು ವೈಯಕ್ತಿಕ ಪರಿಹಾರ ನೀಡಿದರು. ಈ ವೇಳೆ ಉಪತಹಸೀಲ್ದಾರ್ ಚೆಲುವರಾಜು, ರಾಜಸ್ವ ನಿರೀಕ್ಷಕ ಪ್ರಶಾಂತ್ ರಾಜ್ ಅರಸ್, ಪಿಡಿಓಗಳು, ಗ್ರಾಮಸ್ಥರು ಹಾಗೂ ಮುಖಂಡರು ಉಪಸ್ಥಿತರಿದ್ದರು.

ಮೈದುಂಬಿದ ಕಪಿಲೆ: ಪ್ರವಾಹ ಭೀತಿ

- ತಾಲೂಕು ಆಡಳಿತದಿಂದ ಕಟ್ಟೆಚ್ಚರ
- ಭಕ್ತರ ಪುಣ್ಯಸ್ನಾನಕ್ಕೆ ನಿರ್ಬಂಧ
- ಸ್ನಾನಘಟ್ಟ ಬಳಿ ಪೊಲೀಸರ ನಿಯೋಜನೆ
- ವಿವಿಧೆಡೆ ಭತ್ತದ ಫಸಲು ನೀರು ಪಾಲು




ನಂಜನಗೂಡು, ಜು.11– ಕಬಿನಿ ಜಲಾಶಯದಿಂದ ಸೋಮವಾರ 38 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಬಿಟ್ಟಿರುವುದರಿಂದ ಕಪಿಲಾ ನದಿ ಮೈದುಂಬಿ ಹರಿಯುತ್ತಿದ್ದು, ಪ್ರವಾಹದ ಭೀತಿ ಎದುರಾಗಿದೆ. ಹೀಗಾಗಿ ನದಿ ಪಾತ್ರದಲ್ಲಿ ಯಾವುದೇ ಅನಾಹುತ ಸಂಭವಿಸದಂತೆ ತಾಲೂಕು ಆಡಳಿತ ಕಟ್ಟೆಚ್ಚರ ವಹಿಸಿದೆ.

ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿರುವುದರಿಂದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಸ್ನಾನಘಟ್ಟ ನೀರು ಹರಿಯುತ್ತಿದ್ದು, ಪರಶುರಾಮ ದೇವಾಲಯ, ಮಲ್ಲನಮೂಲೆ ಗುರುಕಂಬಳೀಶ್ವರ ಮಠದವರೆಗೂ ನೀರು ಬಂದಿದ್ದು, ಪಾರಂಪರಿಕ ಹದಿನಾರು ಕಾಲು ಮಂಟಪ ಭಾಗಶಃ ಮುಳುಗಡೆಯಾಗಿದೆ. ಸುತ್ತೂರು ಮಠದ ಸ್ನಾನಘಟ್ಟದ ಸೋಪಾನ ಕಟ್ಟೆ ಮೇಲೂ ನೀರು ಹರಿಯುತ್ತಿದೆ ಪವಾಡ ಪುರುಷ ಶ್ರೀಮಹದೇವ ತಾತಾ ಐಕ್ಯಸ್ಥಳ ಸಂಗಮ ಕ್ಷೇತ್ರದವರೆಗೂ ನೀರು ಬಂದಿದೆ. ನದಿ ಪಾತ್ರದಲ್ಲಿ ಭಕ್ತರ ಪುಣ್ಯ ಸ್ನಾನಕ್ಕೆ ನಿರ್ಬಂಧ ವಿಧಿಸಲಾಗಿದೆ ಸ್ನಾನಘಟ್ಟದ ಸುತ್ತ ಬ್ಯಾರಿಕೇಡ್ ಅಳವಡಿಸಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ. ಧ್ವನಿವರ್ಧಕದ ಮೂಲಕ ನದಿ ಹತ್ತಿರ ತೆರಳದಂತೆ ಎಚ್ಚರಿಕೆ ನೀಡಲಾಗುತ್ತಿದೆ.

ನದಿಪಾತ್ರದ ಕತ್ವಾಡಿಪುರ, ಕುಳ್ಳಂಕಯ್ಯನ ಹುಂಡಿ, ಹೆಜ್ಜಿಗೆ, ಬೊಕ್ಕಹಳ್ಳಿ, ಹಳ್ಳದಕೇರಿ, ಸರಸ್ವತಿ ಕಾಲೋನಿ ಸೇರಿದಂತೆ ಬಹುತೇಕ ಕಡೆ ಮುನ್ನಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ. ಅಚ್ಚುಕಟ್ಟು ಪ್ರದೇಶಗಳಲ್ಲಿ ರೈತರು ಕೃಷಿ ಕಾರ್ಯ ಕೈಗೊಳ್ಳದಂತೆ ಗ್ರಾಮ ಮಟ್ಟದಲ್ಲಿ ಎಚ್ಚರಿಕೆ ನೀಡಲಾಗುತ್ತಿದೆ. ನದಿ ತೀರದಲ್ಲಿ ಬೀಡುಬಿಟ್ಟಿದ್ದ ಮೀನುಗಾರರಿಗೆ ಸುರಕ್ಷಿತ ಸ್ಥಳಗಳಲ್ಲಿ ತೆರಳುವಂತೆ ಸೂಚಿಸಲಾಗಿದೆ. ಪ್ರವಾಹ ಹೆಚ್ಚಾದರೆ ಮುಳು ಗಡೆಯಾಗುವ ಪ್ರದೇಶಗಳ ನಿವಾಸಿಗಳಿಗೆ ನಗರದ 4 ಕಲ್ಯಾಣ ಮಂಟಪಗಳಲ್ಲಿ ಕಾಳಜಿ ಕೇಂದ್ರ ತೆರೆಯಲು ತಾಲೂಕು ಆಡಳಿತ ಸಿದ್ಧತೆ ಮಾಡಿಕೊಂಡಿದೆ.

ಫಸಲು ನಾಶ: ತಾಲೂಕಿನ ಸುತ್ತೂರು, ಬೊಕ್ಕಹಳ್ಳಿ, ಮುಳ್ಳೂರು, ಕುಳ್ಳಂಕನ ಹುಂಡಿ, ಕತ್ವಾಡಿಪುರ ಗ್ರಾಮಗಳ ನದಿಯಂಚಿನ ನೂರಾರು ಎಕರೆಗೆ ಪ್ರದೇಶದಲ್ಲಿ ಕಟಾವಿಗೆ ಬಂದಿದ್ದ ಭತ್ತದ ಫಸಲು ಮುಳುಗಿದೆ. ಅಲ್ಲದೆ ನಗರ್ಲೆ, ಸರಗೂರು, ಸುತ್ತೂರು, ಬಿಳುಗಲಿ ಸೇರಿದಂತೆ ಮುಳುಗಡೆಯಾಗ ಬಹುದಾದ ಪ್ರದೇಶಗಳಿಗೆ ಕೃಷಿ ಸಹಾಯಕ ನಿರ್ದೇಶಕ ದೀಪಕ್ ಜೊತೆ ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ, ಮುಂಜಾಗ್ರತಾ ಕ್ರಮ ವಹಿಸಲಾಗಿದೆ ಎಂದು ತಹಸೀಲ್ದಾರ್ ಶಿವಮೂರ್ತಿ ತಿಳಿಸಿದ್ದಾರೆ.

ಚಿಕ್ಕನಂದಿ ಗ್ರಾಮದ ಸುತ್ತಮುತ್ತ ಹುಲಿ ಸೆರೆ ಕಾರ್ಯಾಚರಣೆ



ಹೆಚ್.ಡಿ.ಕೋಟೆ, ಜು.11 (ಮಂಜು)– ತಾಲೂಕಿನ ಚಿಕ್ಕನಂದಿ ಗ್ರಾಮದ ಜಮೀನೊಂದರಲ್ಲಿ ಕಾಣಿಸಿಕೊಂಡಿದ್ದ ಹುಲಿ ಸೆರೆಗೆ ಅರಣ್ಯ ಇಲಾಖೆ ದಸರಾ ಆನೆಗಳ ಸಹಾಯ ಪಡೆದಿದ್ದು, ಸೋಮವಾರ ಕಂಚಮಳ್ಳಿ ಭಾಗದಿಂದ ಕಾರ್ಯಾಚರಣೆ ಆರಂಭಿಸಿದ್ದಾರೆ.

ಭಾನುವಾರ ಚಾಮಹಳ್ಳಿ ಮತ್ತು ಚಿಕ್ಕನಂದಿ ಗ್ರಾಮದಲ್ಲಿ ಹುಲಿ ಕಾಣಿಸಿಕೊಂಡಿತ್ತು. ಅರಣ್ಯ ಸಿಬ್ಬಂದಿ ಅಕ್ಕಪಕ್ಕದ ಗ್ರಾಮಸ್ಥರಿಗೆ ಎಚ್ಚರಿಕೆಯಿಂದ ಇರುವಂತೆ ಸೂಚಿಸಿತ್ತು. ಅಲ್ಲದೇ ಹುಲಿ ಕಾಣಿಸಿಕೊಂಡ ಸ್ಥಳದ ಜಮೀನಿನ ಸುತ್ತಲೂ ಕಾಲ್ನಡಿಗೆಯಲ್ಲೇ ಕಾರ್ಯಾಚರಣೆ ನಡೆಸಿದ್ದರು. ಆದರೆ ಹುಲಿ ಪತ್ತೆಯಾಗದ ಹಿನ್ನೆಲೆಯಲ್ಲಿ ಸೋಮವಾರ ಬೆಳಗ್ಗೆ ಮೊದಲ ಸುತ್ತಿನಲ್ಲಿ ಕಂಚಮಳ್ಳಿ, ಹಿರೇನಂದಿ ಭಾಗದಲ್ಲಿ ದಸರಾ ಆನೆಗಳಾದ ಗೋಪಾಲಸ್ವಾಮಿ, ಶ್ರೀಕಂಠನ ಮೂಲಕ ಕಾರ್ಯಾಚರಣೆ ಆರಂಭಿಸಲಾಯಿತು. ಈ ವೇಳೆ 40ಕ್ಕೂ ಹೆಚ್ಚು ಅರಣ್ಯ ಸಿಬ್ಬಂದಿ ಭಾಗವಹಿಸಿದ್ದರು.

ಅರ್ಜುನನ ನೇತೃತ್ವ: ಮಧ್ಯಾಹ್ನದ ಬಳಿಕ ಅಂಬಾರಿ ಆನೆ ಅರ್ಜುನನ ನೇತೃತ್ವದಲ್ಲಿ ಗೋಪಾಲಸ್ವಾಮಿ, ಶ್ರೀಕಂಠ ಆನೆಗಳೊಂದಿಗೆ 2ನೇ ಸುತ್ತಿನ ಕಾರ್ಯಾಚರಣೆಯನ್ನು ಕಂಚಮಳ್ಳಿ ಗ್ರಾಮದ ಮಲೆಯಾಳದಮ್ಮ ದೇವಾಲಯ ದಿಂದ ಆರಂಭಿಸಲಾಯಿತು. ಚಾಮಹಳ್ಳಿ, ಹಿರೇನಂದಿ, ಕಂಚಮಳ್ಳಿ ಸೇರಿದಂತೆ ಇನ್ನಿತರ ಗ್ರಾಮಗಳಲ್ಲಿ ಕಾರ್ಯಾಚರಣೆ ಮುಂದುವರಿಸಲಾಯಿತ್ತಾದರೂ, ಹುಲಿ ಸುಳಿವು ಸಿಗಲಿಲ್ಲ. ಮಳೆ ನಡುವೆಯೂ ಕೆಲ ಸಿಬ್ಬಂದಿ ಕೊಡೆಗಳ ಸಹಾಯ ಪಡೆಯದೇ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದು ಕಂಡು ಬಂತು. ಸಂಜೆ ಜೋರು ಮಳೆಯಾದ್ದರಿಂದ ಕಾರ್ಯಾಚರಣೆ ಸ್ಥಗಿತಗೊಳಿಸಲಾಯಿತು.

ಕಾರ್ಯಾಚರಣೆಯಲ್ಲಿ ಡಿಸಿಎಫ್ ಕಮಲ ಕರಿಕಾಳನ್, ಎಸಿಎಫ್ ಶಿವರಾಮ್, ನಂಜನಗೂಡು ಆರ್‌ಎಫ್‌ಓ ರಕ್ಷಿತ್, ಡಿಆರ್‌ಎಫ್‌ಓಗಳಾದ ತಮ್ಮಯ್ಯ, ಚಂದ್ರ, ನಾಗರಹೊಳೆ ಅರಣ್ಯದ ವೈದ್ಯಾಧಿಕಾರಿ ರಮೇಶ್, ಕಂಚಮಳ್ಳಿ ಪಶು ವೈದ್ಯಾಧಿಕಾರಿ ಪ್ರಸನ್ನ ಇದ್ದರು.

ಅಗ್ನಿಪಥ್ ಯೋಜನೆಯಿಂದ ದೇಶ ಮತ್ತಷ್ಟು ಬಲಾಢ್ಯ

ಚಿಕ್ಕಮಗಳೂರು ಜಿಲ್ಲಾ ಸಾಮಾಜಿಕ ಕಾರ್ಯಕರ್ತ ಪುಣ್ಯಪಾಲ್



ತಿ.ನರಸೀಪುರ, ಜು.11(ಎಸ್‌ಕೆ)– ಅಗ್ನಿಪಥ್ ಯೋಜನೆಯಿಂದ ದೇಶ ಮತ್ತಷ್ಟು ಬಲಾಢ್ಯವಾಗಲಿದ್ದು, ವಿದ್ಯಾರ್ಥಿಗಳು ದೇಶ ಸೇವೆ ಮಾಡುವುದರಿಂದ ಅವರಲ್ಲಿ ರಾಷ್ಟ್ರಪ್ರೇಮ ಮತ್ತು ರಾಷ್ಟ್ರೀಯ ಭಾವೈಕ್ಯತೆ ಹೆಚ್ಚಾಗುತ್ತದೆ ಎಂದು ಚಿಕ್ಕಮಗಳೂರು ಜಿಲ್ಲಾ ಸಾಮಾಜಿಕ ಕಾರ್ಯಕರ್ತ ಪುಣ್ಯಪಾಲ್ ಹೇಳಿದರು.

ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಯುವ ಮೋರ್ಚಾ ಮತ್ತು ಗ್ರಾಮ ವಿದ್ಯೋದಯ ಶಿಕ್ಷಣ ಸಂಸ್ಥೆಗಳ ಸಹಯೋಗದೊಂದಿಗೆ ಪಟ್ಟಣದ ವಿದ್ಯೋದಯ ಶಿಕ್ಷಣ ಸಂಸ್ಥೆ ಶಾಲಾವರಣದಲ್ಲಿ ವಿದ್ಯಾರ್ಥಿಗಳೊಂದಿಗೆ ನಡೆದ 'ಅಗ್ನಿಪಥ್' ಯೋಜನೆಯ ಕುರಿತ ಸಂವಾದದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಈ ವಯೋಮಾನದಲ್ಲಿ ದೇಶ ಸೇವೆ ಮಾಡುವುದರಿಂದ ಅವರಲ್ಲಿ ರಾಷ್ಟ್ರಪ್ರೇಮ ಮತ್ತು ರಾಷ್ಟ್ರೀಯ ಭಾವೈಕ್ಯತೆ ಹೆಚ್ಚಾಗುವುದಲ್ಲದೆ ಅವರಿಗೆ ಸೇವಾವಧಿಯಲ್ಲಿ ತೃಪ್ತಿದಾಯಕ ಗೌರವಧನ ಮತ್ತು ನಿವೃತ್ತಿ ಸಮಯದಲ್ಲಿ ಸೇವಾ ಭದ್ರತೆ ಹೆಚ್ಚುವರಿ ಮೊತ್ತ ನೀಡಲಾಗುವುದು ಎಂದರು.

ಅಗ್ನಿವೀರ್ ಸೇವೆ ಪೂರ್ಣಗೊಳಿಸಿದ ವ್ಯಕ್ತಿಗಳಿಗೆ ತರಬೇತಿ ಪ್ರಮಾಣಪತ್ರ ನೀಡಲಾಗುವುದು. ಪೊಲೀಸ್ ಮತ್ತು ಸೇನಾ ನೇಮಕಾತಿಯಲ್ಲಿ ಅಗ್ನಿವೀರರಿಗೆ ಮೀಸಲಾತಿ ನೀಡಲಾಗುವುದು. ಅಗ್ನಿವೀರರಿಗೆ ಹಲವು ಬಹುರಾಷ್ಟ್ರೀಯ ಕಂಪನಿಗಳು ಉದ್ಯೋಗ ನೀಡುವ ಭರವಸೆ ನೀಡಿವೆ. ಹಾಗಾಗಿ ವಿರೋಧ ಪಕ್ಷಗಳ ವದಂತಿಗೆ ಕಿವಿಗೊಡದೆ ಯುವಕರು ಅಗ್ನಿವೀರ್ ಯೋಜನೆಗೆ ಸೇರ್ಪಡೆಗೊಂಡು ದೂರದೃಷ್ಟಿಯ 'ಭವ್ಯಭಾರತ'ದ ಕನಸಿಗೆ ಎಲ್ಲರು ಕೈಜೋಡಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ವಿದ್ಯೋದಯ ಶಿಕ್ಷಣ ಸಂಸ್ಥೆ ಆಡಳಿತಾಧಿಕಾರಿ ಉದಯ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಮೈಸೂರು ಜಿಲ್ಲಾ ಬಿಜೆಪಿ ಗ್ರಾಮಾಂತರ ಅಧ್ಯಕ್ಷೆ ಮಂಗಳ ಸೋಮಶೇಖರ್, ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಂಜಯ್ ಶರ್ಮಾ, ತಿ.ನರಸೀಪುರ ಮಂಡಲ ಯುವ ಮೋರ್ಚಾ ಅಧ್ಯಕ್ಷ ಕುರುಬೂರು ಕೆ.ವಿ.ಶಿವಶಂಕರ್, ವರುಣಾ ಮಂಡಲ ಯುವ ಮೋರ್ಚಾ ಅಧ್ಯಕ್ಷ ಮೋಹನ್, ರೈತ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆಬ್ಬೆಹುಂಡಿ ಶಿವಕುಮಾರ್, ವಿಜಯ್ ಕುಮಾರ್, ಶ್ರೀಕಂಠ, ರಂಗೂ ನಾಯ್ಕ, ಸಿ.ಬಿ.ಹುಂಡಿ ಸಿದ್ದೇಶ್, ಹರೀಶ್, ಮನೋಜ್, ಮಲ್ಲಿಪುರ ಮಹೇಶ್, ಮಂಜುನಾಥ ಸೇರಿದಂತೆ ಮತ್ತಿತರರಿದ್ದರು.

ಆದಿವಾಸಿಗಳು ಶಿಕ್ಷಣ ಪಡೆದು ಮುಖ್ಯವಾಹಿನಿಗೆ ಬನ್ನಿ

ಕಾನೂನು ಅರಿವು ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶ ದೇವರಾಜು ಬೂತೆ



ಹೆಚ್.ಡಿ.ಕೋಟೆ, ಜು.11(ಮಂಜು)– ಡಾ.ಬಿ.ಆರ್.ಅಂಬೇಡ್ಕರ್ ವಿದ್ಯೆಗೆ ಹೆಚ್ಚು ಮಹತ್ವ ನೀಡಿದ್ದರಿಂದ ಅವರು ಬೃಹತ್ ಸಂವಿಧಾನ ಬರೆಯಲು ಸಾಧ್ಯವಾಯಿತು. ಹೀಗಾಗಿ ಆದಿವಾಸಿಗಳು ಶಿಕ್ಷಣ ಪಡೆದು ಸಮಾಜದ ಮುಖ್ಯ ವಾಹಿನಿಗೆ ಬರಬೇಕು ಎಂದು ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ದೇವರಾಜು ಬೂತೆ ತಿಳಿಸಿದರು.

ತಾಲೂಕಿನ ಬಸವನಗಿರಿ ಬಿ ಹಾಡಿಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯಾಂಗ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಸೋಮವಾರ ಆಯೋಜಿಸಿದ್ದ ಕಾನೂನು ಅರಿವು ಸೇವಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ನಿಮಗೆ ಒದಗಿಸಿ ಕೊಡುತ್ತೇವೆ. ನೀವು ನಿಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಹೆಚ್ಚು ಒತ್ತು ನೀಡಬೇಕು. ಸರ್ಕಾರ ಆದಿವಾಸಿಗಳಿಗಾಗಿ ಪರಿಶಿಷ್ಟವರ್ಗಗಳ ಕಲ್ಯಾಣ ಇಲಾಖೆಯಿಂದ ಆಶ್ರಮ ಶಾಲೆ ತೆರೆದು ಶಿಕ್ಷಣ ನೀಡುತ್ತಿದೆ. ಆದರೂ ಆದಿವಾಸಿಗಳು ಶಿಕ್ಷಣದಿಂದ ದೂರ ಹೋಗುತ್ತಿದ್ದೀರಾ ಎಂದರೆ ಇದು ಒಳ್ಳೆಯ ಬೆಳವಣಿಗೆ ಅಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸೌಲಭ್ಯ ಪಡೆಯುವುದು ನಿಮ್ಮ ಜವಾಬ್ದಾರಿ. ನೀವು ಬರದಿದ್ದಾಗ ನಾವೇ ನಿಮ್ಮ ಬಳಿ ಬಂದು ಕೆಲಸ ಮಾಡಿ ಕೊಡುತ್ತೇವೆ. ಹಾಗಾಗಿ ಕಾನೂನು ಸೇವೆಗಳ ಪ್ರಾಧಿಕಾರದಿಂದ ಹಾಡಿಗೆ ಕಾನೂನು ವಿದ್ಯಾರ್ಥಿಗಳನ್ನು ಕರೆತಂದು ಸ್ಥಳೀಯ ಸಂಘ ಸಂಸ್ಥೆಗಳು ಹಾಗೂ ಜನ ಪ್ರತಿನಿಧಿಗಳ ಸಹಕಾರ, ಅಧಿಕಾರಿಗಳ ನೇತೃತ್ವದಲ್ಲಿ ಅಗತ್ಯ ಸೇವೆ ನೀಡಿ, ಸರ್ಕಾರದ ಸೌಲಭ್ಯ ಆದಿವಾಸಿಗಳಿಗೆ ಸಿಗುವಂತೆ ಮಾಡುವುದೇ ಈ ಕಾರ್ಯಕ್ರಮದ ಉದ್ದೇಶ ಎಂದರು.

ಆದಿವಾಸಿ ಮುಖಂಡ ಕಾಳಕಲ್ಕರ್ ಮಾತನಾಡಿ, ಬಂಡೀಪುರ ಹುಲಿ ಯೋಜನೆ ಹಾಗೂ ಕಬಿನಿ ಹಿನ್ನೀರಿನಲ್ಲಿ ವಾಸವಿದ್ದ ನಮ್ಮನ್ನು 2005–06 ಸಾಲಿನಲ್ಲಿ ಬಸವನಗಿರಿ ಹಾಡಿ, ಬಸವನಗಿರಿ 'ಎ' ಹಾಡಿ ಹಾಗೂ ಬಸವನಗಿರಿ 'ಬಿ' ಹಾಡಿಗೆ ಕರೆತಂದು ಪುನರ್ ವಸತಿ ಮಾಡಿದಂತಹ 154 ಕುಟುಂಬಗಳು ಇಲ್ಲಿ ವಾಸ ಮಾಡುತ್ತಿದ್ದು, ಹಾಡಿಗೆ ಮೂಲ ಸೌಕರ್ಯ ಕಲ್ಪಿಸದ ಕಾರಣ ಹಾಡಿಯಲ್ಲಿ ಹಲವು ಸಮಸ್ಯೆಗಳಿವೆ. ಕೂಡಲೇ ಅದನ್ನು ಬಗೆಹರಿಸಲು ಸಂಬಂಧಪಟ್ಟ ಇಲಾಖೆಗೆ ಸೂಚನೆ ನೀಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಗಿರಿಜನ ಸಮನ್ವಯ ಯೋಜನಾಧಿಕಾರಿ ಪ್ರಭಾ, ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ನಾರಾಯಣಸ್ವಾಮಿ, ಎಇಓ ರಂಗಸ್ವಾಮಿ, ಕಂದಾಯ ಇಲಾಖೆ ಶಿರಸ್ತೇದಾರ್ ಸಿದ್ದರಾಜು, ಕಂದಾಯ ಅಧಿಕಾರಿ ಮಹೇಶ್, ಗ್ರಾಮ ಲೆಕ್ಕಾಧಿಕಾರಿ ಸಹನಾ, ಚಕ್ಕೋಡನಹಳ್ಳಿ ಪಿಡಿಓ ರವಿ ಇದ್ದರು.

–: ಆದಿವಾಸಿಗಳ ಬೇಡಿಕೆ :–

- ಹಾಡಿಯ 154 ಕುಟುಂಬಗಳಿಗೆ 2005–06ನೇ ಸಾಲಿನಲ್ಲಿ ಚೆಸ್ಕಾಂ ವತಿಯಿಂದ ವಿದ್ಯುತ್ ಸಂಪರ್ಕ ಕಲ್ಪಿಸಿದ್ದು, ಈ ವೇಳೆ ವಿದ್ಯುತ್ ಮೀಟರ್‌ಗಳನ್ನು ಅದಲು ಬದಲು ಮಾಡಿ ಅಳವಡಿಸಿರುವುದರಿಂದ ಬೇರೆ ಬೇರೆ ಸೌಲಭ್ಯ ಪಡೆಯಲು ಸಮಸ್ಯೆಯಾಗಿದೆ.
- ಪುನರ್ ವಸತಿ ಸಂದರ್ಭ 154 ಕುಟುಂಬಗಳಿಗೆ ಮನೆ ನಿರ್ಮಾಣ ಮಾಡಿದ್ದು, ಮಳೆಗಾಲ ಸಂದರ್ಭ ವಾಸ ಮಾಡಲು ಯೋಗ್ಯವಾಗಿಲ್ಲ. ಹಾಗಾಗಿ ಸರ್ಕಾರ 5 ಲಕ್ಷ ರೂ. ವೆಚ್ಚದಲ್ಲಿ ಕಚ್ಚಾ ಮನೆ ನಿರ್ಮಿಸಿ ಕೊಡಬೇಕು.
- ಸರ್ಕಾರದಿಂದ 154 ಕುಟುಂಬಗಳಿಗೆ ಜಮೀನು ನೀಡಿದ್ದು, ಇದುವರೆಗೆ ಕೆಲವರಿಗೆ ಖಾತೆ ಆಗಿಲ್ಲ. ಖಾತೆ ಮಾಡಿಸಿ ಕೊಡಬೇಕು.
- ಕೇಂದ್ರ ಸರ್ಕಾರದಿಂದ ನೀಡುವ ಕೃಷಿ ಪರಿಹಾರ ದೊರಕಿಸಿ ಕೊಡಬೇಕು.
- ಕಾಡು ಪ್ರಾಣಿಗಳ ಹಾವಳಿ ಜಾಸ್ತಿಯಾಗಿದ್ದು ಬೆಳೆ ರಕ್ಷಣೆ ಮಾಡಲು ಅರಣ್ಯ ಇಲಾಖೆ ಕ್ರಮ ವಹಿಸಬೇಕು.
- ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳು ಸಮರ್ಪಕವಾಗಿ ಅನುಷ್ಠಾನ ಆಗಬೇಕು.
- ಬಸವನಗಿರಿ ಹಾಡಿಯಲ್ಲಿರುವ ಯರವ ಸಮುದಾಯ ಭವನ ಕಾಮಗಾರಿ ಪೂರ್ಣಗೊಳಿಸಬೇಕು.
- ಬಸವನಗಿರಿ ಹಾಡಿ ಸ್ಮಶಾನಕ್ಕೆ ಮೂಲ ಸೌಕರ್ಯ ಒದಗಿಸಬೇಕು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಹರಿಕಥೆ ಅಲ್ಲ ಗಿರಿಕಥೆ (ಕ): ಬೆ.10.30ಕ್ಕೆ, ಖುದಾಫೀಸ್ (ಹಿಂ): ಮ.1.10ಕ್ಕೆ, ರಾ.10.10ಕ್ಕೆ, **777 ಚಾರ್ಲಿ** (ಕ): ಸಂ.4ಕ್ಕೆ, ರಾ.7.05ಕ್ಕೆ.
ಸ್ಕ್ರೀನ್ 2	ಶುಗರ್‌ಲೆಸ್ (ಕ): ಬೆ.10.50ಕ್ಕೆ, ವೆಡ್ಡಿಂಗ್ ಗಿಫ್ಟ್ (ಕ): ಮ.1.25ಕ್ಕೆ, ತೂತು ಮಡಿಕೆ (ಕ): ಸಂ.4.15ಕ್ಕೆ, ಹೋಪ್ (ಕ): ರಾ.7ಕ್ಕೆ, **777 ಚಾರ್ಲಿ** (ಕ): ರಾ.9.55ಕ್ಕೆ.
ಸ್ಕ್ರೀನ್ 3	ನಮ್ ಹುಡುಗರು (ಕ): ಬೆ.10.05ಕ್ಕೆ, ಗಿರ್ಕಿ (ಕ): ಮ.1.10ಕ್ಕೆ, ಬೈರಾಗಿ (ಕ): ಸಂ.4.10ಕ್ಕೆ, ರಾಕೆಟ್ರಿ (ಹಿಂ): ಸಂ.6.55ಕ್ಕೆ, ಕಡುವ (ಮ): ರಾ.9.55ಕ್ಕೆ.
ಸ್ಕ್ರೀನ್ 4	ಥಾರ್: ಲವ್ ಅಂಡ್ ಥಂಡರ್ (3ಡಿ)(ಇಂ): ಬೆ.9.55ಕ್ಕೆ, ಮ.12.15ಕ್ಕೆ, ಮ.2.40ಕ್ಕೆ, ಸಂ.5.05ಕ್ಕೆ, ರಾ.7.35ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಥಾರ್: ಲವ್ ಅಂಡ್ ಥಂಡರ್ (3ಡಿ)(ಇಂ): ಬೆ.9.25, ಮ.12ಕ್ಕೆ, ಮ.2.35ಕ್ಕೆ, ಸಂ.5.10ಕ್ಕೆ, ರಾ.7.50ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಥಾರ್: ಲವ್ ಅಂಡ್ ಥಂಡರ್ (ಇಂ): ಬೆ.10.25, ಸಂ.6.50ಕ್ಕೆ, ರಾ.9.30ಕ್ಕೆ, ಶುಗರ್‌ಲೆಸ್ (ಕ): ಮ.1ಕ್ಕೆ, ವೆಡ್ಡಿಂಗ್ ಗಿಫ್ಟ್ (ಕ): ಮ.3.50ಕ್ಕೆ.
ಸ್ಕ್ರೀನ್ 3	ಖುದಾಫೀಸ್ (ಹಿಂ): ಬೆ.10.05ಕ್ಕೆ, ರಾ.7.20ಕ್ಕೆ, ಬೈರಾಗಿ (ಕ): ಮ.1.05ಕ್ಕೆ, **777 ಚಾರ್ಲಿ** (ಕ): ಸಂ.4ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 4	ಗಿರ್ಕಿ (ಕ): ಬೆ.10.15ಕ್ಕೆ, ಭೋಟಾ ಬಾಂಬೆ (ಕ): ಮ.1.10ಕ್ಕೆ, ತೂತು ಮಡಿಕೆ (ಕ): ಸಂ.4.15ಕ್ಕೆ, ಹೋಪ್ (ಕ): ರಾ.7ಕ್ಕೆ, ನಮ್ಮ ಹುಡುಗರು (ಕ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಶುಗರ್‌ಲೆಸ್ (ಕ): ಬೆ.10.30ಕ್ಕೆ, ಗಿರ್ಕಿ (ಕ): ಮ.1ಕ್ಕೆ, ವೆಡ್ಡಿಂಗ್ ಗಿಫ್ಟ್ (ಕ): ಮ.3.50ಕ್ಕೆ, ಹೋಪ್ (ಕ): ಸಂ.6.30ಕ್ಕೆ, ಖುದಾಫೀಸ್ (ಹಿಂ): ರಾ.9.15ಕ್ಕೆ.
ಸ್ಕ್ರೀನ್ 2	ಅಂಗೈಲಿ ಅಕ್ಷರ (ಕ): ಬೆ.10.45ಕ್ಕೆ, ತೂತ್ ಮಡಿಕೆ (ಕ): ಮ.1.15ಕ್ಕೆ, ಖುದಾಫೀಸ್ (ಹಿಂ): ಸಂ.4ಕ್ಕೆ, ಬೈರಾಗಿ (ಕ): ಸಂ.6.45ಕ್ಕೆ, ರಾಕೆಟ್ರಿ (ಹಿಂ): ರಾ.9.20ಕ್ಕೆ.
ಸ್ಕ್ರೀನ್ 3	ಥಾರ್: ಲವ್ ಅಂಡ್ ಥಂಡರ್ (3ಡಿ)(ಇಂ): ಬೆ.11ಕ್ಕೆ, ಮ.1.45ಕ್ಕೆ, ಸಂ.4.15ಕ್ಕೆ, ಸಂ.6.45ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಖುದಾಫೀಸ್ (ಹಿಂ): ಬೆ.10.15ಕ್ಕೆ, **777 ಚಾರ್ಲಿ** (ಕ): ಮ.1ಕ್ಕೆ, ರಾ.9.15ಕ್ಕೆ, ಬೈರಾಗಿ (ಕ): ಸಂ.4.05ಕ್ಕೆ, ತೂತ್ ಮಡಿಕೆ (ಕ): ಸಂ.6.45ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS
ಮೊ.ನಂ: 8951357088
ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಬೈರಾಗಿ (ಕ): ಬೆ.10ಕ್ಕೆ, ಮ.12.15ಕ್ಕೆ, ಮ.1ಕ್ಕೆ, ರಾ.7.20ಕ್ಕೆ, ರಾ.10.15ಕ್ಕೆ, **777 ಚಾರ್ಲಿ** (ಕ): ಮ.3.55ಕ್ಕೆ, ಸಂ.6.50ಕ್ಕೆ, ರಾ.10.15ಕ್ಕೆ, ಹರಿಕಥೆ ಅಲ್ಲ ಗಿರಿಕಥೆ (ಕ): ಸಂ.4.05ಕ್ಕೆ, ತ್ರಿವಿಕ್ರಮ (ಕ): ಮ.12.50ಕ್ಕೆ, ಮಿನಿಯನ್ಸ್ (3ಡಿ)(ಇಂ): ಬೆ.10.05ಕ್ಕೆ, ಮ.3.30ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾ.10ಕ್ಕೆ, ರಾಷ್ಟ್ರ ಕವಚ ಓಂ(ಹಿಂ): ಬೆ.9.40ಕ್ಕೆ, ಮ.12.40ಕ್ಕೆ, ರಾ.7ಕ್ಕೆ, ರಾ.10.10ಕ್ಕೆ, ಜಗ್‌ಜಗ್ ಜೀಯೊ (ಹಿಂ): ಮ.12.15ಕ್ಕೆ, ಪಕ್ಕ ಕಮರ್ಷಿಯಲ್ (ತೆ): ಬೆ.9ಕ್ಕೆ, ಸಂ.4.40ಕ್ಕೆ, ಸಂ.6.55ಕ್ಕೆ, ರಾ.10ಕ್ಕೆ, ರಾಕೆಟ್ರಿ (ತ): ಮ.3.10ಕ್ಕೆ, ವಿಕ್ರಂ (ತ): ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಪಕ್ಕ ಕಮರ್ಷಿಯಲ್ (ತೆ) ಶುಗರ್‌ಲೆಸ್(ಕ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಚಾರ್ಲಿ–777 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಖುದಾಫಿಸ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಶುಗರ್‌ಲೆಸ್, ತೂತುಮಡಿಕೆ (ಕ)	2 ಪ್ರದರ್ಶನಗಳು
ಗಾಯಿತ್ರಿ	
ಗಿರಕಿ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ನಮ್ಮ ಹುಡುಗರು (ಕ)	4 ಪ್ರದರ್ಶನಗಳು
ಸಂಗಂ	
ಭೈರಾಗಿ (ಕ)	4 ಪ್ರದರ್ಶನಗಳು
ಲಿಡೋ	
ಗಿಲ್ಕೀ (ಕ) ಖುದಾಫೀಸ್(ಹಿ)	2 ಪ್ರದರ್ಶನಗಳು
ತಿಬ್ಬಾದೇವಿ	
ಯಾನೈ (ತ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಥೋರ್ ಲವ್ ಅಂಡ್ ಥಂಡರ್ (ಇ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಶುಗರ್‌ಲೆಸ್, ತೂತುಮಡಿಕೆ (ಕ)	2 ಪ್ರದರ್ಶನಗಳು

ಕಾವೇರಿ ಪಾತ್ರದಲ್ಲಿ ಪ್ರವಾಹ ಭೀತಿ, ಬೆಳೆ ನಾಶ



ಬೆಟ್ಟದಪುರ, ಜು.11– ಸತತ ಮಳೆಯಿಂದಾಗಿ ಪಿರಿಯಾಪಟ್ಟಣ ತಾಲೂಕಿನ ಕಾವೇರಿ ನದಿ ಪಾತ್ರದ ಕೊಪ್ಪ, ಆವರ್ತಿ, ಮುತ್ತಿನ ಮುಳುಸೋಗೆ, ಸೂಳೆಕೋಟೆ ಗ್ರಾಮಗಳಲ್ಲಿ ಪ್ರವಾಹ ಪರಿಸ್ಥಿತಿ ಎದುರಾಗಿದ್ದು, ಹಲವಾರು ರೈತರ ಗದ್ದೆ ಹೊಲಗಳಿಗೆ ನೀರು ನುಗ್ಗಿ ಬೆಳೆ ನಾಶವಾಗಿದೆ.

ಕಳೆದ ಒಂದು ವರ್ಷದಿಂದ ಸ್ವಲ್ಪ ತಗ್ಗಿದ್ದ ಪ್ರವಾಹ ಈಗ ಮತ್ತೆ ತನ್ನ ರುದ್ರ ಅವತಾರ ತಾಳಿದೆ. ಇನೂ ಎರಡು ಮೂರು ದಿನ ಮಳೆ ಸುರಿದರೆ ಗ್ರಾಮಗಳು ಸಂಪೂರ್ಣ ಮುಳುಗಡೆ ಆಗಲಿದೆ. ಕಾವೇರಿ ಭಾಗದ ಜನರ ಗೋಳಿನ ಬಗ್ಗೆ ಕೂಡಲೇ ಸರ್ಕಾರ ಮತ್ತು ತಾಲೂಕು ಆಡಳಿತ ಇತ್ತ ಗಮನಹರಿಸಿ ರೈತರ ನೆರವಿಗೆ ಬರಬೇಕು ಎಂದು ರೈತರು ಆಗ್ರಹಿಸಿದ್ದಾರೆ.

ಅಲ್ಲದೆ ಇನ್ನೂ 2 ದಿನ ಮಳೆ ಮುಂದುವರಿದರೆ ಮೈಸೂರು ಮತ್ತು ಕೊಡಗು ಭಾಗದ ಸಂಪರ್ಕ ಸಂಪೂರ್ಣ ಕಡಿತಗೊಳ್ಳಲಿದೆ. ಈಗಾಗಲೇ ತಾಲೂಕು ಆಡಳಿತ ಎಚ್ಚರಿಕೆ ನೀಡಿದ್ದು ಹೆಚ್ಚಿನ ಮಳೆ ಸುರಿದರೆ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಕುಟಂಬಗಳಿಗೆ ನಿರ್ದೇಶನ ನೀಡಿದ್ದು, ಬಡ ಕುಟುಂಬಗಳು ಕಂಗಾಲಾಗಿವೆ. ಕೂಡಲೇ ತಾಲೂಕು ಆಡಳಿತ ಮತ್ತು ಶಾಸಕ ಕೆ.ಮಹದೇವ್ ಅವರು ಮುಂಜಾಗ್ರತಾ ಕ್ರಮ ಕೈಗೊಂಡು ಆಹಾರ ಮತ್ತು ಕಾಳಜಿ ಕೇಂದ್ರಗಳನ್ನು ತೆರೆಯಬೇಕು ಸಾರ್ವಜನಿಕರು ಒತ್ತಾಯಿಸಿದ್ದಾರೆ.



ತಿ.ನರಸೀಪುರದ ಹಳೇ ಕುರುಬರ ಬೀದಿಯಲ್ಲಿ ಸಂಗೊಳ್ಳಿ ರಾಯಣ್ಣ ಯುವಕ ಬಳಗ, ಕನಕ ಸೇನಾ ಸಮಿತಿಯಿಂದ ನಡೆದ 2ನೇ ವರ್ಷದ ಕಂಡಾಯ ಉತ್ಸವದಲ್ಲಿ ಭಾಗವಹಿಸಿದ್ದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ವಸತಿ ಯೋಜನೆ ಜಾಗೃತ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಪುರಸಭಾಧ್ಯಕ್ಷ ಮದನ್‌ರಾಜ್, ಉಪಾಧ್ಯಕ್ಷ ನಾಗರತ್ನ ಮಾದೇಶ್. ಬಾದಾಮಿ ಮಂಜು, ಟಿ.ಎಂ.ನಂಜುಂಡಸ್ವಾಮಿ ಮಾಜಿ ಅಧ್ಯಕ್ಷೆ ಸುಧಾ ಗುರುಮಲ್ಲಪ್ಪ ಮತ್ತಿತರರಿದ್ದರು.

ಪರಿಶಿಷ್ಟ ಜಾತಿಗೆ ಶೇ.17, ಪಂಗಡಕ್ಕೆ ಶೇ.7.5ರಷ್ಟು ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಆಗ್ರಹ

ಮೈಸೂರಲ್ಲಿ ಬೃಹತ್ ಪ್ರತಿಭಟನೆ

● ಡಿಸಿ ಕಚೇರಿಯಲ್ಲಿ ಮನವಿ ಸಲ್ಲಿಕೆ ● ಇನ್ನೂ ಹತ್ತು-ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹ ● ಮಳೆ ನಡುವೆಯೂ ಭಾರೀ ಸಂಖ್ಯೆಯಲ್ಲಿ ನೆರೆದಿದ್ದ ಪ್ರತಿಭಟನಾಕಾರರು



ಮೈಸೂರು,ಜು.11(ಪಿಎಂ)–ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ ದಾಸ್ ಆಯೋಗದ ವರದಿಯ ಶಿಫಾರಸ್ಸಿನಂತೆ ಪರಿಶಿಷ್ಟ ಜಾತಿಗೆ ಶೇ.17 ಮತ್ತು ಪರಿಶಿಷ್ಟ ಪಂಗಡಕ್ಕೆ ಶೇ.7.5ರಷ್ಟು ಮೀಸಲಾತಿ ಹೆಚ್ಚಳವೂ ಸೇರಿದಂತೆ ಇನ್ನಿತರ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಮೈಸೂರಿನಲ್ಲಿ ಸೋಮವಾರ ಭಾರೀ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಕರ್ನಾಟಕ ಸ್ವಾಭಿಮಾನಿ ಎಸ್‌ಸಿ–ಎಸ್‌ಟಿ ಸಂಘಟನೆಗಳ ಒಕ್ಕೂಟ ಮತ್ತು ಮೀಸಲಾತಿ ಹೆಚ್ಚಳ ಹೋರಾಟ ಕ್ರಿಯಾಸಮಿತಿ ನೇತೃತ್ವದಲ್ಲಿ ಎಸ್‌ಸಿ–ಎಸ್‌ಟಿಯ ವಿವಿಧ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಮಳೆ ನಡುವೆಯೂ ಭಾರೀ ಸಂಖ್ಯೆಯಲ್ಲಿ ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಮೂಲಕ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿದರು. ಪುರಭವನ ಆವರಣದಲ್ಲಿನ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ, ದೊಡ್ಡ ಗಡಿಯಾರ ವೃತ್ತ, ಗಾಂಧಿ ಚೌಕ, ಸಂಯ್ಯಾಜಿರಾವ್ ರಸ್ತೆ, ಚಿಕ್ಕ ಗಡಿಯಾರ ವೃತ್ತ, ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾ ರಸ್ತೆಗಳಲ್ಲಿ ಸಾಗಿದ ಬೃಹತ್ ಪ್ರತಿಭಟನಾ ಮೆರವಣಿಗೆ, ಜಿಲ್ಲಾಧಿಕಾರಿ ಕಚೇರಿ ಎದುರು ಜಮಾವಣೆಗೊಂಡಿತು. ಬಳಿಕ ಇಲ್ಲಿ ಪ್ರತಿಭಟನೆ ನಡೆಸಲಾಯಿತು.

ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳಿಗೆ ಪ್ರಸ್ತುತ ಕೊರತೆಯಾಗಿರುವ ಮೀಸಲಾತಿ ಪ್ರಮಾಣ ಹೆಚ್ಚಳಕ್ಕಾಗಿ 2019ರ ಜೂ.9ರಂದು ನಿವೃತ್ತ ನ್ಯಾ.ಹೆಚ್.ಎನ್.ನಾಗಮೋಹನದಾಸ್ ಅವರ ಏಕಸದಸ್ಯ ಆಯೋಗ ರಚಿಸಲಾಯಿತು. ಆಯೋಗವು ವೈಜ್ಞಾನಿಕವಾಗಿ ಸಿದ್ಧಪಡಿಸಿದ ವರದಿಯನ್ನು 2020ರ ಜು.2ರಂದು ಸರ್ಕಾರಕ್ಕೆ ಸಲ್ಲಿಸಿದೆ. ಈ ವರದಿ ಅನುಷ್ಠಾನಕ್ಕೆ ಆಗ್ರಹಿಸಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿಯವರು 2022ರ ಫೆ.10ರಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಸತ್ಯಾಗ್ರಹ ಆರಂಭಿಸಿದ್ದರೂ ಸರ್ಕಾರ ಸ್ಪಂದಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗಣರಾಜ್ಯೋತ್ಸವದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಫೋಟೋ ಹೊರತೆಗೆಸಿ, ಅಪಮಾನ ಮಾಡಿದ ರಾಯಚೂರು ಜಿಲ್ಲಾ ನ್ಯಾಯಾಧೀಶರಾಗಿದ್ದ ಮಲ್ಲಿಕಾರ್ಜುನಗೌಡ ಅವರನ್ನು ಬಂಧಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಖಾಸಗಿ ಕ್ಷೇತ್ರದಲ್ಲಿ ಎಸ್‌ಸಿ–ಎಸ್‌ಟಿ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಬೇಕು. ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಮೀಸಲಾತಿ ಸೌಲಭ್ಯ ಪಡೆದವರನ್ನು ಶಿಕ್ಷೆಗೆ ಗುರಿಪಡಿಸಬೇಕು. ಜೊತೆಗೆ ಇದಕ್ಕೆ ನೆರವಾದ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ಆಗ್ರಹಿಸಿದರು.

ಕೆಲಕಾಲ ಪ್ರತಿಭಟನೆ ನಡೆಸಿ, ಬಳಿಕ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅವರಿಗೆ ಮನವಿ ಸಲ್ಲಿಸಿ ಪ್ರತಿಭಟನೆ ಅಂತ್ಯಗೊಳಿಸಲಾಯಿತು. ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಶಾಸಕ ಅನಿಲ್ ಚಿಕ್ಕಮಾದು, ಮಾಜಿ ಮೇಯರ್ ಪುರುಷೋತ್ತಮ್, ಮುಖಂಡರಾದ ಮಾವಳ್ಳಿ ಶಂಕರ್, ದ್ಯಾವಪ್ಪ ನಾಯಕ, ಮರಿದೇವಯ್ಯ, ನಂಜಪ್ಪ ಬಸವನಗುಡಿ ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕುಗಳ ಎಸ್‌ಸಿ–ಎಸ್‌ಟಿ ಸಮುದಾಯವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.


“ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರ ಹೋರಾಟ ಇಂದಿಗೆ 152ನೇ ದಿನಕ್ಕೆ ಕಾಲಿಟ್ಟಿದೆ. ಅವರು ಬಿಸಿಲು, ಮಳೆ ಎನ್ನದೇ ಹೋರಾಟ ಮಾಡುತ್ತಿದ್ದಾರೆ. ಮೀಸಲಾತಿ ಹೆಚ್ಚಳವಾಗದಿದ್ದರೆ, ಸಮುದಾಯದ ಶ್ರೀಗಳು, ಹೋರಾಟಗಾರರ ತೀರ್ಮಾನಕ್ಕೆ ಬದ್ಧವಾಗಿ ಬೆಂಬಲ ನೀಡುತ್ತೇನೆ. ಅದಕ್ಕಾಗಿ ಯಾವುದೇ ತ್ಯಾಗಕ್ಕೂ ಸಿದ್ಧವಿದ್ದೇನೆ.

–ಅನಿಲ್ ಚಿಕ್ಕಮಾದು, ಹೆಚ್.ಡಿ.ಕೋಟೆ ಶಾಸಕ.



ರಾಜ್ಯ ಸರ್ಕಾರಕ್ಕೆ ವಾರದ ಗಡುವು

ಮೈಸೂರು,ಜು.11(ಪಿಎಂ)– ರಾಜ್ಯ ಸರ್ಕಾರಕ್ಕೆ ವಾರ ಕಾಲ ಗಡುವು ನೀಡಿದ್ದು, ಆದಾಗ್ಯೂ ಎಸ್‌ಸಿ–ಎಸ್‌ಟಿ ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಕ್ರಮ ವಹಿಸದಿದ್ದರೆ, ಸಮುದಾಯದ ಎಲ್ಲಾ ಸ್ವಾಮೀಜಿಗಳ ನೇತೃತ್ವದಲ್ಲಿ ಮುಂದಿನ ತೀರ್ಮಾನ ಕೈಗೊಳ್ಳಲಿದ್ದು, ಅದಕ್ಕೆ ನಮ್ಮ ಸಮುದಾಯ ಸಿದ್ಧವಾಗಿರಬೇಕು ಎಂದು ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಹೇಳಿದರು.



ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ

ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಈಗಾಗಲೇ ಸಮುದಾಯದ ಎಲ್ಲಾ ಸ್ವಾಮೀಜಿಗಳು ಸಮಾಲೋಚನೆ ಮಾಡಿದ್ದೇವೆ. ಸರ್ಕಾರ ನಮ್ಮ ಬೇಡಿಕೆ ಈಡೇರಿಸುವ ತೀರ್ಮಾನ ಕೈಗೊಳ್ಳಲಿಲ್ಲವೆಂದರೆ, ಮುಂದಿನ ತೀರ್ಮಾನ ಏನೆಂಬುದನ್ನು ನಾವು ಮಾಡುತ್ತೇವೆ. ನಮ್ಮ ಸಮಾಜ ಇದಕ್ಕೆ ಸಿದ್ಧವಾಗಿರಬೇಕು ಎಂದರು. ಇಂದು ರಾಜ್ಯದ ಎಲ್ಲಾ 32 ಜಿಲ್ಲೆಗಳಲ್ಲಿ ಏಕಕಾಲದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಹೋರಾಟ ಮಾಡುತ್ತಿದ್ದೇವೆ. ಸೂಜಿ–ದಾರದಂತೆ ಎಸ್‌ಸಿ–ಎಸ್‌ಟಿ ಸಮುದಾಯವರು ಒಂದಾಗಿದ್ದೇವೆ. ಈ ಸಮುದಾಯಗಳ ಇಬ್ಭಾಗವಾಗಿಸಲು ಕತ್ತರಿ ಪ್ರಯೋಗ ಮಾಡುವವರಿಗೆ ತಕ್ಕಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ರಾಜ್ಯದಲ್ಲಿ ಒಂದೂವರೆ ಕೋಟಿ ಎಸ್‌ಸಿ–ಎಸ್‌ಟಿ ಜನಸಂಖ್ಯೆ ಇದ್ದು, ಅಂತಹ ಸಮುದಾಯದ ನಮ್ಮ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿಯವರನ್ನು 150 ದಿನಗಳು ಬೀದಿಯಲ್ಲಿ ಕೂರಿಸುತ್ತೀರಾ? ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಎಸ್‌ಸಿ ಎಸ್‌ಟಿ ಸಮುದಾಯ ಒಡೆದು ಬೇಳೆ ಬೇಯಿಸಿಕೊಳ್ಳಲು ಇನ್ನು ಮುಂದೆ ಅವಕಾಶ ನೀಡುವುದಿಲ್ಲ. ನ್ಯಾ.ನಾಗಮೋಹನದಾಸ್ ಅವರು ಎಸ್‌ಸಿ–ಎಸ್‌ಟಿಗೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕೆಂದು ವರದಿ ನೀಡಿ 2 ವರ್ಷಗಳೇ ಕಳೆದಿವೆ. ಎಸ್‌ಸಿ–ಎಸ್‌ಟಿಯವರ ಮತ ಬೇಕು. ಆದರೆ ಅವರ ಹಿತ ಕಾಪಾಡಲು ಆಗುವುದಿಲ್ಲವೇ? ಡಾ.ಅಂಬೇಡ್ಕರ್ ಅವರು ನಮಗೆ ನೀಡಿರುವ ಹಕ್ಕುಗಳನ್ನು ನಾವು ಕೇಳುತ್ತಿದ್ದೇವೆ. ಅದಕ್ಕೂ ಮೀನಾಮೇಷ ಎಣಿಸುತ್ತಿದ್ದೀರಾ? ಒಂದೂವರೆ ಕೋಟಿ ಜನಸಂಖ್ಯೆ ಇರುವ ಎಸ್‌ಸಿ–ಎಸ್‌ಟಿಯವರ ಮತ ನಮಗೆ ಬೇಡವೆಂದು ಮುಖ್ಯಮಂತ್ರಿಗಳು ಹೇಳಲಿ ಎಂದು ಕಿಡಿಕಾರಿದರು.

ಪ್ರಮುಖ ಬೇಡಿಕೆಗಳು

ಹಲವು ಇಲಾಖೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು. ಎಸ್‌ಸಿ–ಎಸ್‌ಟಿ ನೌಕರರ ಮುಂಬಡ್ತಿ ಮೀಸಲಾತಿಯನ್ನು 1995ರ ಸುಪ್ರಿಂಕೋರ್ಟ್ ತೀರ್ಪಿನಂತೆ ಯಥಾವತ್ತಾಗಿ ಪಾಲಿಸಬೇಕು. ಎಸ್‌ಸಿ–ಎಸ್‌ಟಿ ಮೀಸಲಾತಿ ಪಡೆಯಲು ನಿಗದಿ ಮಾಡಿರುವ ಕುಟುಂಬದ ವಾರ್ಷಿಕ ಆದಾಯದ ಮಿತಿಯನ್ನು 10 ಲಕ್ಷ ರೂ.ಗೆ ಹೆಚ್ಚಿಸಬೇಕು. ಸರ್ಕಾರಿ ಜಮೀನು ಮತ್ತು ಹಸಿರು ಭೂಮಿ ವ್ಯಾಪ್ತಿಯಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ನಮ್ಮ ಸಮುದಾಯದವರಿಗೆ ಕೂಡಲೇ ಸಾಗುವಳಿ ಪತ್ರ ನೀಡಬೇಕು ಎಂದು ಒತ್ತಾಯಿಸಿದರು.

ಸರ್ಕಾರಿ ಜಮೀನಿನಲ್ಲಿರುವ ಬಡವರ ಮನೆ–ಗುಡಿಸಲುಗಳನ್ನು ಸಕ್ರಮಗೊಳಿಸಿ, ಹಕ್ಕುಪತ್ರ ನೀಡಬೇಕು. ಗೋಮಾಳ ಸೇರಿದಂತೆ ಸರ್ಕಾರಿ ಜಮೀನುಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲು ರಚಿಸಿರುವ ಉಪಸಮಿತಿ ರದ್ದುಪಡಿಸಬೇಕು. ಎಸ್‌ಸಿ–ಎಸ್‌ಟಿ ಭೂ ಪರಭಾರೆ ನಿಷೇಧ ಕಾಯ್ದೆಯ ಮುಖ್ಯಭಾಗವನ್ನು ಸುಪ್ರೀಂಕೋರ್ಟ್ ನೀಡಿರುವ ತೀರ್ಪಿಗೆ ಅನುಗುಣವಾಗಿ ಸೂಕ್ತ ತಿದ್ದುಪಡಿ ಮಾಡಿ ಎಸ್‌ಸಿ–ಎಸ್‌ಟಿ ರೈತರಿಗೆ ಭೂಮಿ ಹಕ್ಕು ಒದಗಿಸಬೇಕು. ಎಸ್‌ಸಿ–ಎಸ್‌ಟಿ ಸಮುದಾಯಕ್ಕೆ ಸ್ಮಶಾನ ಭೂಮಿ ಒದಗಿಸಲು ಕ್ರಮ ಕೈಗೊಳ್ಳಬೇಕು. ಗುತ್ತಿಗೆ ಮತ್ತು ಹೊರಗುತ್ತಿಗೆ ಪದ್ಧತಿ ಶೀಘ್ರ ರದ್ದುಗೊಳಿಸಬೇಕು. ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಮೀಸಲು ಹಣವನ್ನು ಬೇರೆ ಬಾಬ್ತುಗಳಿಗೆ ವೆಚ್ಚ ಮಾಡಲು ಅವಕಾಶವಿರುವ ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾಯ್ದೆಯ ಕಲಂ 7(ಡಿ) ಅನ್ನು ರದ್ದುಪಡಿಸಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ಉಂಟು ಮಾಡಿರುವ ಪಠ್ಯ ಪರಿಷ್ಕರಣೆ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥನನ್ನು ಬಂಧಿಸಬೇಕು. ಈ ಹಿಂದಿನ ಪಠ್ಯಗಳನ್ನೇ ಮುಂದುವರೆಸಬೇಕು.

PUBLIC NOTICE

Notice is hereby given that SRI.SHEETHAL KUMAR K.R., son of Sri. Raghunandan K., is desirous to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my Office, situated at DOOR No. 2765/1A D13/A1, "KEYANS", 5th MAIN ROAD, V.V. PURAM (V.V. MOHALLA), MYSORE – 570 002, within 10 (Ten) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Residential Property bearing Site No.38, formed in Survey No.256/1 and 256/2, measuring 3 Acres 18 Guntas, situated at Bogadi Village, Kasaba Hobli, Mysore Taluk with a building thereon, site measuring East to West: 12 Meters and North to South: 9 Meters totally 108 Square Meters and bounded on East: Sy. No.257, West: 9 Meters Road, North: Site No.37 and South: Site No.39.

Sd/- Dhirendra Kumar R. Mehta
Advocate
KEY-ANS LAW SOLUTIONS
Date: 11.07.2022
Place: Mysore

In the Court of V Additional Senior Civil Judge and C.J.M. At Mysuru

O.S.No. 516/2020

Plaintiff: Sri. Shivalingegowda, son of Late Ninganna, aged about 70 years.

2) Smt. Kempamma, wife of Late Chikkaninganna, aged about 78 years.

3) Smt. Jayamma, wife of Kullaiah, aged about 56 years.

All are residing at Kamanakere Hundi Village, Kasaba Hobli. Mysore Taluk, Mysore

Defendants: Dollaiah & Others. D-1. Dollaiah, Son of Late Kullaiah, aged about 67 years, residing at #3216/2, Kyathamaranahalli, Udayagiri, Mysuru.

NOTICE

Whereas the plaintiffs have filed the above said suit against the defendants for the relief of declaration, mandatory injunction with consequential relief of permanent injunction.


You are hereby summoned to appear before the court in person or through a pleader duly instructed and able to answer all material questions relating to the above said suit on 01-08-2022 at 11.00 am. In default of your appearance before the court on the said date before mentioned, the suit will be heard and determined in your absence as ex-parte.

Given under my hand and seal of the court on this the 7th day of July 2022.

By order of the Court
Sd/- Chief Ministerial Officer,
Court of Senior Civil Judge and CJM, Mysuru.

Sri L.N. Venkatesh,
Smt. Vidyalakshmi
Advocate for Plaintiffs, No. 3, Sakamma Building, Old Santhepet, Mysuru-570 001

13ನೇ ವರ್ಷದ ಸವಿನೆನಪು



ನನ್ನ ಪ್ರೀತಿಯ ಮಗನೆ ನೀನು ನಮ್ಮನ್ನಗಲಿ 13 ವರ್ಷ ಕಳೆದರೂ ಸದಾ ನಿನ್ನ ನೆನಪು ನಮ್ಮ ಮನದಲ್ಲಿ ಹಚ್ಚಹಸಿರಾಗಿದೆ.

ಕೆ.ಎಸ್.ಸುನೀಲ್ ಕುಮಾರ್

ಇಂತಿ ದುಃಖತಪ್ತರು : ತಂದೆ : ಕೆ.ಎಸ್.ಕೃಷ್ಣಪ್ಪ K.S.K. ಸೈಕಲ್ ಶಾಪ್ ಮತ್ತು ನಂದಿನಿ ಮಿಲ್ಕ್ ಡೈರಿ ಸರಸ್ವತಿಪುರಂ

ತಾಯಿ: ಯಶೋಧಮ್ಮ, ತಮ್ಮ: ಸಂಜೀವ್, ತಂಗಿ: ಬೃಂಧಾ, ಸೊಸೆ: ಲಾವಣ್ಯ, ಮೊಮ್ಮಕ್ಕಳು ಹಾಗೂ ಸ್ನೇಹಿತರುಗಳು

ಒಂದನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ.

ದುಃಖತಪ್ತರು: ಪತಿ-ಸಿದ್ದಪ್ಪ.ಎಂ, ಮಕ್ಕಳು-ರತ್ನಮ್ಮ, ಶ್ರೀಧರ, ವಿವೇಕ್, ಅನು, ಪ್ರಮೀಳಾ

ಮೀನಾಕ್ಷಿ
ಮರಣ: 12.07.2021

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಇವರು ದಿ. 02.07.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ.12.07.2022 ಮಂಗಳವಾರ ಬೆಳಿಗ್ಗೆ 11.30ಕ್ಕೆ ಸ್ವಗೃಹ #460, ಮಂಚೇಗೌಡನಕೊಪ್ಪಲ್ ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ. ಭೋಜನ: ಮಧ್ಯಾಹ್ನ 12.30ಕ್ಕೆ, ಸ್ಥಳ: ಮಂಚೇಗೌಡನಕೊಪ್ಪಲು ಸಮುದಾಯ ಭವನ.

ಶ್ರೀ ಕಾರ್ತಿಕ್ ಕುಮಾರ್ ಎಂ.ಬಿ

ದುಃಖತಪ್ತರು: ತಾಯಿ ಶ್ರೀಮತಿ ಮೀನಾಕ್ಷಿ, ತಂದೆ ಶ್ರೀ ಬೆಟ್ಟೇಗೌಡ ನಿಂಗಮ್ಮನವರು ಮತ್ತು ಕುಟುಂಬ ವರ್ಗದವರು, ಬಂಧು–ಮಿತ್ರರು ಹಾಗೂ ಮಂಚೇಗೌಡನಕೊಪ್ಪಲಿನ ಸಕಲ ಗ್ರಾಮಸ್ಥರು

7ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಶ್ರೀಮತಿ ಜಯಮ್ಮ ಮಕ್ಕಳು ಲೋಕೇಶ್ ಆರ್, ಮಂಜು ಆರ್, ಮಹೇಶ್ ಆರ್, ಸೊಸೆಯಂದಿರು ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು ಹಾಗೂ ದುಂಬಾರದೊಡ್ಡಲನ ಗ್ರಾಮಸ್ಥರು

ರಂಗಪ್ಪ.ಕೆ
ಮಾಜಿ ಗ್ರಾ.ಪಂ. ಸದಸ್ಯರು, ಹೆಬ್ಬಾಳ್

VAIKUNTA SAMARADHANE



Dr.k.Arun kumar
Who left for his heavenly abode on 30/06/2022

Vaikunta Samaradhane will be held on 13.07.2022 on Wednesday from 10.00AM to 12.00PM at our house 1367, 8th cross, Sathagalli B Zone, Mysuru 570019.

Lunch will be served starting 12.00 PM
Contact for direction : 6362062566, 9448628819

GRIEF STRICKEN FAMILY:
Anantha Shankar A & Katrina Ang, Ajay A, Girija S, Srinivas K & Family, Venkatesh K & Family, Indira K, Srinath B.V.

Mysore Diocesan Educational Society ®

St. Joseph's College for Women

CA-01, 1st Stage, Op. VTU, Mysuru, Sathagalli, Mysuru-570 029. Ph: 0821-2972060, 8277020260.
Email: sjcwcollege2016@gmail.com

ಸಂತ ಜೋಸೆಫರ ಮಹಿಳಾ ಪದವಿ ಕಾಲೇಜಿಗೆ ದಾಖಲಾತಿ

ಮೈಸೂರು: ಜಿಲ್ಲೆಯ ಸಾತಗಳ್ಳಿ / ರಮ್ಮನಹಳ್ಳಿಯ ಹೆಸರಾಂತ ಕಾಲೇಜುಗಳಲ್ಲಿ ಒಂದಾಗಿರುವ ಮೈಸೂರಿನ ಸಂತ ಜೋಸೆಫರ ಮಹಿಳಾ ಪದವಿ ಕಾಲೇಜಿಗೆ ಈ ಶೈಕ್ಷಣಿಕ 2022 ಸಾಲಿನ ಹಲವು ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ಪ್ರಾರಂಭವಾಗಿದೆ. ಈ ನಮ್ಮ ಕಾಲೇಜಿನಲ್ಲಿ ಬಿ.ಕಾಂ, ಬಿ.ಬಿ.ಎ, ಬಿ.ಸಿ.ಎ, ಬಿ.ಎಸ್.ಸಿ ಹಾಗೂ ಬಿ.ಎ ವಿಭಾಗಗಳಿದ್ದು ಈಗಾಗಲೇ ವಿದ್ಯಾರ್ಥಿಗಳು ಪ್ರವೇಶಾತಿಯನ್ನು ಪಡೆದುಕೊಳ್ಳುತ್ತಿದ್ದು ಹಾಗೂ ಇದೇ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಪಡೆದ 60% ವಿದ್ಯಾರ್ಥಿಗಳು ಉತ್ತಮ ಉದ್ಯೋಗದಲ್ಲಿ ಹಲವಾರು ಕಡೆ ಕಾರ್ಯನಿರ್ವಹಿಸುತ್ತಿದ್ದಾರೆ. ಹಾಗಾಗಿ ನಿಗಧಿತ ಸೀಟುಗಳು ಮಾತ್ರ ಲಭ್ಯವಿರುವ ಕಾರಣ ಕೂಡಲೇ ದಾಖಲಾತಿಯನ್ನು ಮಾಡಿಕೊಳ್ಳುವುದಾಗಿ ಕಾಲೇಜಿನ ಆಡಳಿತ ಮಂಡಳಿ ಈ ಮೂಲಕ ತಿಳಿಸಿದೆ.

ಕಾಲೇಜಿಗೆ ದಾಖಲಾಗಲು July 15th Through Online Registration in UUCMS ಅಂತಿಮ ದಿನಾಂಕವಾಗಿದೆ. ನಮ್ಮ ಕಾಲೇಜಿನಲ್ಲಿ ನುರಿತ ಉಪನ್ಯಾಸಕರು, ಉತ್ತಮ ಫಲಿತಾಂಶ, ಸುಸಜ್ಜಿತವಾದ ಕೊಠಡಿಗಳು, ಗ್ರಂಥಾಲಯ, ಕಂಪ್ಯೂಟರ್ ಲ್ಯಾಬ್, ವಿಜ್ಞಾನಕ್ಕೆ ಸಂಬಂಧಪಟ್ಟ ಉತ್ತಮವಾದ ಲ್ಯಾಬ್ ಮತ್ತು ಕ್ರೀಡೆ ಮುಂತಾದ ಸೌಲಭ್ಯಗಳಿದ್ದು ಕಾಲೇಜಿನ ವೇಳೆಯಲ್ಲಿ ವಿದ್ಯಾರ್ಥಿಗಳು ಆಗಮಿಸಿ ದಾಖಲಾತಿಯನ್ನು ಪಡೆದುಕೊಳ್ಳುವಂತೆ ಮೈಸೂರು ಡಯೋಸಿಸನ್ ಎಜುಕೇಷನಲ್ ಸೊಸೈಟಿಗೆ ಒಳಪಡುವ ಸಂತ ಜೋಸೆಫರ ಮಹಿಳಾ ಪದವಿ ಕಾಲೇಜು ಸಾತಗಳ್ಳಿ ವಿದ್ಯಾಸಂಸ್ಥೆಯ ವ್ಯವಸ್ಥಾಪಕರು ಈ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Sd/- Principal
St. Joseph's College for Women
Sathagalli (Opp. VTU), Mysuru-570 019

